# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 10 ಸೋಮವಾರ 2025

ಸಂಪುಟ: 45 | ಸಂಚಿಕೆ: 320 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ಐಸಿಸಿ ಚಾಂಪಿಯನ್ಸ್ ಟ್ರೋಫಿ–2025

# ಭಾರತಕ್ಕೆ ಚಾಂಪಿಯನ್ಸ್ ಕಿರೀಟ

- ನ್ಯೂಜಿಲೆಂಡ್ ರನ್ನರ್ ಅಪ್
- ಕೋಟ್ಯಾಂತರ ಭಾರತೀಯರ ಕನಸು ನನಸು
- ಮೂರನೇ ಬಾರಿಗೆ ಟ್ರೋಫಿ ಗೆದ್ದ ದಾಖಲೆ
- ಪಂದ್ಯಶ್ರೇಷ್ಠ ರೋಹಿತ್ ಶರ್ಮಾ, ಸರಣಿ ಶ್ರೇಷ್ಠ ರಚಿನ್ ರವೀಂದ್ರ




ಚಾಂಪಿಯನ್ಸ್ ಟ್ರೋಫಿಯೊಂದಿಗೆ ಟೀಂ ಇಂಡಿಯಾ ಆಟಗಾರರ ಸಂಭ್ರಮಾಚರಣೆ.

ದುಬೈ, ಮಾ.9(ಸಂತೋಷ್)– ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ಅನ್ನು ಮಣಿಸುವ ಮೂಲಕ ಭಾರತ ಚಾಂಪಿಯನ್ಸ್ ಟ್ರೋಫಿಯನ್ನು ಮುಡಿಗೇರಿಸಿಕೊಂಡಿತು. ಆ ಮೂಲಕ ಕೋಟ್ಯಾಂತರ ಭಾರತೀಯರ ಕನಸು ನನಸಾಗಿದೆ. ಭಾರತ ಚಾಂಪಿಯನ್ ಆಗಿ ಹೊರ ಹೊಮ್ಮಿದರೇ, ನ್ಯೂಜಿಲೆಂಡ್ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಭಾರೀ ರೋಚಕತೆಯಿಂದ ಕೂಡಿದ್ದ ಪಂದ್ಯದಲ್ಲಿ ಸ್ಪಿನ್ನರ್‌ಗಳ ಬಿಗಿ ದಾಳಿ ಹಾಗೂ ನಾಯಕ ರೋಹಿತ್ ಶರ್ಮಾ ಅವರ ಅರ್ಧಶತಕದ ನೆರವಿನಿಂದ ಭಾರತ ನ್ಯೂಜಿಲೆಂಡ್ ಅನ್ನು 4 ವಿಕೆಟ್‌ಗಳಿಂದ ಸೋಲಿಸುವ ಮೂಲಕ ಮೂರನೇ ಬಾರಿಗೆ (2002, 2013, 2025) ಐಸಿಸಿ ಚಾಂಪಿಯನ್ಸ್ ಟ್ರೋಫಿ ಎತ್ತಿ ಹಿಡಿದಿದೆ ಮತ್ತು 12 ವರ್ಷಗಳ ಬಳಿಕ ಟ್ರೋಫಿ ಗೆದ್ದು ಬೀಗಿದೆ. ಅಲ್ಲದೇ ಅತಿ ಹೆಚ್ಚು ಬಾರಿ ಚಾಂಪಿಯನ್ಸ್ ಟ್ರೋಫಿ ಗೆದ್ದ ತಂಡ ಎಂಬ ಗೌರವಕ್ಕೂ ಭಾರತ ಪಾತ್ರವಾಗಿದೆ. ಜೊತೆಗೆ ನ್ಯೂಜಿಲೆಂಡ್ ವಿರುದ್ಧ 25 ವರ್ಷಗಳ ಹಿಂದಿನ ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೈನಲ್ ಸೋಲಿಗೆ ಸೇಡು ತೀರಿಸಿಕೊಂಡಿದೆ.

ದುಬೈನ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 50 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 251 ರನ್ ಗಳಿಸಿತ್ತು. ಸ್ಪರ್ಧಾತ್ಮಕ ಮೊತ್ತದ ಗುರಿ ಬೆನ್ನತ್ತಿದ ಭಾರತ 49 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 254 ರನ್ ಗಳಿಸಿ ಗೆಲುವು ಸಾಧಿಸಿತು. ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯ ಕ್ಷಣ ಕ್ಷಣಕ್ಕೂ ಕುತೂಹಲದ ಜೊತೆಗೆ ಅಭಿಮಾನಿಗಳಲ್ಲಿ ಆತಂಕ ಹೆಚ್ಚಿಸಿತ್ತು. ರೋಹಿತ್ ಶರ್ಮಾ ಅಬ್ಬರದ ನಡುವೆಯೂ ದಿಢೀರ್ ವಿಕೆಟ್ ಪತನ ಪಂದ್ಯದ ಗತಿ ಬದಲಿಸಿದ್ದು ಸುಳ್ಳಲ್ಲ. ಆದರೆ ಸತತ ಹೋರಾಟ ಟೀಂ ಇಂಡಿಯಾ ಕೈ ಹಿಡಿಯಿತು.

**ರೋಹಿತ್– ಶುಭಮನ್ ಶತಕದ ಜೊತೆಯಾಟ:** ಭಾರತದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ರೋಹಿತ್ ಶರ್ಮಾ, ಶುಭಮನ್ ಗಿಲ್ ಮೊದಲ ವಿಕೆಟ್‌ಗೆ 105 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಈ ಮೂಲಕ ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯದಲ್ಲಿ ಶತಕದ ಜೊತೆಯಾಟವಾಡಿದ ದಾಖಲೆಗೂ ರೋಹಿತ್, ಗಿಲ್ ಪಾತ್ರರಾದರು. ಈ ವೇಳೆ 50 ಎಸೆತಗಳಲ್ಲಿ 1 ಸಿಕ್ಸರ್ ಒಳಗೊಂಡ 31 ರನ್ ಗಳಿಸಿದ್ದ ಗಿಲ್ ಗ್ಲೆನ್ ಫಿಲಿಪ್ ಅವರಿಗೆ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ವಿರಾಟ್ ಕೊಹ್ಲಿ 1 ರನ್ ಗಳಿಸಿ ಮೈಕಲ್ ಬ್ರೆಸ್‌ವೆಲ್‌ಗೆ ವಿಕೆಟ್ ಒಪ್ಪಿಸಿ ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿಕೊಂಡರು. ಈ ವೇಳೆ ಅರ್ಧಶತಕ ಸಿಡಿಸಿ ಉತ್ತಮವಾಗಿ ಆಡುತ್ತಿದ್ದ ನಾಯಕ ರೋಹಿತ್ ಶರ್ಮಾ ಭಾರೀ ಹೊಡತಕ್ಕೆ ಮುಂದಾಗಿ ರಚಿನ್ ರವೀಂದ್ರ ಅವರಿಗೆ ವಿಕೆಟ್ ಒಪ್ಪಿಸಿದರು. ಈ ವೇಳೆ 83 ಎಸೆತಗಳಲ್ಲಿ 3 ಸಿಕ್ಸರ್, 7 ಬೌಂಡರಿ ಒಳಗೊಂಡ 76 ರನ್ ಗಳಿಸಿದ್ದರು.

**ಇನ್ನಿಂಗ್ಸ್ ಕಟ್ಟಿದ ಶ್ರೇಯಸ್:** 26.1 ಓವರ್‌ಗಳಲ್ಲಿ 122 ರನ್‌ಗಳಿಗೆ ಭಾರತ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಶ್ರೇಯಸ್ ಅಯ್ಯರ್ ಉತ್ತಮ ಇನ್ನಿಂಗ್ಸ್ ಕಟ್ಟುವಲ್ಲಿ ಯಶಸ್ವಿಯಾದರು. ಅಕ್ಷರ್ ಪಟೇಲ್ ಜೊತೆಗೂಡಿದ ಅಯ್ಯರ್ 4ನೇ ವಿಕೆಟ್‌ಗೆ 61 ರನ್‌ಗಳ ಜೊತೆ ಯಾಟವಾಡುವ ಮೂಲಕ ತಂಡವನ್ನು ಸಂಕಷ್ಟದಿಂದ ಪಾರು ಮಾಡಿದರು.

■6ನೇ ಪುಟಕ್ಕೆ

## ಮುಗಿಲು ಮುಟ್ಟಿದ ಸಂಭ್ರಮಾಚರಣೆ

ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ಮಣಿಸಿ ಭಾರತ 12 ವರ್ಷಗಳ ಬಳಿಕ 3ನೇ ಬಾರಿಗೆ ಚಾಂಪಿಯನ್ಸ್ ಟ್ರೋಫಿ ತನ್ನದಾಗಿಸಿಕೊಳ್ಳುತ್ತಿದ್ದಂತೆಯೇ ದೇಶಾದ್ಯಂತ ಕ್ರಿಕೆಟ್ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು. ರಾಷ್ಟ್ರ ರಾಜಧಾನಿ ನವದೆಹಲಿ, ಮುಂಬೈ, ಮೈಸೂರು, ಬೆಂಗಳೂರು, ಕೋಲ್ಕತ್ತಾ ಸೇರಿದಂತೆ ರಾಷ್ಟ್ರದ ವಿವಿಧ ಭಾಗಗಳಲ್ಲಿ ಕ್ರಿಕೆಟ್ ಅಭಿಮಾನಿಗಳು ತ್ರಿವರ್ಣ ಧ್ವಜ ಹಿಡಿದು ರಸ್ತೆಗಿಳಿದು, ಟೀಂ ಇಂಡಿಯಾ ಪರ ಘೋಷಣೆ ಕೂಗುವ ಮೂಲಕ ಸಂಭ್ರಮಿಸಿದರು. ಹರ್ಷೋದ್ಗಾರಗಳೊಂದಿಗೆ ಪಟಾಕಿ ಸಿಡಿಸಿ, ಕುಣಿದು ಕುಪ್ಪಳಿಸಿದರು. ಕೆಲವೆಡೆ ಸಿಹಿ ಹಂಚಿ ಸಂಭ್ರಮಪಟ್ಟರು.





## ಹಳೇ ಕಟ್ಟಡ ಕುಸಿದು ಇಬ್ಬರು ಸಾವು

### ಮೂವರು ಮಹಿಳೆಯರ ಸ್ಥಿತಿ ಗಂಭೀರ



ಬೇಲೂರು, ಮಾ.9– ಹಾಸನ ಜಿಲ್ಲೆಯ ಬೇಲೂರು ಪಟ್ಟಣದಲ್ಲಿ ಪಾಳುಬಿದ್ದ ಕಟ್ಟಡ ಕುಸಿದುಬಿದ್ದು ಇಬ್ಬರು ಸಾವನ್ನಪ್ಪಿ, ಮೂವರು ಗಂಭೀರವಾಗಿ ಗಾಯ ಗೊಂಡ ಘಟನೆ ಭಾನುವಾರ ಮಧ್ಯಾಹ್ನ ಸಂಭವಿಸಿದೆ.

ಬೇಲೂರಿನ ನಜೀರ್ ಪಾಷಾ (55) ಹಾಗೂ ಅಮರನಾಥ್(42) ಮೃತಪಟ್ಟಿದ್ದು, ಬೇಲೂರಿನ ಹೊಸನಗರದ ಜ್ಯೋತಿ (40), ಜಾವಗಲ್‌ನ ಶಿಲ್ಪ (32) ಮತ್ತು ಕೊರಟಗೆರೆಯ ನೀಲಮ್ಮ (60) ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಜ್ಯೋತಿ ಮತ್ತು ನೀಲಮ್ಮ ಅವರು ಕುಸಿದು ಬಿದ್ದ ಅಂಗಡಿ ಮುಂದೆ ಹಣ್ಣು, ಕಾಯಿ, ಹೂವು ಮಾರಾಟ ಮಾಡುತ್ತಿದ್ದವರಾಗಿದ್ದು, ನಜೀರ್ ಪಾಷಾ, ಅಮರ್ ನಾಥ್ ಮತ್ತು ಶಿಲ್ಪ ದಾರಿಹೋಕರಾಗಿದ್ದರು ಎಂದು

■6ನೇ ಪುಟಕ್ಕೆ

## ಉಪರಾಷ್ಟ್ರಪತಿ ಜಗದೀಪ್ ಧನ್ಕರ್ ಆಸ್ಪತ್ರೆಗೆ ದಾಖಲು



ನವದೆಹಲಿ, ಮಾ.9– ಭಾರತದ ಉಪ ರಾಷ್ಟ್ರಪತಿ ಜಗದೀಪ್ ಧನ್ಕರ್ ತೀವ್ರ ಅಸ್ವಸ್ಥಗೊಂಡು ಆಸ್ಪತ್ರೆ ದಾಖಲಾಗಿದ್ದಾರೆ. ಧನ್ಕರ್ ಇಂದು ಮುಂಜಾನೆ ಎದೆ ನೋವಿನಿಂದ ಬಳಲಿದ್ದಾರೆ. ಇದೇ ವೇಳೆ ಉ ಸಿ ರಾ ಟ ದ' ಸಮಸ್ಯೆಯೂ ಎದುರಾಗಿದೆ. ಜಗದೀಪ್ ಧನ್ಕರ್ ಆರೋಗ್ಯ ಕ್ಷೀಣಿಸುತ್ತಿದ್ದಂತೆ ತಕ್ಷಣವೇ ಅವರನ್ನು ದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಏಮ್ಸ್

■6ನೇ ಪುಟಕ್ಕೆ

## ಮೈಸೂರು ರೈಲ್ವೆ ನಿಲ್ದಾಣಕ್ಕೆ ಹುಸಿ ಬಾಂಬ್ ಬೆದರಿಕೆ: ಆತಂಕ ನಿರ್ಮಾಣ

- ಆರ್‌ಪಿಎಫ್‌ನಿಂದ ತೀವ್ರ ತಪಾಸಣೆ
- ಅನಾಮಧೇಯ ಕರೆ ಜಾಡು ಪತ್ತೆ ಕ್ರಮ

ಮೈಸೂರು, ಮಾ.9(ಎಂಟಿವೈ)– ಮೈಸೂರು ರೈಲ್ವೆ ನಿಲ್ದಾಣದಲ್ಲಿ ಬಾಂಬ್ ಇಟ್ಟಿರುವುದಾಗಿ ಅನಾಮದೇಯ ಕರೆ ಬಂದ ಹಿನ್ನೆಲೆಯಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಕೂಡಲೇ ಆರ್‌ಪಿಎಫ್ ಹಾಗೂ ಬಾಂಬ್ ನಿಷ್ಕ್ರಿಯ ದಳ ರೈಲ್ವೆ ನಿಲ್ದಾಣದಲ್ಲಿ ತೀವ್ರ ತಪಾಸಣೆ ನಡೆಸಿದ ಬಳಿಕ ಆತಂಕ ನಿವಾರಣೆಯಾಯಿತು.

ವಾರಾಂತ್ಯ ರಜೆ ದಿನವಾದ ಭಾನುವಾರ ಮೈಸೂರು ರೈಲ್ವೆ ನಿಲ್ದಾಣದಿಂದ ವಿವಿಧೆಡೆ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವ ಸಂದರ್ಭದಲ್ಲಿಯೇ ಬೆಳಗ್ಗೆ ರೈಲ್ವೆ ಪೊಲೀಸ್ ಠಾಣೆಗೆ ಅನಾಮದೇಯ ಕರೆಯೊಂದು ಬಂದಿತ್ತು. ವ್ಯಕ್ತಿಯೊಬ್ಬ ಕರೆ ಮಾಡಿ ಮೈಸೂರು ರೈಲ್ವೆ ನಿಲ್ದಾಣ

■6ನೇ ಪುಟಕ್ಕೆ



ಮೈಸೂರು ರೈಲ್ವೆ ನಿಲ್ದಾಣದಲ್ಲಿ ಹುಸಿ ಬಾಂಬ್ ಬೆದರಿಕೆ ಕರೆ ಬಂದ ಹಿನ್ನೆಲೆಯಲ್ಲಿ ರೈಲ್ವೆ ಪೊಲೀಸರು ತಪಾಸಣೆ ನಡೆಸುತ್ತಿರುವುದು.

# ಮೈಸೂರಲ್ಲಿ 'ನಮ್ಮ ಪೊಲೀಸ್– ನಮ್ಮ ಹೆಮ್ಮೆ' ಮ್ಯಾರಥಾನ್

### ಮೂವರು ವಿದೇಶಿಯರು ಸೇರಿ 9 ಸಾವಿರ ಮಂದಿ ಭಾಗಿ



ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿರುವ ಅಪಾರ ಸಂಖ್ಯೆ ಓಟಗಾರರನ್ನು ಕಾಣಬಹುದು.




ಮೈಸೂರು ಅರಮನೆ ಆವರಣದಲ್ಲಿ ನಡೆದ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಮ್ಯಾರಥಾನ್‌ಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಡಿಐಪಿ ಡಾ.ಬೋರಲಿಂಗಯ್ಯ, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್ಪಿ ಡಾ.ವಿಷ್ಣುವರ್ಧನ್ ಚಾಲನೆ ನೀಡಿದರು.

ಮೈಸೂರು, ಮಾ.9(ಎಂಟಿವೈ)– 'ನಮ್ಮ ಪೊಲೀಸ್– ನಮ್ಮ ಹೆಮ್ಮೆ' ಘೋಷಣೆಯೊಂದಿಗೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಪೊಲೀಸ್ ಇಲಾಖೆ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ಅಪಾರ ಸಂಖ್ಯೆಯಲ್ಲಿ ಓಟಗಾರರು ಪಾಲ್ಗೊಂಡು ಗಮನ ಸೆಳೆದರು.

ಮೈಸೂರು ಅರಮನೆ ಆವರಣದಲ್ಲಿ ಭಾನುವಾರ ಬೆಳಗ್ಗೆ ಪೊಲೀಸ್ ಇಲಾಖೆ ಆಯೋಜಿಸಿದ್ದ 'ಕರ್ನಾಟಕ ರಾಜ್ಯ ಪೊಲೀಸ್ ರನ್–2025'ಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ದಕ್ಷಿಣ ವಲಯದ ಡಿಐಜಿ ಡಾ.ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಎಸ್ಪಿ ಡಾ.ವಿಷ್ಣುವರ್ಧನ ಹಾಗೂ ಇನ್ನಿತರರು ಹಸಿರು ನಿಶಾನೆ ಪ್ರದರ್ಶಿಸಿ ಚಾಲನೆ ನೀಡಿದರು. ಸಾರ್ವಜನಿಕರು ಹಾಗೂ ಪೊಲೀಸರಿಗೆ ಪ್ರತ್ಯೇಕ ವಿಭಾಗದಲ್ಲಿ 5 ಕಿಮಿ ಮತ್ತು 10 ಕಿಮಿ ಮ್ಯಾರಥಾನ್‌ನಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು, ವಿವಿಧ ಕ್ರೀಡಾ ಕ್ಲಬ್ ಸದಸ್ಯರು, ಕ್ರೀಡಾಪಟುಗಳು, ಸಾರ್ವಜನಿಕರು, ಮಹಿಳೆಯರು, ವಿದೇಶಿಗರು, ಮೈಸೂರು ನಗರ ಹಾಗೂ ಜಿಲ್ಲಾ ಪೊಲೀಸರು ಸೇರಿದಂತೆ 9 ಸಾವಿರ ಓಟಗಾರರು ವಿವಿಧ ಬಣ್ಣದ ಟಿ–ಶರ್ಟ್ ಧರಿಸಿ ಮ್ಯಾರಥಾನ್‌ನಲ್ಲಿ ಪಾಲ್ಗೊಂಡು ಕ್ರೀಡಾಸ್ಫೂರ್ತಿ ಪ್ರದರ್ಶಿಸಿ, ನಮ್ಮ ಪೊಲೀಸ್ ನಮ್ಮ ಹೆಮ್ಮೆ ಸಂದೇಶ ಸಾರಿದರು.

**ಸಾರ್ವಜನಿಕ ವಿಭಾಗದ 10 ಕಿಮೀ ಮ್ಯಾರಥಾನ್ ವಿಜೇತರು:** ಸಾರ್ವಜನಿಕ ವಿಭಾಗದ 10 ಕಿಮಿ ಮ್ಯಾರಥಾನ್‌ನಲ್ಲಿ ಗುರಿ ತಲುಪಿದ ಮೊದಲ 17 ಸಾರ್ವಜನಿಕರಿಗೆ ಬಹುಮಾನ ವಿತರಣೆ ಮಾಡಲಾಗಿದೆ. ಸುಮೀತ್ ಪಾಲ್ ಪ್ರಥಮ, ವೈ.ಎಸ್.ದೀಕ್ಷಿತ್ ದ್ವಿತೀಯ, ಕೆ.ತನುಜ್‌ಕುಮಾರ್ ತೃತೀಯ ಬಹುಮಾನ ಪಡೆದರು. ಉಳಿಕೆ 14 ಮಂದಿಗೆ ಮೆಡಲ್ ಅನ್ನು ವಿತರಣೆ ಮಾಡಲಾಯಿತು. ಮ್ಯಾರಥಾನ್‌ನಲ್ಲಿ ಫ್ರಾನ್ಸ್ ದೇಶದ ಮೂವರು ಭಾಗವಹಿಸಿದ್ದು, ಅವರಲ್ಲಿ 17ನೇ ಸ್ಥಾನದಲ್ಲಿ ಗುರಿ ತಲುಪಿದ ಕೋಟ್ಟಿನ್ ಎಂಬ ಫ್ರಾನ್ಸ್ ಮಹಿಳೆಗೆ ಬಹುಮಾನ ವಿತರಿಸಲಾಯಿತು.

**5 ಕಿ.ಮೀ. ಓಟ:** ಸಾರ್ವಜನಿಕರ ವಿಭಾಗದ 5 ಕಿಮೀ ಓಟದ ಸ್ಪರ್ಧೆಯಲ್ಲಿ 9 ಸಾರ್ವಜನಿಕ ಸ್ಪರ್ಧಿಗಳಿಗೆ ಬಹುಮಾನ ನೀಡಲಾಯಿತು. ಸುಮಂತ್ ಪ್ರಥಮ, ಎನ್.ದೊರೆಸ್ವಾಮಿ ದ್ವಿತೀಯ, ಬಿ.ಮಹದೇವಸ್ವಾಮಿ ತೃತೀಯ ಬಹುಮಾನ ಮೆಡಲ್ ಮತ್ತು ಪಾರಿತೋಷಕವನ್ನು ವಿತರಿಸಲಾಯಿತು. ಉಳಿದ 6 ಮಂದಿಗೆ ಮೆಡಲ್‌ನ್ನು ವಿತರಿಸಲಾಯಿತು.

**ಪೊಲೀಸರ ವಿಭಾಗ:** ಪೊಲೀಸ್ ವಿಭಾಗದಲ್ಲಿ 10 ಕಿ.ಮೀ ಮ್ಯಾರಾಥಾನ್‌ನಲ್ಲಿ 16 ಪೊಲೀಸ್ ಸ್ಪರ್ಧಿಗಳಿಗೆ ಬಹುಮಾನ ವಿತರಿಸಲಾಯಿತು. ಅಮರ್ ಮುಲ್ಲಾ ಪ್ರಥಮ, ಪ್ರಭು ಜಮಖಂಡಿ ದ್ವಿತೀಯ, ಎನ್.ಗೋಪಾಲ್ ತೃತೀಯ ಬಹುಮಾನ, ಪಾರಿತೋಷಕ ಪಡೆದರು. ಉಳಿದ 13 ಮಂದಿಗೆ ಮೆಡಲ್‌ನ್ನು ವಿತರಿಸಲಾಯಿತು.

5 ಕಿ.ಮೀ. ಓಟದಲ್ಲಿ 8 ಪೊಲೀಸ್ ಸ್ಪರ್ಧಿಗಳು ಬಹುಮಾನ ಪಡೆದರು. ಎಂ.ಎಸ್.ರವೀಶ್ ಪ್ರಥಮ, ಮಲ್ಲಪ್ಪ ದ್ವಿತೀಯ,ನಾಗೇಂದ್ರ ತೃತೀಯ ಬಹುಮಾನ, ಮೆಡಲ್ ಮತ್ತು ಪಾರಿತೋಷಕ ಗಳಿಸಿದರು. ಉಳಿಕೆ 5 ಮಂದಿಗೆ ಮೆಡಲ್‌ನ್ನು ವಿತರಣೆ ಮಾಡಲಾಯಿತು.

**ಓಟದ ಮಾರ್ಗ:** 5 ಕಿ.ಮೀ. ಓಟವು ಅರಮನೆಯಿಂದ ಪ್ರಾರಂಭಗೊಂಡ ಕೆ.ಆರ್.ವೃತ್ತ, ಡಿ.ದೇವರಾಜ ಅರಸು ರಸ್ತೆ ಜೆಎಲ್‌ಬಿ ರಸ್ತೆ ಜಂಕ್ಷನ್, ಮುಡಾ ಕಚೇರಿ, ರಾಮಸ್ವಾಮಿ ವೃತ್ತ, ತಾತಯ್ಯ ವೃತ್ತ, ಗನ್‌ಹೌಸ್ ವೃತ್ತ, ಹಾರ್ಡಿಂಜ್ ವೃತ್ತ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಮುಕ್ತಾಯಗೊಂಡಿತು.

■6ನೇ ಪುಟಕ್ಕೆ

## ಅಮಿತ್ ಶಾ ಬುಲಾವ್: ಮತ್ತೆ ಶಾಸಕ ಯತ್ನಾಳ್ ಬಣ ದೆಹಲಿಗೆ



ಯತ್ನಾಳ್

ಬೆಂಗಳೂರು, ಮಾ.9– ರಾಜ್ಯ ಬಿಜೆಪಿಯಲ್ಲಿ ಬಣ ರಾಜಕೀಯ ಮುಂದುವರೆದಿದ್ದು, ಮಾಜಿ ಸಿಎಂ ಬಿಎಸ್.ಯಡಿಯೂರಪ್ಪ ಮತ್ತು ಪುತ್ರ ಬಿ.ವೈ. ವಿಜಯೇಂದ್ರ ವಿರುದ್ಧ ವಿರುದ್ಧ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬಣ ಸೆಡ್ಡು ಹೊಡೆದಿದೆ. ಏನಾದರೂ ಸರಿ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಿಂದ ಬಿ.ವೈ.ವಿಜಯೇಂದ್ರ ಅವರನ್ನ ಕೆಳಗಿಳಿಸಿ ಬೇರೆಯವರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಲು ಯತ್ನಿಸುತ್ತಿದೆ. ಈ ಮಧ್ಯೆ ಕೇಂದ್ರ ಸಚಿವ ಅಮಿತ್ ಶಾ ಬುಲಾವ್ ಬೆನ್ನಲ್ಲೇ ಮಂಗಳವಾರ ಶಾಸಕ ಯತ್ನಾಳ್ ಬಣ ದೆಹಲಿಗೆ ಪ್ರಯಾಣ ಬೆಳೆಸಿ ಹೈಕಮಾಂಡ್ ಭೇಟಿಯಾಗಲಿದೆ ಎಂಬ ಮಾಹಿತಿ ಲಭ್ಯವಾಗಿದೆ. ಬೆಂಗಳೂರಿಗೆ ಆಗಮಿಸಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಜೊತೆ ಅರವಿಂದ ಲಿಂಬಾವಳಿ ಚರ್ಚೆ ನಡೆಸಿದ್ದರು.

ಮೈಸೂರು ಮಿತ್ರ
ಸೋಮವಾರ 10 ಮಾರ್ಚ್ 2025

## ಅಭಿವೃದ್ಧಿಗೆ ಒತ್ತು: ತೆರಿಗೆ ಸುಧಾರಣೆಗಾಗಿ
# ಗ್ರಾಮ ಪಂಚಾಯತಿಗಳ ದತ್ತು



**ಬೆಂಗಳೂರು:** ಪಂಚಾಯತ್‌ಗಳ ತೆರಿಗೆ ಹಾಗೂ ಗುಣವಮಟ್ಟ ಸುಧಾರಿಸಲು ಮತ್ತು ಅವುಗಳನ್ನು ಒಟ್ಟಾರೆ ಅಭಿವೃದ್ಧಿಂಯುತ್ತ ಕೊಂಡೊಂಯ್ಯಲು ಮೊದಲ ಬಾರಿಗೆ ರಾಜ್ಯ ಸರ್ಕಾರವು RDPR ಅಧಿಕಾರಿಗಳು ಪಂಚಾಯತ್ ಅನ್ನು ದತ್ತು ತೆಗೆದುಕೊಳ್ಳುವ ಪರಿಕಲ್ಪನೆಯನ್ನು ಪರಿಚಯಿಸಿದೆ.

ಕರ್ನಾಟಕದಲ್ಲಿ ಸುಮಾರು 6,000 ಗ್ರಾಮ ಪಂಚಾಯತ್‌ಗಳಿದ್ದು, ನಿರಂತರ ಒತ್ತಡದ ನಂತರ, ಈ ವರ್ಷ ರಾಜ್ಯಾದ್ಯಂತ ಗ್ರಾಮ ಪಂಚಾಯತಿಗಳು 1,200 ಕೋಟಿ ರೂ.ಗಳ ತೆರಿಗೆಯನ್ನು ಉತ್ಪಾದಿಸಿವೆ. ಇಲ್ಲದಿದ್ದರೆ ಅದು ಪ್ರತಿ ವರ್ಷ ಇದರ ಅರ್ಧದಷ್ಟು ಇರುತ್ತಿತ್ತು ಎಂದು RDPR ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಅಧಿಕಾರಿಗಳು ಮತ್ತು ಸದಸ್ಯರ ನಿರಂತರ ಒತ್ತಡದಿಂದಾಗಿ ಇದು ಸಾಧ್ಯವಾಯಿತು. ಈಗ ಒಂದು ಪಂಚಾಯತ್ ಅನ್ನು ದತ್ತು ತೆಗೆದುಕೊಂಡು ಅವುಗಳನ್ನು ಸುಧಾರಿಸಲು ಅಧಿಕಾರಿಗಳ ಸಹಾಯ ಪಡೆಯುವುದು ಯೋಜನೆಯ ಉದ್ದೇಶ ಎಂದಿದ್ದಾರೆ.

ಪ್ರತಿ ಪಂಚಾಯತಿಗೂ ಪ್ರತ್ಯೇಕ ಮಾನದಂಡಗಳಿವೆ. ತೆರಿಗೆ ಸಂಗ್ರಹ ಸುಧಾರಿಸುವುದು, MNREGA, ರಸ್ತೆಗಳು, ಆರೋಗ್ಯ,

**ಸರ್ಕಾರದ ಹೊಸ ಯೋಜನೆ**

ಶಾಲೆಗಳು, 15ನೇ ಹಣಕಾಸು ಆಯೋಗದ ಅನುಷ್ಠಾನ, ಶಿಕ್ಷಣ, ಸಾಮಾಜಿಕ ಲೆಕ್ಕಪರಿಶೋಧನೆ ಸೇರಿದಂತೆ ಸುಮಾರು 100 ಅಂಶಗಳಿರುತ್ತವೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೇಡರ್‌ಗಿಂತ ಮೇಲಿನ ಅಧಿಕಾರಿಗಳನ್ನು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ಬಳಿಗೆ ಕರೆದು ಪಂಚಾಯತ್ ಅನ್ನು ದತ್ತು ತೆಗೆದುಕೊಂಡು ಅಂಶಗಳನ್ನು ಸುಧಾರಿಸಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ಹೇಳಿದರು.

ಹಿಂದುಳಿದ ಪಂಚಾಯತ್‌ಗಳನ್ನು ಸರಾಸರಿ, ಸರಾಸರಿಯಿಂದ ಉತ್ತಮ ಮತ್ತು ಉತ್ತಮದಿಂದ ಉತ್ತಮಕ್ಕೆ ಮೇಲ್ದರ್ಜೆಗೇರಿಸುವ ಪ್ರಯತ್ನ ಇದಾಗಿದೆ ಎಂದು ಖರ್ಗೆ ಹೇಳಿದರು. ದತ್ತು ಎಂದರೆ ಶಾಲೆ ಅಥವಾ ಹಳ್ಳಿಯನ್ನು ದತ್ತು ಪಡೆದಂತೆ ಅಲ್ಲ, ಆದರೆ ನಿಯತಾಂಕಗಳನ್ನು ಸುಧಾರಿಸುವುದು ಅಧಿಕಾರಿಯ ಜವಾಬ್ದಾರಿಯಾಗಿದೆ. ಅಧಿಕಾರಿಗಳು ತೆರಿಗೆ ಸಂಗ್ರಹದ ಮೇಲ್ವಿಚಾರಣೆ ಮಾಡಬಹುದು. ಮೂಲಸೌಕರ್ಯ, ಶಾಲೆಗಳು, ಆಸ್ಪತ್ರೆಗಳನ್ನು ನಿರ್ಮಿಸಬಹುದು, ರಸ್ತೆಗಳನ್ನು ಸುಧಾರಿಸಬಹುದು ಅದಕ್ಕೂ ಮೀರಿ ಹೆಚ್ಚಿನ ಜವಾಬ್ದಾರಿ ತೆಗೆದು ಕೊಂಡು ಗ್ರಾಮ ಪಂಚಾಯಿತಿಯನ್ನು ಸುಧಾರಿಸಬಹುದು ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

## ಮಾ.12, ರೇಣುಕಾಚಾರ್ಯ ಜಯಂತಿ



ಮೈಸೂರು, ಮಾ.9(ಜಿಎ)–ರೇಣುಕಾಚಾರ್ಯ ಜಯಂತಿ ಆಚರಣಾ ಸಮಿತಿ ಹಾಗೂ ಬಸವ ಬಳಗಗಳ ಒಕ್ಕೂಟ, ವೀರಶೈವ ಸಂಘ ಸಂಸ್ಥೆ, ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಾ.12ರಂದು ಕಲಾಮಂದಿರದಲ್ಲಿ ಬೆಳಗ್ಗೆ 11 ಗಂಟೆಗೆ ರೇಣುಕಾಚಾರ್ಯ ಜಯಂತಿ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷ ಹೆಚ್.ಎಸ್.ಪ್ರಸನ್ನಕುಮಾರ್ ಈ ವಿಷಯ ತಿಳಿಸಿ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅರಮನೆ ಜಪದಕಟ್ಟೆ ಮಠದ ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ವಹಿಸುವರು. ಅತಿಥಿಯಾಗಿ ಶಾಸಕ ಟಿ.ಎಸ್. ಶ್ರೀವತ್ಸ, ಭಾಷಣಕಾರರಾಗಿ ಪ್ರೊ.ಆರ್.ಎಂ. ಷಡಕ್ಷರಯ್ಯ, ಹಿರಿಯ ವಕೀಲರಾದ ಓಂ.ಶ್ಯಾಂಭಟ್, ವಿಶ್ವಾರಾಧ್ಯರು ಭಾಗವಹಿಸುವರು ಎಂದರು. ಸಭಾ ಕಾರ್ಯಕ್ರಮಕ್ಕೂ ಮುನ್ನ ನಗರದ ರೇಣುಕಾಚಾರ್ಯರ ದೇವಸ್ಥಾನದಲ್ಲಿ ಬೆಳಗ್ಗೆ 9ರಿಂದ 10ರವರೆಗೆ ರುದ್ರಾಭಿಷೇಕ, ಶಿವಷ್ಟೋತ್ತರ ಮತ್ತು ಮಹಾಮಂಗಳಾರತಿ ನಡೆಯಲಿದೆ. ಮಧ್ಯಾಹ್ನ 1.30ಕ್ಕೆ ಕಲಾಮಂದಿರ ಆವರಣದಲ್ಲಿ ಪ್ರಸಾದ ವಿನಿಯೋಗವಿದೆ. ಸಂಜೆ 6ಕ್ಕೆ ರೇಣುಕಾಚಾರ್ಯರ ದೇವಸ್ಥಾನದಿಂದ ವಿವಿಧ ಕಲಾತಂಡದೊಂದಿಗೆ ಮೆರವಣಿಗೆ ನಡೆಯಲಿದೆ ಎಂದರು. ಗೋಷ್ಠಿಯಲ್ಲಿ ಎಸ್.ಜ್ಞಾನಶಂಕರ್, ಎನ್.ಜಿ. ಗಿರೀಶ್, ಪಾಲಾಕ್ಷ ಉಪಸ್ಥಿತರಿದ್ದರು.

## ಮಾ.11, 12ರಂದು ನೀರು ವ್ಯತ್ಯಯ



ಮೈಸೂರು, ಮಾ.9–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಾಗೂ 3ನೇ ಹಂತ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆಯನ್ನು ಹಮ್ಮಿಕೊಂಡಿರುವುದರಿಂದ ಮಾ.11, 12ರಂದು ನಗರದ ಕೆಲವೆಡೆ ನೀರು ಸರಬರಾಜು ವ್ಯತ್ಯಯವಾಗಲಿದೆ.

ವಾರ್ಡ್ ನಂ.1ರಿಂದ 7, ವಾರ್ಡ್ ನಂ.20, 23, 38 ವಾರ್ಡ್ ನಂ.42ರಿಂದ 45, ವಾರ್ಡ್ ನಂ.47 ಇದಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳು, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ.ಕೊಪ್ಪಲ್, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ಎನ್.ಆರ್. ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಪೂರೈಕೆ ವ್ಯತ್ಯಯವಾಗಲಿದೆ.

## ಕಣ್ಣಿನ ಉಚಿತ ತಪಾಸಣಾ ಶಿಬಿರ



ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆ, ಮೈಸೂರು ರೇಸ್ ಕ್ಲಬ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಜ್ಯೋತಿನಗರದಲ್ಲಿರುವ ನಿರಾಶ್ರಿತರು ಮತ್ತು ನಿರ್ಗತಿಕರ ಪುನರ್ವಸತಿ ಕೇಂದ್ರದಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಶಿಬಿರದಲ್ಲಿ 126 ರೋಗಿಗಳು ತಪಾಸಣೆಗೊಳಗಾದರು. 22 ಮಂದಿಗೆ ಉಚಿತ ಕನ್ನಡಕ ವಿತರಿಸಲಾಯಿತು. 45 ರೋಗಿಗಳಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ನಿರ್ಧರಿಸಲಾಗಿದೆ. ಈ ವೇಳೆ ನಿರಾಶ್ರಿತರ ಪರಿಹಾರ ಕೇಂದ್ರದ ವೈದ್ಯಕೀಯ ಅಧಿಕಾರಿ ಡಾ.ರಮೇಶ್ ಜೇವೂರ್, ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ರಾಹುಲ್‌ದೇವ್, ಅಧ್ಯಕ್ಷ ಜಿ.ವೆಂಕಟೇಶ್, ಟ್ರಸ್ಟಿ ಡಾ.ವೇಣು, ಮ್ಯಾನೇಜಿಂಗ್ ಟ್ರಸ್ಟಿ ಡಾ.ವಿಜಯಕುಮಾರ್ ಉಪಸ್ಥಿತರಿದ್ದರು.

## ಮಾ.12ರಂದು ಬ್ಯಾಂಕಿಂಗ್ ಹುದ್ದೆಗಳ ನೇಮಕಾತಿಗೆ ಪರೀಕ್ಷಾ ತರಬೇತಿ ಶಿಬಿರ

ಮೈಸೂರು, ಮಾ.9–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕರಾಮುವಿ) ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಬ್ಯಾಂಕಿಂಗ್ ಹುದ್ದೆಗಳ ನೇಮಕಾತಿಗೆ ಪರೀಕ್ಷಾ ತರಬೇತಿ ಶಿಬಿರವನ್ನು ಮಾ.12ರಂದು ಬೆಳಗ್ಗೆ 10 ಗಂಟೆಗೆ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಶುಭ ಹಾರೈಸಲಿದ್ದಾರೆ, ಮೈಸೂರು ವೃತ್ತ, ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯಾ ಅಧ್ಯಯನ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದಾರೆ. ಕುಲಸಚಿವ ಪ್ರೊ.ಕೆ.ಬಿ ಪ್ರವೀಣ ಉಪಸ್ಥಿತರಿರಲಿದ್ದಾರೆ ಎಂದು ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾ.12, ಕರ್ನಾಟಕ ಲೋಕಾಯುಕ್ತ: ದೂರು ಸ್ವೀಕಾರ

**ಮೈಸೂರು:** ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗ ಅಧಿಕಾರಿಗಳಿಂದ ಮಾ.12ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಹೆಚ್.ಡಿ.ಕೋಟೆ ತಾಲೂಕಿನ, ಡಾ.ಬಿ.ಆರ್.ಅಂಬೇಡ್ಕರ್ ಸಭಾ ಭವನದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ/ಸರ್ಕಾರಿ ಅಧಿಕಾರಿ/ ನೌಕರರ ವಿರುದ್ಧ ಅಗತ್ಯ ದಾಖಲಾತಿಗಳೊಡನೆ ಸಾರ್ವಜನಿಕರು ದೂರು ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

# ಪೋಷಕರು, ಶಿಕ್ಷಕರ ಉತ್ತೇಜನದಿಂದ ಮಾತ್ರ ಮಕ್ಕಳ ಸಾಧನೆ ಸಾಧ್ಯ

## ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ರವೀಂದ್ರನಾಥ್ ಸಲಹೆ



ಮೈಸೂರು ಜಿಲ್ಲಾ ಉಪ್ಪಾರ ನೌಕರರ ವೃತ್ತಿಪರ ಸಂಘ ಆಯೋಜಿಸಿದ್ದ 29ನೇ ವಾರ್ಷಿಕ ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಮಾ.9(ಬಿಎಲ್‌ಯು)– ಪೋಷಕರು ಹಾಗೂ ಶಿಕ್ಷಕರು ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಉತ್ತೇಜಿಸಿದಾಗ ಅವರು ಸಾಧನೆ ಮಾಡಲು ಸಹಕಾರಿಯಾಗುತ್ತದೆ ಎಂದು ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ರವೀಂದ್ರನಾಥ್ ಸಲಹೆ ನೀಡಿದರು.

ನಗರದ ಕಲಾಮಂದಿರದಲ್ಲಿ ಮೈಸೂರು ಜಿಲ್ಲಾ ಉಪ್ಪಾರ ನೌಕರರ ವೃತ್ತಿಪರ ಸಂಘ ಆಯೋಜಿಸಿದ್ದ 29ನೇ ವಾರ್ಷಿಕ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆ ವಿದ್ಯಾರ್ಥಿಗಳಿಗೆ ಜೀವನದ ಪ್ರಮುಖ ಘಟ್ಟವಾಗಿದೆ. ಈ ಹಿನ್ನೆಲೆ ವಿದ್ಯಾರ್ಥಿಗಳು ಈ ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿ ವ್ಯಾಸಂಗ ಮಾಡಿ ಯಶಸ್ಸು ಗಳಿಸಿದರೆ ಸುಲಭವಾಗಿ ಗುರಿ ಮುಟ್ಟಬಹುದು ಎಂದು ಅಭಿಪ್ರಾಯಪಟ್ಟರು.

ಉಪ್ಪಾರ ಸಮುದಾಯದ ನೌಕರರ ಸಮಸ್ಯೆ ಪರಿಹಾರ ಮಾಡುವುದರ ಜೊತೆಗೆ ಸಮಾಜಮುಖಿ ಕಾರ್ಯಕ್ರಮಗಳನ್ನು ಈ ಸಂಘ ಮಾಡುತ್ತಿದೆ. ಇದೇ ರೀತಿ ಭವಿಷ್ಯದಲ್ಲಿ ಕೂಡ ಸಂಘ ಸಕ್ರಿಯವಾಗಿ ಕಾರ್ಯೋನ್ಮುಖವಾಗಬೇಕು. ಇಷ್ಟೆ ಅಲ್ಲದೆ ಸಮುದಾಯದ ಶ್ರೀಮಂತ ಇತಿಹಾಸವನ್ನು ಈಗಿನ ಯುವ ಸಮೂಹಕ್ಕೆ ತಿಳಿ ಹೇಳಬೇಕು ಎಂದು ಕಿವಿಮಾತು ಹೇಳಿದರು.

ಉಪ್ಪಾರ ಸಮುದಾಯದ ನೌಕರರು ಕೇವಲ ತಮ್ಮ ಕ್ಷೇಮಕ್ಕಾಗಿ ಮಾತ್ರ ಯೋಚಿಸದೆ ಸಮಾಜದ ಅಭಿವೃದ್ಧಿಗೂ ಒಂದಿಷ್ಟು ಸಮಯ ಮೀಸಲಿಡಬೇಕು. ಈ ಮೂಲಕ ತಮ್ಮ ಸೇವಾ ಕಾರ್ಯದ ವ್ಯಾಪ್ತಿ ವಿಸ್ತರಿಸಿಕೊಳ್ಳಬೇಕು ಎಂದು ಹೇಳಿದರು.

ಸ್ವಾತಂತ್ರ್ಯ ಬಂದ ತರುವಾಯ ಡಾ.ಬಿ.ಆರ್.ಅಂಬೇಡ್ಕರ್ ಅವರು ಬರೆದ ಸಂವಿಧಾನದಿಂದ ನಮಗೆಲ್ಲಾ ಶಿಕ್ಷಣ ಪಡೆಯಲು ಸಹಕಾರಿಯಾಗಿದೆ. ನಮ್ಮ ಸಮುದಾಯದ ಶೇ.80ರಷ್ಟು ಮಂದಿ ಉದ್ಯೋಗ ಭದ್ರತೆ ಇಲ್ಲದೆ ದುಡಿಯುತ್ತಿದ್ದಾರೆ. ಇಂತಹ ಸಮಯದಲ್ಲಿ ಈಗ ಸಿಗುತ್ತಿರುವ ಶಿಕ್ಷಣ ಸೌಲಭ್ಯ ನಮಗೆ ದಾರಿದೀಪವಾಗಿದೆ. ಶಿಕ್ಷಣ ಪಡೆದು ನೌಕರಿ ಗಿಟ್ಟಿಸಿದ ತರುವಾಯ ಪ್ರತಿಯೊಬ್ಬರು ತಮ್ಮ ಗುರು, ಹಿರಿಯರನ್ನು ಮರೆಯಬಾರದು. ಈ ಮೂಲಕ ನಮ್ಮ ಹಿಂದಿನ ಸಂಸ್ಕಾರಕ್ಕೆ ಬೆಲೆ ನೀಡಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಡಾ.ಕೆ.ಎಸ್.ರವೀಂದ್ರನಾಥ್ ಅವರಿಗೆ 'ಶ್ರೀ ಭಗೀರಥ ವೈದ್ಯ ವಿಭೂಷಣ ಪ್ರತಿಭಾರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೊತೆಗೆ ಚಾಮರಾಜನಗರ ಜಿಲ್ಲೆ ದೊಡ್ಡಮೋಳೆ ಗ್ರಾಮದ ತಂಬೂರಿ ಶೈಲಿಯ ನೀಲಗಾರ ದೊಡ್ಡಗವಿಬಸಪ್ಪ ಅವರಿಗೆ 'ಶ್ರೀ ಭಗೀರಥ ಕಲಾ ವಿಭೂಷಣ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ನಿವೃತ್ತಿ ಹಾಗೂ ಬಡ್ತಿ ಪಡೆದ ಉಪ್ಪಾರ ಸಮುದಾಯದ ಅಧಿಕಾರಿಗಳು ಹಾಗೂ ನೌಕರರಿಗೆ ಸನ್ಮಾನಿಸಲಾಯಿತು. ಹೊಸದುರ್ಗದ ಭಗೀರಥ ಪೀಠದ ಶ್ರೀ ಡಾ.ಪುರುಷೋತ್ತಮಾನಂದಪುರಿ ಸ್ವಾಮೀಜಿ ಸಾನಿಧ್ಯ ವಹಿಸಿದ್ದ ಸಮಾರಂಭದಲ್ಲಿ ಮಳವಳ್ಳಿ ತಾಲೂಕಿನ ಅಯ್ಯನಸರಗೂರು ಮಠದ ಶ್ರೀ ಮಹದೇವ ಸ್ವಾಮೀಜಿ ಉಪಸ್ಥಿತರಿದ್ದರು. ಶ್ರೀ ಭಗೀರಥ ಶೈಕ್ಷಣಿಕ ಮತ್ತು ಚಾರಿಟಬಲ್ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಪಿ.ಶಿವಶಂಕರ್, ಉದ್ಯಮಿಗಳಾದ ಎಂ.ಎಸ್.ಲೋಕೇಶ್, ಎನ್.ಶ್ರೀಧರ್, ಎ.ಜಿ.ನಾಗರಾಜು, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಉಪ್ಪಾರ ಸಂಘದ ಗೌರವಾಧ್ಯಕ್ಷ ಹನುಮಂತಶೆಟ್ಟಿ, ಕಾರ್ಯಾಧ್ಯಕ್ಷ ಪಿ.ಎಸ್.ವಿಷಕಂಠಯ್ಯ, ಗುತ್ತಿಗೆದಾರ ಗಂಗಯ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯಕುಮಾರ್ ಸೇರಿದಂತೆ ಹಲವರು ವೇದಿಕೆಯಲ್ಲಿ ಆಸೀನರಾಗಿದ್ದರು.

## ಜನೌಷಧಿ ಕೇಂದ್ರಗಳು ಜನೋಪಕಾರಿಯಾಗಿವೆ

### ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್ ಪ್ರಶಂಸೆ




ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಲ್ಲಿರುವ ಜನೌಷಧಿ ಕೇಂದ್ರದಲ್ಲಿ 'ಜನೌಷಧಿ ಕೇಂದ್ರಗಳ ದಿನಾಚರಣೆ' ಕಾರ್ಯಕ್ರಮ ನಡೆಯಿತು.

ಮೈಸೂರು, ಮಾ.9(ಎಂಕೆ)– ದೇಶದ ಜನತೆಯ ಆರೋಗ್ಯದ ದೃಷ್ಟಿಯಿಂದ ಔಷಧಿಗಳ ಖರೀದಿಗೆ ಹೊರೆಯಾಗಬಾರದೆಂದು ಆರಂಭಿಸಲಾಗಿರುವ ಜನೌಷಧಿ ಕೇಂದ್ರಗಳು ಜನೋಪಕಾರಿಯಾಗಿವೆ ಎಂದು ಸಂಸದ ಯದುವೀರ್ ಚಾಮರಾಜ ಕೃಷ್ಣದತ್ತ ಒಡೆಯರ್ ಹೇಳಿದರು.

ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಲ್ಲಿರುವ ಜನೌಷಧಿ ಕೇಂದ್ರದಲ್ಲಿ 'ಜನೌಷಧಿ ಕೇಂದ್ರಗಳ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ವರ್ಗದ ಜನರಿಗೆ ಜನೌಷಧಿ ಕೇಂದ್ರಗಳಿಂದ ಭಾರಿ ಪ್ರಯೋಜನಗಳಾಗಿವೆ. ಜನೌಷಧಿಗಳ ಬಳಕೆ ಮತ್ತು ಉಪಯೋಗಗಳ ಬಗ್ಗೆ ಈಗಾಗಲೇ ಸಾಕಷ್ಟು ಅಭಿಯಾನ ನಡೆಸಲಾಗಿದೆ. ಔಷಧಿಗಳಿಗೆ ಹೆಚ್ಚು ಹಣ ವ್ಯಯಿಸುತ್ತಿದ್ದ ಜನರು ಈಗ, ಜನೌಷಧಿ ಕೇಂದ್ರಗಳಲ್ಲಿ ಔಷಧಿಗಳನ್ನು ಖರೀದಿ ಮಾಡುವ ಮೂಲಕ ಸಾಕಷ್ಟು ಹಣ ಉಳಿಸುತ್ತಿದ್ದಾರೆ ಎಂದು ಹೇಳಿದರು.

ಜನೌಷಧಿ ಮಳಿಗೆಗಳಲ್ಲಿ ಬಿಪಿ, ಶುಗರ್, ಅಸಿಡಿಟಿ ಹಾಗೂ ಇನ್ನಿತರೆ ಸಾಮಾನ್ಯ ಆರೋಗ್ಯ ಸಮಸ್ಯೆಗಳಿಗೆ ಔಷಧ ಲಭ್ಯವಾಗುತ್ತಿದೆ. ಇತ್ತೀಚೆಗೆ ಗಂಭೀರ ಆರೋಗ್ಯ ಸಮಸ್ಯೆಗಳಿಗೂ ಮಾತ್ರೆಗಳು ಲಭ್ಯವಾಗುತ್ತಿವೆ. ಜನರಿಗೆ ಉತ್ತಮ ಆರೋಗ್ಯ ಸೇವೆ ನೀಡುವ ಸದುದ್ದೇಶದಿಂದ ಪ್ರಧಾನಿ ಮೋದಿ ಅವರು ಜನೌಷಧಿ ಕೇಂದ್ರಗಳಿಗೆ ನೂತನ ಸ್ಪರ್ಶ ನೀಡಿದರು. ಈಗ ಲಕ್ಷಾಂತರ ಜನೌಷಧಿ ಕೇಂದ್ರಗಳು ಸಾರ್ವಜನಿಕ ಸೇವೆಗೆ ಲಭ್ಯವಾಗಿವೆ. ಕೇಂದ್ರ ಬಿಜೆಪಿ ಸರ್ಕಾರದ ಜನಪರ ಕಾಳಜಿಗಳಿಗೆ ಇದು ಸಾಕ್ಷಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ನಿರ್ದೇಶಕರಾದ ಡಾ.ಕೆ.ಆರ್. ದಾಕ್ಷಾಯಣಿ ಮತ್ತಿತರರಿದ್ದರು.

## ಸಂತ ಜೋಸೆಫರ ಕಾಲೇಜಿಗೆ ಸಮಗ್ರ ಚಾಂಪಿಯನ್‌ಶಿಪ್ ಟ್ರೋಫಿ



ಮೈಸೂರು, ಮಾ. 9– ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜು ಆಯೋಜಿಸಿದ್ದ ರಾಜ್ಯಮಟ್ಟದ ಐಟಿ ಸ್ಪರ್ಧೆಗಳಲ್ಲಿ ಸರ್ವಾಂಗೀಣ ಚಾಂಪಿಯನ್ ಶಿಪ್ ಗೆಲ್ಲುವುದರ ಮೂಲಕ ಮತ್ತೊಮ್ಮೆ ತನ್ನ ಶೈಕ್ಷಣಿಕ ಮತ್ತು ತಾಂತ್ರಿಕ ಶ್ರೇಷ್ಠತೆಯನ್ನು ಪ್ರದರ್ಶಿಸಿದೆ.

ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಅತ್ಯುತ್ತಮ ಕೌಶಲ್ಯಗಳನ್ನು ಪ್ರದರ್ಶಿಸಿದ್ದಾರೆ. ಮಾನವ ಸಂಪನ್ಮೂಲ ಕಾರ್ಯಕ್ರಮ–ವಿಜಯ್ ಮತ್ತು ಜುನೈದ್ (ದ್ವಿತೀಯ), ಯುಐ/ಯುಎಕ್ಸ್ ವಿನ್ಯಾಸ–ಪೂರ್ಣಪ್ರಜ್ಞ ಮತ್ತು ಎರ್ಫಾಯಿಮ್ (ದ್ವಿತೀಯ), ಥಿಂಕಿನ್ ಫೈ ಕಾರ್ಯಕ್ರಮ–ತನಿಶಾ, ಮೆಲ್ವಿಟಾ ಸ್ಯಾಮ್ಸನ್ (ದ್ವಿತೀಯ), ಕೋಡಿಂಗ್ ಇವೆಂಟ್–ಅಡ್ರೀನ್ ಅಲ್ಮೀಡಾ ಕಾರ್ತಿಕ್ (ಪ್ರಥಮ), ಟ್ರೆಶರ್ ಹಂಟ್ ಇವೆಂಟ್–ರೇಮಾ ಫರ್ವಿನ್, ಶ್ರೇಯಾ, ಯಾಶಿಕಾ ಮತ್ತು ದುರ್ಗಾಭವಾನಿ (ಪ್ರಥಮ). ರೆವೆರೆಂಡ್ ಫಾದರ್ ಎಡ್ವರ್ಡ್ ವಿಲಿಯಂ ಸಲ್ಡಾನ್ಹಾ, ಎಂ.ಡಿ.ಇ.ಎಸ್‌ನ ಖಜಾಂಚಿ ರೆವೆರೆಂಡ್ ಫಾದರ್ ನವೀನ್ ಕುಮಾರ್, ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರ ಹೆಚ್.ಎನ್., ಉಪ ಪ್ರಾಂಶುಪಾಲರು ಮತ್ತು ವಾಣಿಜ್ಯ ವಿಭಾಗದ ಮುಖ್ಯಸ್ಥರು ಆದ ಶ್ರೀಮತಿ ಶಿಲ್ಪಾ ಆರ್. ಉಪಸ್ಥಿತರಿದ್ದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**10.03.2025 ಸೋಮವಾರ, ಮಳೆ ನಕ್ಷತ್ರ: ಪೂರ್ವಭಾದ್ರಾ 04.03.2025ರಿಂದ 16.03.2025**
**ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,**
**ತಿಥಿ: ಏಕಾದಶಿ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ**

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ:** 2024–25ನೇ ಸಾಲಿನ ಪ್ರಥಮ ವರ್ಷದ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳ ಜ್ಯೋತಿ ಬೆಳಗುವಿಕೆ ಹಾಗೂ ಪ್ರತಿಜ್ಞಾ ವಿಧಿ ಸ್ವೀಕಾರ ಸಮಾರಂಭ, ಅಧ್ಯಕ್ಷತೆ: ಎಂಎಂಸಿ ಮತ್ತು ಆರ್‌ಐ ನಿರ್ದೇಶಕರು ಹಾಗೂ ಡೀನ್ ಡಾ.ದಾಕ್ಷಾಯಿಣಿ, ಮುಖ್ಯ ಅತಿಥಿ ಹಾಗೂ ಸನ್ಮಾನಿತರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಶುಶ್ರೂಷ ವಿಭಾಗದ ಡೀನ್ ಡಾ.ಮಹೇಶ್, ಸ್ಥಳ: ಅಮೃತೋತ್ಸವ ಭವನ, ಜೆ.ಕೆ.ಮೈದಾನ, ಬೆಳಗ್ಗೆ 10 ಗಂಟೆಗೆ.

■ **ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಸವಿತಾ ಅಧ್ಯಯನ ಕೇಂದ್ರ (ಮೈಸೂರು):** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಸಾಧಕಿಯರ ಜೊತೆ ಸಂವಾದ ಕಾರ್ಯಕ್ರಮ, ಆಶಯ ನುಡಿ: ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಡಾ.ಸಬಿಹಾ ಭೂಮಿಗೌಡ, ಮಹಿಳಾ ದಿನಾಚರಣೆ ಪ್ರಸ್ತುತತೆ: ಸಮತಾ ಅಧ್ಯಯನ ಕೇಂದ್ರದ ಧರ್ಮದರ್ಶಿ ಡಾ.ಹೆಚ್.ಎಂ.ಕಲಾಶ್ರೀ, ಅಧ್ಯಕ್ಷತೆ: ಸಿಟಿಇ ವಸಂತ ಮಹಲ್ ಪ್ರಾಂಶುಪಾಲರು ಮತ್ತು ಜಂಟಿ ನಿರ್ದೇಶಕರಾದ ಶ್ರೀಮತಿ ಗೀತಾಂಬ, ಸ್ಥಳ: ರಾಧಾಕೃಷ್ಣ ಸಭಾಂಗಣ, ಸಿಟಿಇ ವಸಂತಮಹಲ್, ಬೆಳಗ್ಗೆ 10ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ :** ಏಕಕಲಾ ಚಿತ್ರಕಲಾ ಪ್ರದರ್ಶನ, ಹುಣಸೂರು ಕರೀಗೌಡರ ಬೀದಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಚಿತ್ರಕಲಾ ಶಿಕ್ಷಕರಿಂದ. ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್, ಡಿಪಾರ್ಟ್‌ಮೆಂಟ್ ಆಫ್ ಮೆಕ್ಯಾನಿಕಲ್ ಇಂಜಿನಿಯರಿಂಗ್, ಕೆಮಿಸ್ಟ್ರಿ ಅಂಡ್ ಫಿಸಿಕ್ಸ್:** ಅಡ್ವಾನ್ಸ್ ಇನ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ಅಂಡ್ ಮೆಟಿರಿಯಲ್ ಸೈನ್ಸ್ ಕುರಿತು ಅಂತಾರಾಷ್ಟ್ರೀಯ ವಿಚಾರ ಸಂಕಿರಣ, ಸ್ಥಳ: ಸಾಹುಕಾರ್ ಚೆನ್ನಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ :** ಸರಣಿ ಉಪನ್ಯಾಸ ಮಾಲಿಕೆ ಹಾಗೂ ಮಹಾಮನೆ ಪ್ರಾರಂಭೋತ್ಸವ, ಉಪನ್ಯಾಸ–06, ಡಾ.ಲತಾ ಅವರಿಂದ, ವಿಷಯ: ಅರಿವಿನ ಮಾರಿತಂದೆ ವಚನಗಳಲ್ಲಿರುವ ಚಿಂತನೆ, ಸ್ಥಳ: ಎಸ್‌ಡಿಎಂ & ಎಂಎಂಕೆ ಮಹಿಳಾ ಕಾಲೇಜು, ಮಹಾವಿದ್ಯಾಲಯ, ಬೆಳಗ್ಗೆ 10.30ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ** ಅಂಗವಾಗಿ ಸಾಹಿತ್ಯ ಸಂಸ್ಕೃತಿಯ ಸಮ್ಮಿಲನ, ಹಿರಿಯ ಮಹಿಳಾ ಸಾಧಕರಿಗೆ ಮಹಿಳಾ ಸಾಧಕಿ–2025ರ ಪುರಸ್ಕಾರ, ವಿಚಾರ ಮಂಥನ ಹಾಗೂ ಮಹಿಳೆಯರಿಂದ ಸ್ತ್ರೀಶಕ್ತಿಗೆ ನಮನ ಸಾಂಸ್ಕೃತಿಕ ಕಾರ್ಯಕ್ರಮ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ.ಸವಿತಾ, ಅಧ್ಯಕ್ಷತೆ: ನಿವೃತ್ತ ಪ್ರಾಂಶುಪಾಲರಾದ ಡಾ.ಎಸ್. ಸುಧಾ ರಮೇಶ್, ವಿಚಾರ ಮಂಥನ: ಸಂಸ್ಕೃತ ವಿದ್ವಾಂಸರಾದ ಡಾ.ಕೆ.ಲೀಲಾ ಪ್ರಕಾಶ್, ಸ್ಥಳ: ರಮಾಗೋವಿಂದ ಸಭಾ ಭವನ, ಶ್ರೀ ಸಾಯಿ ಬಾಬಾ ದೇವಸ್ಥಾನದ ಎದುರು, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ :** ಮೈಸೂರು ನಗರ ಹಳೇ ಸಂತೇಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಪುಷ್ಪ ಮಂಟಪಾರೋಹಣ, ಸ್ಥಳ: ದೇವಸ್ಥಾನದ ಪ್ರಾಂಗಣ, ಹಳೇ ಸಂತೇಪೇಟೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಬೆಂಗಳೂರು):** ಸಂಜೆ 5.30ಕ್ಕೆ 10ನೇ ವರ್ಷದ ವಾರ್ಷಿಕೋತ್ಸವದ ಸಮಾರೋಪ ಸಮಾರಂಭ, ನಾಟಕೋತ್ಸವ, ಸಂಜೆ 6.30ಕ್ಕೆ 'ಜಲಗಾರ' ನಾಟಕ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ:** ದತ್ತಿ ಕಾರ್ಯಕ್ರಮ, ವಚನ ವ್ಯಾಖ್ಯಾನ ಮತ್ತು ಉಪನ್ಯಾಸ, ಸ್ಥಳ: ಜೆಎಸ್‌ಎಸ್ ವಿದ್ಯಾರ್ಥಿನಿಲಯ, (ಪ್ರಧಾನ ಭವನ) ವಿವಿ ರಸ್ತೆ, ಸಂಜೆ 6.45ಕ್ಕೆ.

■ **ಶ್ರೀ ಮಡಿವಾಳೇಶ್ವರ ಕಲಾ ಸಂಘ :** ಗ್ರಾಮದೇವತೆ ಶ್ರೀ ಮಾರಮ್ಮನವರ ಹಬ್ಬದ ಪ್ರಯುಕ್ತ ಭಕ್ತ ಪ್ರಹ್ಲಾದ ನಾಟಕ, ಸ್ಥಳ: ತಳೂರು ಬಸ್ ನಿಲ್ದಾಣದ ಮುಂಭಾಗ, ಜಯಪುರ ಹೋಬಳಿ, ಮೈಸೂರು ತಾಲೂಕು, ರಾತ್ರಿ 9 ಗಂಟೆಗೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10–ಚಿಂತನ, ಮುತ್ತುರಾಜ್, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಆಧಾರ ಶಿಲೆ, ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ. ಪ್ರಸ್ತುತಿ: ಡಾ.ರಾಮದಾಸ್ ರೆಡ್ಡಿ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್, ಶಾಂತಲಾ ವಟ್ಟಂ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು, ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ) ಬಹುಮುಖ ಪ್ರತಿಭೆಯ ಹಿರಿಯ ವಿದ್ವಾಂಸರು ಹಾಗೂ ಕವಿಗಳು ಆದ ಡಾ.ಸಿ.ಪಿ.ಕೃಷ್ಣಕುಮಾರ್ ಅವರೊಂದಿಗೆ ಜಿ.ಕೆ.ರವೀಂದ್ರಕುಮಾರ್ ಅವರು ನಡೆಸಿದ್ದ ಸಂವಾದದ ಮೊದಲ ಭಾಗ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ರಾಘವೇಂದ್ರ –ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ, ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ., 12.05–ವನಿತಾ ವಿಹಾರ, 12.35–ದೇವರನಾಮ–ಇಂದ್ರಾಣಿ ಅನಂತರಾಮ್, 12.45–ನಮ್ಮ ಆರೋಗ್ಯ–ವಿಶ್ವ ಬೊಜ್ಜುತನ ಜಾಗೃತಿ ದಿನದ ಸಂದರ್ಭದಲ್ಲಿ ಬೊಜ್ಜುತನ ಕಾರಣಗಳು ಮತ್ತು ಚಿಕಿತ್ಸೆ ಕುರಿತು ಎಂಡೋಕ್ರೈನಾಲಜಿ ಮತ್ತು ಡಯಾಬಿಟಿಸ್ ತಜ್ಞರಾದ ಡಾ.ಲಕ್ಷ್ಮೀ ನಾಗೇಂದ್ರ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇಂದ್ರೆ ಮಂಜುನಾಥ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನಮಂತ್ರಿ ಸುರಕ್ಷಾ ಭೀಮಾ ಯೋಜನೆ ಕುರಿತು ಮಾಹಿತಿ, 1.20–ಭಾವಗೀತೆಗಳು–ಅಮೂಲ್ಯ ಎಂ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಎಸ್.ವಿಜಯರಾಘವನ್, ವೀಣಾವಾದನ, 4.00–ಮಹಿಳಾರಂಗ, ನಾನು ನನ್ನ ಕಂಪನಿ ಬೀಟೆ ಮರ ಬಳಸಿ ಕರಕುಶಲ ವಸ್ತುಗಳನ್ನು ತಯಾರಿಸುವ ಜ್ಯೋತಿ ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಸಹನಾ, 4.45–ಹಿಂದಿ ಪಾಠ, ಪ್ರಸ್ತುತಿ: ಡಾ.ಮಾಧವಿ ಭಂಡಾರಿ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ರೈತರಿಗೆ ಬ್ಯಾಂಕಿನಿಂದ ದೊರೆಯುವ ಸೌಲಭ್ಯಗಳನ್ನು ಕುರಿತು ಸಂವಾದ. ಭಾಗವಹಿಸುತ್ತಾರೆ ಮೈಸೂರಿನ ಕರ್ಣಾಟಕ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಸಹಾಯಕ ಮಹಾಪ್ರಬಂಧಕ ಡಾ.ಟಿ.ಆರ್.ಅರುಣ್ ಮತ್ತು ಕೃಷಿ ಅಧಿಕಾರಿ ಆರ್.ಚಂದನಾ, ಪ್ರಸ್ತುತಿ : ಎನ್.ಕೇಶವಮೂರ್ತಿ, 7.45–ವಿಧಾನಮಂಡಲದಲ್ಲಿ ಇಂದು, 8.00–ಯುವವಾಣಿ–ಇತ್ತೀಚೆಗೆ ಜರುಗಿದ ಮೈಸೂರು ವಿಶ್ವವಿದ್ಯಾಲಯದ 105ನೇ ಘಟಿಕೋತ್ಸವದಲ್ಲಿ ಎಂ. ಕಾಂ ವಿಷಯದಲ್ಲಿ ಪ್ರಥಮ rankನೊಂದಿಗೆ 3 ಚಿನ್ನದ ಪದಕ ಹಾಗೂ ನಗದು ಪುರಸ್ಕಾರ ಗಳಿಸಿದ ಮೈಸೂರಿನ ಸಂಜನಾ ಪ್ರಭು. ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ– ಬೇಂದ್ರೆ ಮಂಜುನಾಥ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ. ಬಾಲಮುರಳಿಕೃಷ್ಣ –ಹಾಡುಗಾರಿಕೆ, 10.00 ರೂಪಕ –ಹರಿಯನ್ನ ರಸಿದ ವನಿತೆಯರು, ರಚನೆ ಮತ್ತು ಪ್ರಸ್ತುತಿ–ಡಾ. ಸುಕನ್ಯಾ ಪ್ರಭಾಕರ್, 10.30–ಸವಿನೆನಪು

ಮೈಸೂರು ಮಿತ್ರ ಸೋಮವಾರ 10 ಮಾರ್ಚ್ 2025

# ರಿಂಗ್‌ರಸ್ತೆಯೊಳಗಿನ ಎಲ್ಲಾ ಬಡಾವಣೆಗಳಿಗೂ ಮೂರು ವರ್ಷದಲ್ಲಿ ಅಂಡರ್‌ಗ್ರೌಂಡ್ ವಿದ್ಯುತ್ ಕೇಬಲ್

## ಸೆಸ್ಕ್ ಅಧೀಕ್ಷಕ ಅಭಿಯಂತರರಾದ ಸುನಿಲ್ ಕುಮಾರ್ ಮಾಹಿತಿ

ಮೈಸೂರು,ಮಾ.9(ಎಸ್‌ಪಿಎನ್)– ಮೈಸೂರು ರಿಂಗ್ ರಸ್ತೆಯೊಳಗಿನ ಎಲ್ಲಾ ಬಡಾವಣೆಗಳಿಗೂ ಇನ್ನು ಮೂರು ವರ್ಷಗಳಲ್ಲಿ ಅಂಡರ್‌ಗ್ರೌಂಡ್ ವಿದ್ಯುತ್ ಕೇಬಲ್ ಅಳವಡಿಸುವ ಗುರಿ ಸೆಸ್ಕ್ ಹೊಂದಿದೆ ಎಂದು ಸೆಸ್ಕ್ ಅಧೀಕ್ಷಕ ಅಭಿಯಂತರರಾದ ಸುನಿಲ್ ಕುಮಾರ್ ಪ್ರಕಟಿಸಿದರು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ಎಂಜಿಪಿ ಸಾಮಾನ್ಯ ಸಭೆಯಲ್ಲಿ ವಿದ್ಯುತ್ ಇಲಾಖೆಯಲ್ಲಿನ ಸಮಸ್ಯೆಗಳ ಕುರಿತು ಸಂವಾದದಲ್ಲಿ ಮಾತನಾಡಿದರು.



ಎಂಜಿಪಿ ಸಾಮಾನ್ಯ ಸಭೆಯಲ್ಲಿ ವಿದ್ಯುತ್ ಇಲಾಖೆಯಲ್ಲಿನ ಸಮಸ್ಯೆಗಳ ಕುರಿತು ಸಂವಾದದಲ್ಲಿ ತೊಡಗಿರುವುದು

ಪ್ರಾಯೋಗಿಕವಾಗಿ ಮೈಸೂರು ಅರಮನೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಂಡರ್ ಗ್ರೌಂಡ್ ವಿದ್ಯುತ್ ಕೇಬಲ್ ಅಳವಡಿಸಲಾಗಿದೆ. ಇದರಿಂದ ವಿದ್ಯುತ್ ಪೂರೈಕೆಯಲ್ಲಿ ಯಾವುದೇ ತೊಂದರೆಯಾಗಿಲ್ಲ. ಇದರಿಂದ ಮಳೆಗಾಲದಲ್ಲಾಗಲಿ, ಬೇಸಿಗೆಯಲ್ಲಾಗಲಿ ಯಾವುದೇ ತೊಂದರೆ ಇಲ್ಲದೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ ಎಂದು ಸದಸ್ಯರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸಿದರು.

**600ಕೋಟಿ ವೆಚ್ಚ:** ಅಂದಾಜು 600 ಕೋಟಿ ವೆಚ್ಚದಲ್ಲಿ ಮೈಸೂರು ರಿಂಗ್ ರಸ್ತೆಯೊಳಗಿನ ಎಲ್ಲಾ ಬಡಾವಣೆಗಳಿಗೂ ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸಲಾಗುವುದು. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಆಡಳಿತಾತ್ಮಕ ಒಪ್ಪಿಗೆಯೂ ದೊರೆತಿದೆ. ಆದರೆ, ಕೆಲವು ಕಿರಿದಾದ ಪ್ರದೇಶಗಳಲ್ಲಿ ಅಂಡರ್ ಗ್ರೌಂಡ್ ಕೇಬಲ್ ಅಳವಡಿಕೆಯೇ ಇಲಾಖೆ ದೊಡ್ಡ ತಲೆನೋವಾಗಬಹುದು. ಹಾಗಾಗಿ ಈ ಕಾಮಗಾರಿಗೆ ಜನರ ಸಹಕಾರ ಅತೀ ಮುಖ್ಯ ಎಂದು ಹೇಳಿದರು.

ಯಾವುದೇ ಅಡೆ–ತಡೆ ಇಲ್ಲದೆ, ಈ ಕಾಮಗಾರಿ ಮುಗಿದರೆ, ಈಗ ಅಂದಾಜಿಸಿರುವ ಆಜು–ಬಾಜು ಮೊತ್ತದಲ್ಲೆ ಕಾಮಗಾರಿ ಮುಗಿಸಬಹುದು. ಇದಕ್ಕೆ ಜನರು ತಕರಾರು ತೆಗೆದರೆ, ಕಾಮಗಾರಿ ಅಂದಾಜು ಮೊತ್ತ ಮತ್ತಷ್ಟು ಹೆಚ್ಚಾಗುತ್ತದೆ. ಇದರಿಂದ ಜನರ ಸಮಯವೂ ಹಾಳು, ಹಣವೂ ಪೋಲಾಗುತ್ತದೆ. ಹಾಗಾಗಿ ಅಂಡರ್ ಗ್ರೌಂಡ್ ಕಾಮಗಾರಿಗೆ ಬಗ್ಗೆ ಜನರಲ್ಲಿ ಅರಿವು ಮೂಡಿಸಿ, ಕಾಮಗಾರಿಗೆ ಅಡೆ–ತಡೆ ಬಾರದಂತೆ ನೋಡಿಕೊಳ್ಳುವುದು ಸವಾಲಿನ ವಿಷಯವಾಗಿದೆ ಎಂದರಲ್ಲದೆ, ಇದಕ್ಕೆ ನಾಗರಿಕ ಸಮುದಾಯದಲ್ಲಿ ಕೆಲಸ ಮಾಡುತ್ತಿರುವ ಎಂಜಿಪಿ ಸೇರಿದಂತೆ ಮೈಸೂರಿನ ಸಂಘ–ಸಂಸ್ಥೆಗಲು ನಮ್ಮ ಜೊತೆ ಕೈಜೋಡಿಸುವಂತೆ ಮನವಿ ಮಾಡಿದರು.

> ಪ್ರತಿ ಸಂಪರ್ಕಕ್ಕೂ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಇಲಾಖೆಯಿಂದ ಚಿಂತನೆ ನಡೆದಿದೆ. ಇದು ಅಂತಿಮ ಸ್ವರೂಪ ಪಡೆದರೆ, ರಾಜ್ಯದ ಎಲ್ಲಾ ಮನೆಗಳಿಗೂ ಸ್ಮಾಟ್ ಮೀಟರ್ ಅಳವಡಿಕೆ ಕಡ್ಡಾಯವಾಗಲಿದೆ. ಈ ಮೀಟರ್ ಪೋಸ್ಟ್ ಪೇಡ್, ಫ್ರೀ ಪೇಡ್ ರೀತಿ ಕಾರ್ಯ ನಿರ್ವಹಿಸಲಿದೆ. ಸ್ಮಾರ್ಟ್ ಮೀಟರ್ ಅಳವಡಿಕೆಯಿಂದ ಗ್ರಾಹಕರು ಎಷ್ಟು ಗಂಟೆ, ಎಷ್ಟು ನಿಮಿಷ, ಯಾವ ವೇಳೆ ವಿದ್ಯುತ್ ಉಪಯೋಗಿಸಿದ್ದಾರೆ ಎಂಬುದು ಸೆನ್ಸಾರ್‌ನಲ್ಲಿ ದಾಖಲಾಗುತ್ತದೆ. ಅಂತೆಯೇ ಗ್ರಾಹಕರ ಎಷ್ಟು ಗಂಟೆ ವಿದ್ಯುತ್ ಉಪಯೋಗಿಸುತ್ತಾರೆ ಎಂಬುದಕ್ಕೆ ಸ್ಪಷ್ಟ ಮಾಹಿತಿ ಇದರಲ್ಲಿ ಸಿಗಲಿದೆ. ಒಂದು ಸ್ಮಾರ್ಟ್ ಮೀಟರ್ ಬೆಲೆ ಅಂದಾಜು 7 ಸಾವಿರದಿಂದ 8 ಸಾವಿರ ಇರಬಹುದು ಇಲ್ಲವೆ ಮತ್ತಷ್ಟು ಕಡಿಮೆ–ಜಾಸ್ತಿ ಆಗಬಹುದು. ಅಂತಿಮವಾಗಿ ಇನ್ನು ಬೆಲೆ ನಿಗದಿ ಆಗಿಲ್ಲ.
>
> - ಸುನಿಲ್ ಕುಮಾರ್, ಅಧೀಕ್ಷಕ ಅಭಿಯಂತರರು, ಸೆಸ್ಕ್

**ಸೋಲಾರ್‌ನಲ್ಲಿ ಸಬ್ಸಿಡಿ ಪಡೆದವರಿಗಿಲ್ಲ ಗೃಹಜ್ಯೋತಿ:** ಮೈಸೂರು ಜಿಲ್ಲೆಯಲ್ಲಿ ಸೋಲಾರ್‌ನಿಂದ ವಿದ್ಯುತ್ ಉತ್ಪಾದಿಸಲು 2200ಕ್ಕೂ ಹೆಚ್ಚು ಮಂದಿ ನೋಂದಣಿ ಮಾಡಿಸಿದ್ದಾರೆ. ಈ ರೀತಿ ನೋಂದಣಿ ಮಾಡಿಕೊಂಡವರು ಗೃಹಜ್ಯೋತಿ ಯೋಜನೆ ವ್ಯಾಪ್ತಿಗೆ ಬರುವುದಿಲ್ಲ. ಆದರೆ, ಬಿಸಿನೀರು ಕಾಯಿಸುವ ಸೋಲಾರ್ ಗೃಹಜ್ಯೋತಿ ವ್ಯಾಪ್ತಿಗೆ ಬರುತ್ತದೆ ಎಂದು ಸ್ಪಷ್ಟಪಡಿಸಿದರು. ಸೋಲಾರ್‌ನಿಂದ ವಿದ್ಯುತ್ ಉತ್ಪಾದನೆ ಮಾಡಿದವರಿಗೂ ಗೃಹಜ್ಯೋತಿ ಯೋಜನೆ ವ್ಯಾಪ್ತಿಗೆ ಬರಬೇಕಾದರೆ, ಸರ್ಕಾರ ಆದೇಶವಾಗಬೇಕು ಎಂದು ಸದಸ್ಯರೊಬ್ಬರು ಪ್ರಶ್ನೆಗೆ ಉತ್ತರಿಸಿದರು.

**ಸೂರ್ಯಘರ್ ಯೋಜನೆಗೆ ಹಿನ್ನಡೆ:** ರಾಜ್ಯ ಸರ್ಕಾರ ರಾಜ್ಯಾದ್ಯಂತ ನಾಲ್ಕು ನಿಗಮಗಳ ಮೂಲಕ 200 ಯೂನಿಟ್ ಉಚಿತ ವಿದ್ಯುತ್ ಪೂರೈಸುತ್ತಿರುವ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಸೂರ್ಯಘರ್ ಸೋಲಾರ್ ಯೋಜನೆಗೆ ಸೇರ್ಪಡೆಗೊಳ್ಳಲು ಜನರು ಆಸಕ್ತಿ ತೋರುತ್ತಿಲ್ಲ ಇದರಿಂದಾಗಿ ಸೂರ್ಯಘರ್ ಯೋಜನೆಗೆ ಹಿನ್ನಡೆಯಾಗುತ್ತಿದೆ ಎಂದು ಸದಸ್ಯರೊಬ್ಬರು ಪ್ರಶ್ನೆಗೆ ಉತ್ತರಿಸಿದರು.

**ಕೋಟ್ಯಾಂತರ ರೂ., ಸೆಸ್ಕ್‌ಗೆ ನಷ್ಟ:** ಮೈಸೂರು ಜಿಲ್ಲೆಯಾದ್ಯಂತ ವಿದ್ಯುತ್ ಕಂಬಗಳಲ್ಲಿ ಕೇಬಲ್ ವೈರ್ ಹಾಕುವುದಕ್ಕೆ ಸೆಸ್ಕ್‌ಗೆ ಹಣ ಕಟ್ಟಬೇಕು. ಕೆಲವರು ಹಣ ಕಟ್ಟಿ ಅನುಮತಿ ಪಡೆಯುತ್ತಿದ್ದಾರೆ. ಇನ್ನು ಕೆಲವು ಅನುಮತಿ ಪಡೆದಿಲ್ಲ. ಹಣ ವನ್ನೂ ಕಟ್ಟಿಲ್ಲ. ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಜಿಲ್ಲಾಡಳಿತ, ಜನ ಪ್ರತಿನಿಧಿಗಳು ಹಾಗೂ ಮೈಸೂರು ನಗರ ಪಾಲಿಕೆ ಸಹಕಾರ ಅತೀಮುಖ್ಯ. ಇದರಿಂದ ಸೆಸ್ಕ್ ಪ್ರತಿವರ್ಷ ಕೋಟ್ಯಾಂತರ ರೂ.ಗಳು ನಷ್ಟವಾಗುತ್ತಿದೆ ಎಂದು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

**ಸೋಲಾರ್ ವಿದ್ಯುತ್ ಉತ್ಪಾದನೆಗೆ ಹಣ ಹೂಡಿಕೆಯೇ ಸಮಸ್ಯೆ:** ಮೈಸೂರು ವಿವಿ ಸೇರಿದಂತೆ ವಿವಿಧ ಸರ್ಕಾರಿ ಕಟ್ಟಡದಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆಗೆ ಯೋಜನೆ ರೂಪಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಆದರೆ, ಈ ಯೋಜನೆಗೆ ಹಣ ಹೂಡಿಕೆ ಯಾವ ರೀತಿ ಎಂಬುದೇ ಸ್ಪಷ್ಟವಾಗಿಲ್ಲ. ಹಾಗಾಗಿ ಸೋಲಾರ್ ಯೋಜನೆ ಅಳವಡಿಕೆ ಮಂದಗತಿಯಲ್ಲಿ ಸಾಗುತ್ತಿದೆ. ಮೈಸೂರು ವಿವಿಯ ಎಲ್ಲಾ ವಿಭಾಗಗಳಿಗೂ ಸೋಲಾರ್ ವಿದ್ಯುತ್ ಉತ್ಪಾದಿಸಿ, ಪೂರೈಸಲು ಮೈಸೂರು ವಿವಿ ಮನವಿ ಮಾಡಿದೆ. ಆದರೆ, ಈ ಯೋಜನೆ ಅನುಷ್ಠಾನ ಮಾಡಲು ಹಣ ಯಾರು ಹೂಡಿಕೆ ಮಾಡಬೇಕು ಎಂಬುದು ಇನ್ನೂ ಚರ್ಚಾ ಹಂತದಲ್ಲಿದೆ ಎಂದು ಸದಸ್ಯರೊಬ್ಬರು ಪ್ರಶ್ನೆಗೆ ಮಾಹಿತಿ ನೀಡಿದರು.

ಈ ವೇಳೆ ಸೆಸ್ಕ್ ಅಧಿಕಾರಿ ಕೇಶವ ಮೂರ್ತಿ, ಸೆಸ್ಕ್ ನಿವೃತ್ತ ಅಧಿಕಾರಿ ಎಸ್.ಎಂ.ಸುರೇಶ್ ಸಂವಾದಲ್ಲಿ ಪಾಲ್ಗೊಂಡಿದ್ದರು. ಸಂವಾದಲ್ಲಿ ಎಂಜಿಪಿ ಸದಸ್ಯರಾದ ಶೋಭನ ಸಾಂಭಶಿವ, ಡಿ.ಎನ್.ದಯಾನಂದ ಸಾಗರ್, ಸಿ.ಆರ್.ಅಶ್ವತ್‌ನಾರಾಯಣ, ಡಾ.ರೇಣು ಅಗ್ರಾವಲ್, ಜೆ.ಶ್ರೀಧರ್, ಎಲ್. ತನುಜಾ ಸೇರಿದಂತೆ ಇನ್ನು ಅನೇಕರಿದ್ದರು.

# ಮದ್ಯ ಕೊಡಿಸಲು ನಿರಾಕರಿಸಿದ ಕಾರ್ಮಿಕನ ಮೇಲೆ ಹಲ್ಲೆ

ಮೈಸೂರು, ಮಾ.9(ಎಸ್‌ಬಿಡಿ)– ಮದ್ಯ ಕೊಡಿಸಲು ನಿರಾಕರಿಸಿದ ಕಾರ್ಮಿಕನ ಮೇಲೆ ಅಪರಿಚಿತ ಕಲ್ಲಿನಿಂದ ಹಲ್ಲೆ ನಡೆಸಿರುವ ಘಟನೆ ಮೈಸೂರಿನ ದೇವರಾಜ ಮೊಹಲ್ಲಾದಲ್ಲಿ ನಡೆದಿದೆ.

ಕೆಆರ್‌ಎಸ್ ನಿವಾಸಿ ಮಧು(33), ಅಪರಿಚಿತನ ಹಲ್ಲೆಯಿಂದ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಮೈಸೂರಿನ ಕೈಲಾಸಪುರಂನಲ್ಲಿ ಗಾರೆ ಕೆಲಸಕ್ಕೆ ಹೋಗುತ್ತಿದ್ದ ಮಧು, ದೇವರಾಜ ಮೊಹಲ್ಲಾದ ಲಾಡ್ಜ್‌ವೊಂದರಲ್ಲಿ ಉಳಿದುಕೊಂಡಿದ್ದರು. ಮಾ.7ರಂದು ರಾತ್ರಿ 11 ಗಂಟೆ ಸಮಯದಲ್ಲಿ ಲಾಡ್ಜ್ ಬಳಿ ಫುಟ್‌ಪಾತ್‌ನಲ್ಲಿ ಕುಳಿತಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬ ಬಂದು ನನ್ನ ಬಳಿ ಮದ್ಯ ಇದೆ, ಇಬ್ಬರೂ ಕುಡಿಯೋಣ ಎಂದಿದ್ದಾನೆ. ಬಳಿಕ ಸ್ವಲ್ಪ ಮದ್ಯವನ್ನು ಮಧುಗೆ ನೀಡಿ, ಉಳಿದಿದ್ದನ್ನು ತಾನೇ ಕುಡಿದಿದ್ದಾನೆ.

ನಂತರ ಎಣ್ಣೆ ಖಾಲಿಯಾಗಿದೆ ನೀನು ಕೊಡಿಸು ಎಂದು ಕೇಳಿದ್ದಾನೆ. ಆಗ ನನ್ನ ಬಳಿ ಹಣ ಇಲ್ಲ ಎಂದಿದ್ದಕ್ಕೆ ಸಿಟ್ಟಿಗೆದ್ದು, ಮಧುವನ್ನು ಜೋರಾಗಿ ತಳ್ಳಿ ಬೀಳಿಸಿ, ಆತನ ಬಲಗಾಲಿನ ಮೇಲೆ ಹಲ್ಲು ಎತ್ತಿ ಹಾಕಿದ್ದಾನೆ. ನೋವು ತಾಳಲಾರದೆ ಜೋರಾಗಿ ಕಿರುಚಿಕೊಂಡಿದ್ದರಿಂದ ಸಾರ್ವಜನಿಕರು ಓಡಿಬಂದಿದ್ದಾರೆ. ಅಷ್ಟರಲ್ಲಿ ಹಲ್ಲೆ ನಡೆಸಿದ ಅಪರಿಚಿತ ಪರಾರಿಯಾಗಿದ್ದಾನೆ. ಸಾರ್ವಜನಿಕರು ಗಾಯಗೊಂಡಿದ್ದ ಮಧುವನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದಾರೆ. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಟ್ರಾಮಾ ಕೇರ್ ಸೆಂಟರ್‌ಗೆ ಸ್ಥಳಾಂತರಿಸಲಾಗಿದೆ.

ಈ ಸಂಬಂಧ ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಹಲ್ಲೆ ನಡೆಸಿದ ವ್ಯಕ್ತಿಗೆ ಶೋಧ ನಡೆಸಿದ್ದಾರೆ.

# ಮನೆಯ ಟೆರೆಸ್ ಬಾಗಿಲು ಮೀಟಿ ಚಿನ್ನಾಭರಣ ಕಳವು

ಮೈಸೂರು, ಮಾ.9(ಎಸ್‌ಬಿಡಿ)– ಟೆರೆಸ್ ಬಾಗಿಲು ಮೀಟಿ, ಮನೆಯಲ್ಲಿದ್ದ ಲಕ್ಷಾಂತರ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳನ್ನು ಕಳ್ಳತನ ಮಾಡಿರುವ ಬಗ್ಗೆ ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಜಯನಗರ 2ನೇ ಹಂತ, ರೈಲ್ವೆ ಲೇಔಟ್ ನಿವಾಸಿ ಶಶಿಕಾಂತ್ ಅವರ ಮನೆಯಲ್ಲಿ ಕಳ್ಳತನವಾಗಿದೆ. ಇವರು ತಮ್ಮ ಪತ್ನಿಯೊಂದಿಗೆ ಫೆ.23ರಂದು ಮನೆಗೆ ಬೀಗ ಹಾಕಿ, ಕೊಲ್ಕತ್ತಾಗೆ ಹೋಗಿದ್ದರು. ಪ್ರವಾಸ ಮುಗಿಸಿ ಮಾ.6ರಂದು ವಾಪಸ್ಸಾದ ಅವರು ಮನೆ ಬಾಗಿಲು ತೆಗೆದು ಒಳ ಹೋದಾಗ ಆಘಾತ ಕಾದಿತ್ತು. ಒಂದನೇ ಮಹಡಿ ಕೊಠಡಿ ಕಬೋರ್ಡ್‌ಗಳ ಬಾಗಿಲು ತೆರೆದಿದ್ದವು. ಕಬೋರ್ಡ್ ಪರಿಶೀಲಿಸಿದಾಗ ಡ್ರಾಯರ್‌ನಲ್ಲಿಟ್ಟಿದ್ದ ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳು ಇರಲಿಲ್ಲ.

ಮನೆಯ ಎಲ್ಲಾ ಕಡೆ ಪರಿಶೀಲಿಸುವಾಗ ಟೆರೇಸ್ ಬಾಗಿಲು ತೆರೆದಿತ್ತು. ಖದೀಮರು ಚೂಪಾದ ಆಯುಧದಿಂದ ಟೆರೆಸ್ ಬಾಗಿಲು ಮೀಟಿ, ಒಳನುಗ್ಗಿರುವುದು ತಿಳಿಯಿತು. ಈ ಸಂಬಂಧ ಶಶಿಕಾಂತ್ ಪೊಲೀಸರಿಗೆ ದೂರು ನೀಡಿದ್ದು, ಕಳವುಗಾಗಿರುವ ಚಿನ್ನಾಭರಣ ಇನ್ನಿತರ ವಸ್ತುಗಳ ಬಗ್ಗೆ ಪರಿಶೀಲಿಸಿ ಹೇಳುವುದಾಗಿ ತಿಳಿಸಿದ್ದಾರೆ.

# ಡಾ.ವಿಷ್ಣುವರ್ಧನ್, ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಪ್ರದಾನ

ಮೈಸೂರು, ಮಾ.9(ಎಸ್‌ಪಿಎನ್)– ಹಿರಿಯ ನಿರ್ದೇಶಕ ಪುಟ್ಟಣ್ಣ ಕಣಗಾಲ್, ಹಿರಿಯ ನಟ ಡಾ.ವಿಷ್ಣುವರ್ಧನ್ ಅವರ ಹೆಸರಿನಲ್ಲಿ ಕೊಡಮಾಡುವ ಪ್ರಶಸ್ತಿ ಪ್ರದಾನ ಸನಾರಂಭವನ್ನು ನಿವೃತ್ತ ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ ಉದ್ಘಾಟಿಸಿದರು.

ಮೈಸೂರು ಜಗನ್ಮೋಹನಾ ಅರಮನೆಯಲ್ಲಿ ಶ್ರೀ ಆದಿಶಕ್ತಿ ಶೈಕ್ಷಣಿಕ ಸಾಮಾಜಿಕ ಹಾಗೂ ಕಲಾ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ 70ಕ್ಕೂ ಹೆಚ್ಚು ಸಾಧಕರಿಗೆ

ಈ ವೇಳೆ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಸ್.ವೀರಯ್ಯ, ಡಾ.ಅಂಜನಪ್ಪ, ಚಿನ್ನೇಗೌಡ್ರು, ಐ.ಬಿ.ಸನದಿ, ಈಶ್ವರ್ ಎಸ್. ರಾಯುಡು, ಜಿ.ಕೆ.ಸ್ವಾಮಿ(ವಿಜಯ್), ಲಿಂಗರಾಜ ಅಗಡಿ, ಸಂಜೀವಪ್ಪ ಬಾಪೂಜಿ (ವೆಂಕರಮಣ), ಆಟೋರಾಜ, ಗಂಗಾರಾಜು, ಚನ್ನಬಸಪ್ಪ, ನದಾಫ್, ರಾಮಕೃಷ್ಣ, ಎಂ. ಎನ್.ಲಕ್ಷ್ಮೀದೇವಿ ಸೇರಿದಂತೆ ಇತರರಿದ್ದರು.

ಸಾಹಸ ಸಿಂಹ ವಿಷ್ಣುವರ್ಧನ್ ಅಭಿನಯದ 'ಕನ್ನಡ ನಾಡಿನ ಜೀವನದಿ ಕಾವೇರಿ' ಹಾಡಿಗೆ ನೃತ್ಯ ಪ್ರದರ್ಶನ, ಮಹಿಷಾಸುರ ಮರ್ದಿನಿಯ ಏಕ ಪಾತ್ರಾಭಿನಯವನ್ನು ಸುಮತಿಶ್ರೀ ಎಸ್.ನವಲಿ ಹಿರೇಮಠ್ ನೆರವೇರಿಸಿದರು.

# ನಾಳೆಯಿಂದ ರಾಜ್ಯದಲ್ಲಿ 4 ದಿನ ಗುಡುಗು ಸಹಿತ ಮಳೆ ಸಾಧ್ಯತೆ

ಬೆಂಗಳೂರು, ಮಾ.9– ಮಾ.11ರಿಂದ ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ಕಳೆದೊಂದು ತಿಂಗಳಿನಿಂದ ನಾಡಿನ ಜನರು ಬಿಸಿಲ ಹೊಡೆತಕ್ಕೆ ಕಂಗೆಟ್ಟಿದ್ದರು. ತಾಪಮಾನ ಏರಿಕೆ ಹಿನ್ನೆಲೆ ಮಳೆ ಮಾರುತಗಳು ಸಕ್ರಿಯವಾಗಿದ್ದು, ಮಾ.11ರಿಂದ 14ರವರೆಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿ, ದಕ್ಷಿಣ ಒಳನಾಡಿನಲ್ಲಿ ಮಳೆಯ ಮುನ್ಸೂಚನೆ ನೀಡಿದ್ದು, ಉತ್ತರ ಒಳನಾಡಿನಲ್ಲಿ ಒಣಹವೆ ಮುಂದುವರೆಯುವ ಸಾಧ್ಯತೆ ಇದೆ. ಮುಂದಿನ ಮೂರು ತಿಂಗಳು ವಾಡಿಕೆಗಿಂತ ಹೆಚ್ಚು ಬಿಸಿಲು ಅಬ್ಬರಿಸುವ ಸಾಧ್ಯತೆ ಇದೆ. ಈ ಮಧ್ಯೆ ಮಳೆಯೂ ಕೆಲವೊಮ್ಮೆ ತಂಪೆರೆಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

# ಏ.4ರಿಂದ 14ರವರೆಗೆ ಬೆಂಗಳೂರು ಕರಗ: 20 ಲಕ್ಷ ಜನ ಭಾಗಿ ನಿರೀಕ್ಷೆ

## 15ನೇ ಬಾರಿಗೆ ಕರಗ ಹೊರಲಿರುವ ಎ.ಜ್ಞಾನೇಂದ್ರ

ಬೆಂಗಳೂರು, ಮಾ.9– ಏ.4ರಿಂದ ಏ.14ರವರೆಗೆ ಬೆಂಗಳೂರಿನ ಐತಿಹಾಸಿಕ ಕರಗ ಮಹೋತ್ಸವ ನಡೆಯಲಿದೆ. ಏಪ್ರಿಲ್ 12ರ ಚೈತ್ರ ಪೌರ್ಣಮಿಯಂದು ಕರಗ ಶಕ್ತ್ಯೋತ್ಸವ ನಡೆಯಲಿದ್ದು, ಈ ಬಾರಿಯೂ ಕರಗದ ಪೂಜಾರಿ ಎ.ಜ್ಞಾನೇಂದ್ರ ಕರಗ ಹೊರಲಿದ್ದಾರೆ.

ಸತತ 14 ವರ್ಷಗಳಿಂದ ಬೆಂಗಳೂರು ಕರಗ ಹೊರುತ್ತಿರುವ ಎ.ಜ್ಞಾನೇಂದ್ರ, ಈ ಸಲ 15ನೇ ಬಾರಿಗೆ ಕರಗ ಹೊರಲಿದ್ದಾರೆ. ಈ ಬಾರಿ ಕರಗದಲ್ಲಿ 20 ಲಕ್ಷ ಜನ ಭಾಗಿಯಾಗುವ ನಿರೀಕ್ಷೆಯಿದೆ. ಏ.4ರಂದು ರಥೋತ್ಸವ ಹಾಗೂ ಧ್ವಜಾರೋಹಣ ನಡೆಯಲಿದ್ದು, ಏ.5ರಿಂದ ಏ.8ರ ತನಕ ಪ್ರತಿದಿನ ವಿಶೇಷ ಪೂಜೆ ಮತ್ತು ಮಹಾಮಂಗಳಾರತಿ ನಡೆಯಲಿದೆ.

ಏ.9ರಂದು ಆರತಿ ದೀಪಗಳು, ಏ.10ರ ಗುರುವಾರ ಹಸೀ ಕರಗ, ಏ.11ರಂದು ಹೊಂಗಲು ಸೇವೆ, ಏ.12ರ ಶನಿವಾರದಂದು ಕರಗ ಶಕ್ತ್ಯೋತ್ಸವ ಹಾಗೂ ಧರ್ಮರಾಯಸ್ವಾಮಿ ರಥೋತ್ಸವ, ಏ.13ರಂದು ಪುರಾಣ ಪ್ರವಚನ ಮತ್ತು ದೇವಸ್ಥಾನದಲ್ಲಿ ಗಾವು ಶಾಂತಿ ಮತ್ತು ಏ.14ರ ಸೋಮವಾರ ವಸಂತೋತ್ಸವ ಧ್ವಜಾರೋಹಣ ನೆರವೇರಲಿದೆ.

## ನಕ್ಕರೆ ಅದೇ ಸ್ವರ್ಗ

ತಂದೆ : ಮಗನೆ ಈ ಬಾರಿ ನೀನು ಫೇಲ್ ಆದ್ರೆ ನನಗೆ ಅಪ್ಪ ಅನ್ನಬೇಡ

ಮಾರನೆ ದಿನ....

ತಂದೆ : ರಿಸಲ್ಟ್ ಏನಾಯ್ತು?

ಮಗ : ಸುಮ್ಮನಿರು ರಮೇಶ. ನೀನು ಅಪ್ಪನಾಗುವ ಹಕ್ಕೇ ಕಳ್ಕೊಂಡಿದ್ದೀಯಾ, ಅಮ್ಮನಿಗೆ ಹೇಳ್ತಿನಿ, ಬೇರೆ ಅಪ್ಪ ಬೇಕು ಅಂತ.

ಮೈಸೂರು ಮಿತ್ರ

ಸೋಮವಾರ, 10 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ.........

'ಕಳ್ಕೊಂಡಾಗಲೇ ಗೊತ್ತಾಗುವುದು ಎಷ್ಟೊಂದು ಅಮೂಲ್ಯವಾದುದು ಎಂದು, ಆ ಪ್ರೀತಿ, ಆ ಸಮಯ, ಆ ವೃತ್ತಿ ಮತ್ತು ಆ ಸಂಬಂಧ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ನೀರಿಗೆ ಹತ್ತ ಇರು, ನೆಂಟರಿಗೆ ದೂರು ಇರು'

## ನಿಮ್ಮ ಪತ್ರಗಳು

### ■ ಕೇಂದ್ರ–ರಾಜ್ಯ ಸರ್ಕಾರಗಳ ಸಾಲದ ಶೂಲ

ಮಾನ್ಯರೆ,

2025–26ನೇ ಸಾಲಿನ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, 1.16 ಲಕ್ಷ ಕೋಟಿ ಸಾಲ ಪಡೆಯುವ ಬಗ್ಗೆ ಪ್ರಸ್ತಾಪಿಸಿರುವ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು, ಇತಿಹಾಸದಲ್ಲಿ ಮೊದಲ ಬಾರಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸಾಲ ಪಡೆಯಲು ಮುಂದಾಗಿದ್ದಾರೆ. ಇದರಿಂದ ರಾಜ್ಯದ ಒಟ್ಟು ಸಾಲದ ಪ್ರಮಾಣ 7.81 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ಆರೋಪಿಸಿದ್ದಾರೆ. (ಪತ್ರಿಕಾ ವರದಿ 8.3.25.)

ಇದಕ್ಕೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯನವರು, 1.16 ಲಕ್ಷ ಕೋಟಿ ಸಾಲವು ಕೇಂದ್ರ ಸರ್ಕಾರ ಹಾಗೂ ಆರ್‌ಬಿಐ ರೂಪಿಸಿರುವ ನಿಯಮಗಳ ಪ್ರಕಾರ, ಬಜೆಟ್ ಗಾತ್ರದ ಶೇ.25ರ ಮಿತಿಯಲ್ಲಿಯೇ ಇದೆ ಎಂದು ಸಮರ್ಥಿಸಿಕೊಂಡಿದ್ದಾರೆ. ಆದರೆ ಸರ್ಕಾರಗಳು ಪ್ರತಿ ವರ್ಷ ಬಜೆಟ್ ಗಾತ್ರವನ್ನು ಏರಿಸುತ್ತಾ ಬರುತ್ತಿರುವುದು, ಹೆಚ್ಚು ಸಾಲ ಪಡೆಯಲು ಹುಡುಕಿಕೊಂಡ ಮಾರ್ಗದಂತಿದೆ! ಇದು ಕಳವಳಕಾರಿ ಸಂಗತಿ.

ಇನ್ನು ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಸಾಲದ ಬಗ್ಗೆ ಕೂಡ ಗಮನ ಸೆಳೆದಿದ್ದಾರೆ. ಕೇಂದ್ರ ಬಜೆಟ್ ಗಾತ್ರ 50.65 ಲಕ್ಷ ಕೋಟಿ ಇದ್ದು, ಈ ವರ್ಷ 15.04 ಲಕ್ಷ ಕೋಟಿ ಸಾಲ ಪಡೆಯಲು ಉದ್ದೇಶಿಸಿದ್ದಾರೆ. ಇದರಿಂದ ಕೇಂದ್ರದ ಒಟ್ಟು ಸಾಲದ ಪ್ರಮಾಣ ಶೇ.56 ದಾಟುತ್ತದೆ. ರಾಜಕೀಯ ಕಾರಣಗಳಿಗಾಗಿ ಟೀಕಿಸುವ ಬದಲು ವಿರೋಧ ಪಕ್ಷಗಳ ನಾಯಕರು ವಸ್ತುಸ್ಥಿತಿಯನ್ನು ಗಮನಿಸಬೇಕು ಎಂದು ತಿರುಗೇಟು ನೀಡಿದ್ದಾರೆ. ಒಟ್ಟಿನಲ್ಲಿ ಅಪ್ಪ–ಅಮ್ಮ ಜಗಳದಲ್ಲಿ ಕೂಸು ಬಡವಾಯ್ತು ಎಂಬಂತೆ ದೇಶದ ಜನರು ರಾಜ್ಯ–ಕೇಂದ್ರಗಳ ಸಾಲದ ಶೂಲದಲ್ಲಿ ಸಿಲುಕಿರುವುದಂತೂ ಸತ್ಯ!! **–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.**

### ■ ಮದ್ಯದ ಅಂಗಡಿ ಸ್ಥಳಾಂತರಿಸಿ

ಮಾನ್ಯರೆ,

ದಕ್ಷಿಣ ಕಾಶಿ ನಂಜನಗೂಡಿನ ದೇವೀರಮ್ಮನಹಳ್ಳಿಯ ಬಸವೇಶ್ವರ ವೃತ್ತದಲ್ಲಿ ಮದ್ಯದ ಅಂಗಡಿಯೊಂದನ್ನು ತೆರೆಯಲಾಗಿದೆ. ಅಂಗಡಿಯ 100 ಮೀಟರ್ ಸುತ್ತಮುತ್ತ ಶಾಲೆ, ಕಾಲೇಜುಗಳು, ಮಠ, ಮದುವೆ ಮಂಟಪಗಳು, ಬಸ್ ಸ್ಟಾಪ್ ಇದೆ. ಜೊತೆಗೆ ಹೆಣ್ಣು ಮಕ್ಕಳು, ವಿದ್ಯಾರ್ಥಿಗಳು ಸೇರುವ ಸ್ಥಳಗಳಿದ್ದು, ಇದರ ಮಧ್ಯ ಮದ್ಯದ ಅಂಗಡಿ ಇರುವುದು ಮುಜುಗರದ ಸಂಗತಿ.

ಇದಲ್ಲದೆ ಸಾಂಸ್ಕೃತಿಕ ನಾಯಕ ಶ್ರೀ ಬಸವಣ್ಣನವರ ಹೆಸರು ಇರುವ ವೃತ್ತದಲ್ಲೇ ಮದ್ಯದಂಗಡಿ ಇರುವುದು ಬೇಸರ ಉಂಟಾಗಿದೆ. ಈಗಾಗಲೇ ಕೆಲವು ತಿಂಗಳ ಹಿಂದೆ ಮದ್ಯದ ಅಂಗಡಿ ತೆರೆಯಬೇಡಿ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್.ಎಂ.ಕೆಂಪಣ್ಣ ನೇತೃತ್ವದಲ್ಲಿ ಮತ್ತು ಸ್ಥಳೀಯ ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು. ಆದರೂ ಸಹ ಪ್ರತಿಭಟನೆಗೆ ಸ್ಪಂದಿಸದೆ ಮದ್ಯದ ಅಂಗಡಿಯನ್ನು ತೆರೆದಿದ್ದಾರೆ.ದಯವಿಟ್ಟು ಇದರ ಬಗ್ಗೆ ಕ್ಷೇತ್ರದ ಶಾಸಕರು, ಅಧಿಕಾರಿಗಳು ಗಮನವರಿಸಿ ಮದ್ಯದ ಅಂಗಡಿಯನ್ನು ಸ್ಥಳಾಂತರಿಸಬೇಕೆಂದು ಕೇಳಿಕೊಳ್ಳುತೇವೆ.

**–ಮಹಾಂತೇಶ್, ಬಳ್ಳೂರುಹುಂಡಿ, ನಂಜನಗೂಡು ತಾಲೂಕು**

### ■ ಪ್ಲಾಸ್ಟಿಕ್ ಬಳಸುವವರ ವಿರುದ್ಧ ಕ್ರಮ ಕೈಗೊಳ್ಳಿ

ಮಾನ್ಯರೆ,

ಇತ್ತೀಚಿಗಷ್ಟೇ ರಾಜ್ಯ ಸರ್ಕಾರ ಆಹಾರ ತಯಾರಿಕೆಯ ವೇಳೆ ಪ್ಲಾಸ್ಟಿಕ್ ಬಳಸಿದರೆ ಕ್ಯಾನ್ಸರ್ ಬರುತ್ತದೆ ಎಂಬ ಕಾರಣದಿಂದ ನಿಷೇಧಿಸಲು ಆದೇಶಿಸಿದೆ. ಪ್ಲಾಸ್ಟಿಕ್ ಬಳಕೆ ಎಂಬುದು ಇಡ್ಲಿ ತಯಾರಿಕೆಗೆ ಮಾತ್ರವಲ್ಲದೆ ಪ್ಲಾಸ್ಟಿಕ್ ಲೋಟ, ತಟ್ಟೆಗಳು ಬಳಕೆ ಮಾಡುವುದು ಅರೋಗ್ಯಕ್ಕೆ ಹಾನಿಕರ ಎಂಬುದು ವೈಜ್ಞಾನಿಕವಾಗಿ ದೃಢಪಟ್ಟಿದೆ. ಆದರೂ ಸಹ ಕೆಲ ಹೋಟೆಲ್, ಬೇಕರಿಗಳಲ್ಲಿ ಇಂದಿಗೂ ಆಹಾರ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಅನ್ನು ಅತಿ ಹೆಚ್ಚು ಬಳಸುತ್ತಾರೆ. ಹೋಟೆಲ್ ಮತ್ತು ಫಾಸ್ಟ್ ಫುಡ್ ಕೇಂದ್ರಗಳಲ್ಲಿ ತಿಂಡಿ, ಊಟ ಬಡಿಸುವುದಕ್ಕೆ ಪ್ಲಾಸ್ಟಿಕ್ ಪೇಪರ್ ಅನ್ನು ಹಾಕಿ ನಂತರ ಊಟ ತಿಂಡಿ ಕೊಡುತ್ತಿದ್ದಾರೆ.

ಹೋಟೆಲ್ ಹಾಗೂ ಚಹಾ ಅಂಗಡಿಗಳಲ್ಲಿ ಜ್ಯೂಸು ಮತ್ತು ಸಮಾರಂಭಗಳಲ್ಲಿ ಚಹಾ ಪಾನೀಯಗಳನ್ನು ಪ್ಲಾಸ್ಟಿಕ್ ಲೇಪದ ಕಾಗದದಿಂದ ತಯಾರಿಸಿದ ಲೋಟ/ಕಪ್ನಲ್ಲಿ ನೀಡಲಾಗುತ್ತಿದೆ. ಬಿಸಿ ಬಿಸಿ ಅದ ಚಹಾ, ತಿಂಡಿ ತಿನ್ನಿಸು ಅನ್ನು ಕಪ್ ಹಾಗೂ ಹಾಳೆಯ ಮೇಲೆ ಹಾಕಿದಾಗ ಅದರಲ್ಲಿರುವ ರಾಸಾಯನಿಕ ಅಂಶಗಳು ಕರಗಿ ಬೆರೆಯುತ್ತದೆ. ಇದರಿಂದ ಜನರ ಆರೋಗ್ಯದ ಮೇಲೆ ನಕರಾತ್ಮಕ ಪರಿಣಾಮ ಬೀರುತ್ತೆ. ಸಾರ್ವಜನಿಕರು ಈ ಬಗ್ಗೆ ಜಾಗೃತಿ ವಹಿಸಬೇಕು. ಪ್ಲಾಸ್ಟಿಕ್ ಬಗ್ಗೆ ಸರ್ಕಾರವೇ ನಿಷೇಧಿಸಿದ್ದರೂ, ಬಹುತೇಕರು ಪ್ಲಾಸ್ಟಿಕ್ ಬಳಕೆ ಮಾಡುತಿದ್ದರೆ ಅಂತಹವರ ವಿರುದ್ಧ ಕಾನೂನು ಕ್ರಮ ಜಾರಿಗೊಳಿಸಬೇಕು.

**–ಪಿ.ಭಾಗ್ಯ, ಪತ್ರಿಕೋದ್ಯಮ ವಿದ್ಯಾರ್ಥಿ, ಮಹಾರಾಣಿ ಮಹಿಳಾ ಕಲಾ ಕಾಲೇಜು.**

### ■ ರಸ್ತೆ ದುರಸ್ತಿ ಮಾಡಲು ಮನವಿ

ಮಾನ್ಯರೆ,

ಮೈಸೂರಿನ ಶ್ರೀರಾಂಪುರದಿಂದ ಜಡ್ಜ್ ಕ್ವಾಟ್ರಸ್ ಮಾರ್ಗವಾಗಿ ಇರುವ



ರಸ್ತೆಯು ಸಂಪೂರ್ಣವಾಗಿ ಹದಗೆಟ್ಟಿರುವ ಕಾರಣ ಯಾವುದೇ ವಾಹನಗಳು ಸಂಚರಿಸಲು ಸಾಧ್ಯವಾಗುತ್ತಿಲ್ಲ. ಈ ರಸ್ತೆಯು ತುಂಬೆಲ್ಲ ಹೆಚ್ಚು ಕಲ್ಲು ಮತ್ತು ಮಣ್ಣಿನಿಂದ ಕೂಡಿದ್ದು ರೋಡಿನಲ್ಲಿ ನಡೆದಾಡಲು ಸಹ ಕಷ್ಟವಾಗುತ್ತಿದೆ. ರಸ್ತೆ ಬದಿಯಲ್ಲಿರುವ ಚರಂಡಿಯ ವ್ಯವಸ್ಥೆ ಸರಿ ಇಲ್ಲದ ಕಾರಣ, ಚರಂಡಿ ತುಂಬಿದ ಕೊಳಚೆ ನೀರು ರಸ್ತೆಯ ಮೇಲೂ ಹರಿಯುತ್ತಿರುತ್ತದೆ. ವಾಹನ ಸವಾರರು ಹಾಗೂ ಪಾದಚಾರಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಸಮಸ್ಯೆಯನ್ನು ಪರಿಹರಿಸುವ ಕಡೆ ಗಮನಹರಿಸಲಿ.

**–ರಾಧಿಕ ಬಿ.ಆರ್, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು**

# ಜೀವನ ಸಾಗಿಸಲು ವಿದ್ಯೆಗಿಂತ ಅನುಭವವೇ ಲೇಸು...!

ಆಗತಾನೆ ಮಧ್ಯಾಹ್ನದ ಊಟ ಮುಗಿಸಿ ಕುಳಿತಿದ್ದೆ. ಬಿಸಿಲಿನ ತಾಪ ಬೇರೆ ಹೆಚ್ಚಾಗಿಯೇ ಇತ್ತು. ಸುಮಾರು ಮೂರು ಗಂಟೆಯ ಸಮಯವಾಗಿತ್ತು. ಇದ್ದಕ್ಕಿದ್ದಂತೆ ಕರೆಯೊಂದು ಬಂತು. ಯಾರದ್ದೆಂದು ನೋಡಲಾಗಿ, ಅದು ಗೆಳೆಯನ ಕರೆ. ಅವರು ನನಗಿಂತ ಹಿರಿಯರು. ಒಂದೇ ಶಾಲೆಯಲ್ಲಿ ಓದಿದವರು, ಒಮ್ಮೊಮ್ಮೆ ಸಭೆ–ಸಮಾರಂಭಗಳಲ್ಲಿ ಸಿಕ್ಕಾಗ ಕಷ್ಟ–ಸುಖಗಳನ್ನು ಹಂಚಿಕೊಳ್ಳುತ್ತಿದ್ದೆವು.

ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ವಯೋ ನಿವೃತ್ತಿಗೊಂಡು ಮೈಸೂರಿನಲ್ಲಿ ನೆಲೆಸಿದ್ದಾರೆ. ಪಿಂಚಣಿಯು ಬರುತ್ತಿದೆ. ಊರಿನಲ್ಲಿ ನೀರಾವರಿ ಜಮೀನೂ ಇದೆ. ಇವರಿಗೆ ಇಬ್ಬರು ಮಕ್ಕಳು. ಮಗ ಮತ್ತು ಮಗಳು. ಇಬ್ಬರೂ ಉನ್ನತ ಪದವಿಗಳನ್ನು ಪಡೆದು ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಮಗ ವಿದೇಶದಲ್ಲಿ ಕೆಲಸ ಮಾಡುತ್ತಿದ್ದಾನೆ. ಒಟ್ಟಿನಲ್ಲಿ ಉತ್ತಮ ಜೀವನಕ್ಕೆ ಹಣದ ಕೊರತೆ ಇಲ್ಲ. ಮಗನಿಗೆ ಮದುವೆ ಆಗಿ ಐದು ವರ್ಷ ದಾಟಿದೆ. ಮಗಳಿಗೆ ವರನನ್ನು ಹುಡುಕುತ್ತಿದ್ದಾರೆ.

ಅಂದು ಅವರು ನನಗೆ ಕರೆ ಮಾಡಿದಾಗ ಮಾತಿನ ಸ್ವರದಲ್ಲಿ ನೋವಿತ್ತು. ಮುಂದಿನ ದಿನಗಳನ್ನು ಕಳೆಯುವುದು ಹೇಗೆ ಎನ್ನುವ ಭಯವಿತ್ತು. ಪ್ರಾರಂಭದಲ್ಲಿ ಲೋಕಾರೂಡಿ ಮಾತುಗಳನ್ನಾಡುತ್ತಾ ಮುಖ್ಯ ವಿಷಯಕ್ಕೆ ಬರಲು ಅಂಜಿಕೊಳ್ಳುತ್ತಿದ್ದರು. ನನಗಿದ್ದ ಅನುಭವದಲ್ಲಿ ಕೌಟುಂಬಿಕ ಸಮಸ್ಯೆ ಇರುವುದು ಖಾತ್ರಿ ಆಗಿತ್ತು. ತಮ್ಮ ಸಮಸ್ಯೆಯನ್ನು ಹೇಳಿಕೊಳ್ಳಲಾಗದೆ ಪಕ್ಕದಲ್ಲೇ ಇದ್ದ ಅವರ ಪತ್ನಿ ಪಿಸು ಧ್ವನಿ ಹೇಳ್ರಿ ಹೇಳ್ರಿ ಎಂಬುದು ಅಸ್ಪಷ್ಟವಾಗಿ ಕೇಳುತ್ತಿತ್ತು. ಬಹುಶಃ ಸಮಸ್ಯೆಯನ್ನು ಹೇಳುವಂತೆ ಒತ್ತಾಯಿಸುತ್ತಿರಬಹುದು.

ಇದಕ್ಕೆ ಕಾರಣವು ಇಲ್ಲದಿಲ್ಲ. ಕಳೆದ ವಾರಗಳಲ್ಲಿ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ನನ್ನ ಲೇಖನಗಳನ್ನು ಅವರು ಓದಿದ ಪರಿಣಾಮವಾಗಿ ನನಗೆ ಕರೆ ಮಾಡಿದ್ದರು, ಏಕೆಂದು ಮುಂದೆ ಹೇಳುವೆ.


ಇವರ ಹಿಂಜರಿಕೆಯನ್ನು ನೋಡಿ ನಾನೇ ಕೆದಕಿದೆ? ಏನ್ ಸಾರ್ ನಿಮ್ಮ ಮಗ ಸೊಸೆ ಚೆನ್ನಾಗಿ ಇದ್ದಾರೆಯೇ? ಫಾರೀನ್ ಜೀವನ ಹೇಗಂತೆ? ಮಕ್ಕಳು ಆಗಿವೆಯೇ? ಎಂಬ ಪ್ರಶ್ನೆಗಳನ್ನಿಟ್ಟೆ. ತಕ್ಷಣ ಅದಕ್ಕಾಗಿಯೇ ಕಾದಿದ್ದವರಂತೆ ಚಂದ್ರು ಅದೇ ವಿಷಯ ಹೇಳ್ಬೇಕು ಅಂತ್ಲೇ ಫೋನ್ ಮಾಡಿದ್ದು. ಹೇಗೆ ಪ್ರಾರಂಭ ಮಾಡೋದು ಎಂದು ತಿಳಿಯದೆ ಚಡಪಡಿಸುತ್ತಿದ್ದೆ ಎಂದರು. ಮುಂದುವರೆದು ನನಗಿಂತ ನನ್ನ ಹೆಂಡತಿ ಚೆನ್ನಾಗಿ ಹೇಳುತ್ತಾರೆ ಕೇಳಿ ಎಂದು ಮೊಬೈಲ್‌ನ್ನು ಅವರ ಪತ್ನಿಯವರ ಕೈಗಿತ್ತರು.

ಅವರು ತಮ್ಮ ನೋವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಆಗಾಗ್ಗೆ ತಮ್ಮ ಗಂಡನಿಗೂ ಕೊಟ್ಟು ಬರೋಬ್ಬರಿ ಒಂದು ಮುಕ್ಕಾಲು ಗಂಟೆ ಮಾತನಾಡಿದರು. ಅವರು ಮಗನ ಮದುವೆ ನಡೆದು ಐದು ವರ್ಷಗಳಾಗಿ ಇಲ್ಲಿವರೆಗೆ ಅನುಭವಿಸಿದ ನೋವಿನ ಕಥೆಯನ್ನು ಬಿಚ್ಚಿಟ್ಟಿದ್ದು, ಒಂದು ಸಿನಿಮಾ ನೋಡಿದಂತಾಯಿತು.

ಮುದ್ದಿನ ಮಗ ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾನೆ. ನೋಡುವುದಕ್ಕೆ ತಂದೆಗಿಂತಲೂ ಸುಂದರವಾಗಿದ್ದಾನೆ. ಓದು ಮುಗಿಯುತ್ತಿದ್ದಂತೆ ವಿದೇಶದ ಕಂಪನಿಯಲ್ಲಿ ಉದ್ಯೋಗ. ಸಾಕಷ್ಟು ಸಂಬಳ ಬರುತ್ತಿರುವ ಕೆಲಸ. ಓದು ಹಾಗೂ ಕೆಲಸಗಳಾದ ಮೇಲೆ ಉಳಿದಿರುವುದು ಮದುವೆ ತಾನೆ.

ಒಳ್ಳೆಯ ಕುಟುಂಬವಾದ್ದರಿಂದ ಬಹಳಷ್ಟು ಸಂಬಂಧಗಳು ಹೆಣ್ಣು ಕೊಡುವುದಕ್ಕೆ ಮುಂದೆ ಬಂದವು. ಹುಡುಗನಿಗೆ ಹೆತ್ತವರನ್ನು ಚೆನ್ನಾಗಿ ನೋಡಿಕೊಳ್ಳುವ ಹುಡುಗಿ ಬೇಕೆಂದು ಕಷ್ಟಗಳನ್ನು ಅನುಭವಿಸಿದ ಹುಡುಗಿ ಬಂದರೆ ಒಳ್ಳೆಯದೆಂದು ಸಾಮಾನ್ಯ ಕುಟುಂಬದ ಹೆಣ್ಣು ಮಗಳನ್ನು ಒಪ್ಪಿ ಮದುವೆ ಮಾಡಿಕೊಂಡ. ಇವನ ರೂಪಕ್ಕೆ ಸ್ವಲ್ಪವೂ ಹೊಂದದ ಗೋಧಿ ಬಣ್ಣದ ಹುಡುಗಿ, ಮದುವೆಗೆ ಬಂದವರಲ್ಲಿ ಹಲವರು ಮುದ್ದಾದ ಹುಡುಗನಿಗೆ ಇಂತಹ ಹುಡುಗಿಯೇ? ಎಂದು ಮಾತನಾಡಿದ್ದು ಅಮ್ಮನ ಕಿವಿಗೆ ಬಿದ್ದಿದೆ, ರೂಪಕ್ಕಿಂತ ಗುಣ ಮುಖ್ಯ ಎನ್ನುವುದನ್ನು ವರ ಹಾಗೂ ಹೆತ್ತವರು ಬಯಸಿದ್ದು, ಗುಣ ಹೇಗೆಂದು ಕುಟುಂಬದ ಜೊತೆಯಲ್ಲಿ ಬಾಳ್ವೆ ಮಾಡಿದಾಗ ತಾನೆ ನಿರ್ಧಾರ ಆಗುವುದು.

ನಾವು ಬಡವರು, ನಿಮಗೆ ಯಾವುದರಲ್ಲೂ ಮ್ಯಾಚ್ ಆಗುವುದಿಲ್ಲ. ಒಳ್ಳೆಯ ಸಂಬಳ ಇದೆ. ಹೆಚ್ಚು ಓದಿದ್ದೀರಿ. ಸುಂದರವಾಗಿದ್ದೀರಿ. ನನ್ನ ಅದೃಷ್ಟ ನೀವು ಒಪ್ಪಿರುವುದು, ತಮಗೆ ವರದಕ್ಷಿಣೆ ಕೊಡುವುದಕ್ಕೂ ಶಕ್ತಿ ಇಲ್ಲದವರು. ನೀವು ಎಷ್ಟು ಒಳ್ಳೆಯವರು? ಎಂದೆಲ್ಲಾ ಪ್ರಾರಂಭದಲ್ಲಿ ಮೃದುವಾಗಿ ಮಾತನಾಡಿದ್ದು, ಎಂತಹ ಒಳ್ಳೆಯ ಹೆಂಡತಿ ಸಿಕ್ಕಳು ಎಂದು ಖುಷಿಗೊಂಡ ಹುಡುಗ, ನನಗೆ ಇದ್ಯಾವುದೂ



> ❝ ಇಂದಿನ ದಿನಗಳಲ್ಲಿ ವಿದ್ಯಾವಂತ ಮಕ್ಕಳು ತಮ್ಮ ಜೀವನದ ನಿರ್ಧಾರಗಳನ್ನು ಹೆತ್ತವರ ಬದಲು ತಾವೇ ತೆಗೆದುಕೊಳ್ಳುತ್ತಿದ್ದಾರೆ. ಇದು ಸಂಸಾರಗಳು ದಾರಿ ತಪ್ಪುವುದಕ್ಕೆ ಕಾರಣವಾಗುತ್ತಿದೆ. ಉನ್ನತ ವಿದ್ಯೆ ಕಲಿತ ಮಕ್ಕಳೇ ನಿಮಗೆ ವಿಷಯದ ಅರಿವು ಚೆನ್ನಾಗಿಯೇ ಇರಬಹುದು ಆದರೆ ಜೀವನ ಬಂಡಿಗೆ ಒಂದೊಳ್ಳೆ ಸಾರಥಿಯಾಗಲು ಕಲಿಕೆ ಬೇರೆಯದೇ ಇದೆ!.

ಬೇಕಾಗಿಲ್ಲ. ನಿನ್ನಿಂದ ನಾನು ಬಯಸುವುದು, ಬಂದವರನ್ನು ಚೆನ್ನಾಗಿ ಸತ್ಕರಿಸುವುದು. ನನ್ನ ತಂದೆ–ತಾಯಿಯನ್ನು ನಿಮ್ಮ ತಂದೆ–ತಾಯಿಯಂತೆ ಕಂಡರೆ ಅಷ್ಟೇ ಸಾಕು ಎಂದು ಹೇಳಿದ್ದಾನೆ.

ಅತ್ತೆಯು ನನ್ನ ಸೊಸೆ ಎಲ್ಲಿ ನೊಂದುಕೊಂಡಾಳೋ, ಅವಳು ಖುಷಿಯಾಗಿ ಇಲ್ಲದಿದ್ದರೆ, ನನ್ನ ಮಗ ದುಃಖಿಸಿಯಾನು ಎಂಬ ಭಾವನೆಯಿಂದ ಅಡುಗೆ ಮಾಡಿ ಕುಳಿತಲ್ಲಿಯೇ ಕೈತೊಳೆಸಿ ಊಟ ಮಾಡಿಸುತ್ತಿದ್ದಳು. ಬಹುಶಃ ಮುಂದೆ ಸೊಸೆಯು ಅಟ್ಟಕ್ಕೇರಲು ಕಾರಣವಾಗಿರಬಹುದು. ತನಗೂ ಒಬ್ಬಳು ಮಗಳಿದ್ದಾಳೆ. ಇವಳೂ ನನ್ನ ಮಗಳೇ ಎಂದು ಪ್ರೀತಿಯಿಂದ ನೋಡಿಕೊಂಡಿದ್ದಾಳೆ.

ವಿದೇಶಕ್ಕೆ ಮಗನೊಂದಿಗೆ ಕಳುಹಿಸಿಕೊಟ್ಟಿದ್ದಾರೆ. ನನಗೆ ಬಾಲ್ಕನಿ ಇರುವ ಮನೆಯೇ ಬೇಕು ಎಂದು ಹಠ ಮಾಡಿದ್ದರಿಂದ ಅವಳಿಚ್ಛೆಯಂತೆ ಎಲ್ಲವನ್ನೂ ಕಲ್ಪಿಸಿಕೊಟ್ಟಿದ್ದಾನೆ. ಹೊಸದರಲ್ಲಿ ಎಲ್ಲವೂ ಚೆಂದ, ಬರುಬರುತ್ತಾ ವರಸೆ ಬದಲಾಯಿತು, ಮಾತೊಂದಿದೆ. ಹಳೆ ಚಪ್ಪಲಿ, ಹೊಸ ಹೆಂಡತಿ ಕಚ್ಚೊಲ್ಲ? ಕೆಲವೇ ದಿನಗಳಲ್ಲಿ ವರಸೆ ಬದಲಾಯಿಸಿದ್ದಾಳೆ, ಕಚ್ಚಿದರೆ ಗಾಯವಾಗಿ ಎಲ್ಲರಿಗೂ ತಿಳಿದೀತೆಂದು ಮೈಮೇಲೆ ಗುರುತುಗಳು ಬೀಳುವ ಹಾಗೆ ಹೊಡೆಯುವ ಬದಲು ಮನಸ್ಸಿಗೆ ಘಾಸಿ ಆಗುವಂತೆ ಉದ್ಧಟತನವನ್ನು ತೋರಿಸಲು ಪ್ರಾರಂಭಿಸಿದ್ದಾಳೆ. ಮದುವೆಯಾಗಿ ಐದು ವರ್ಷ ಕಳೆದಿದೆ, ಅತ್ತೆ–ಮಾವ ಹಾಗೂ ಬಂಧು–ಬಳಗವನ್ನು ಬವಣಿಸಿದ್ದು ಅವಳ ಹಿಸ್ಟ್ರಿಯಲ್ಲೇ ಇಲ್ಲ.

ಸೊಸೆಯ ನಡುವಳಿಕೆ ಹೇಗಿತ್ತೆಂದರೆ, ಉಂಬೋಕೆ ಉಡೋಕೆ ಅಣ್ಣಮ್ಮ ಕೆಲಸಕ್ಕೆ ಇಲ್ಲಮ್ಮ ಎಂಬಂತೆ ಆಗಿತ್ತು. ಕಾಕತಾಳೀಯ ಎಂಬಂತೆ ಜೇಷ್ಠಾ ನಕ್ಷತ್ರ, ರಾಕ್ಷಸ ಗಣದ ಗುಣವುಳ್ಳವಳು. ಗಣಕೂಟ ಹೊಂದಾಣಿಕೆ ಆಗುವುದಿಲ್ಲವೆಂದು ಹುಡುಗಿ ಬೇಡವೆಂದು ಸುಮ್ಮನಾಗಿದ್ದರು. ಹುಡುಗಿಯ ಒತ್ತಾಯ ಹಾಗೂ ಶಾಸ್ತ್ರಗಳಲ್ಲಿ ಅಷ್ಟೊಂದು ನಂಬಿಕೆ ಇಲ್ಲದ್ದರಿಂದ ಮತ್ತು ಅನುಕಂಪದಿಂದ ಹುಡುಗನು ಅಪ್ಪ–ಅಮ್ಮನನ್ನು ಒಪ್ಪಿಸಿ ಮದುವೆ ಮಾಡಿಕೊಂಡಿದ್ದಾನೆ. ಮದುವೆ ಆಗುವವರೆಗೂ ಎಲ್ಲವೂ ಸರಿ ಇತ್ತು. ಇದರಲ್ಲಿ ಅತ್ತೆಯೇ ಹೇಳಿದಂತೆ ರಾಕ್ಷಸ ಗಣವಾದ್ದರಿಂದ ಅವಳು ಹಾಗೆ ಆಡುತ್ತಿದ್ದಾಳೆ ಎಂಬುದು ಆಕೆಯ ನಂಬಿಕೆ.

ಮದುವೆ ನಂತರ ಒಂದು ವರ್ಷ ನಮ್ಮ ತಂದೆಯ ಮನೆಯಲ್ಲಿಯೇ ಇರುತ್ತೇನೆ. ಸ್ವಂತ ಮನೆ ಇಲ್ಲ. ಅವರಿಗೆ ಮನೆ ಕಟ್ಟಿಸಿಕೊಡಬೇಕು. ನಂತರ ನಿಮ್ಮ ಮನೆಗೆ ಬರುತ್ತೇನೆ ಎಂದವಳು, ಮದುವೆಯಾಗಿ ಐದು ವರ್ಷವಾದರೂ ತವರು ಮನೆಯನ್ನು ಬಿಟ್ಟು ಬರಲು ಒಪ್ಪುತ್ತಿಲ್ಲ. ಒಂದೇ ಊರಿನಲ್ಲಿ ಇರುವುದರಿಂದ ಶನಿವಾರ–ಭಾನುವಾರವಾದರೂ ಬಾರಮ್ಮ ಎಂದರೂ ಬರುತ್ತಿಲ್ಲ. ಕರೆ ಮಾಡಿ ಅಮ್ಮ ಅಪ್ಪನೊಂದಿಗೆ ಮಾತನಾಡೆಂದು ಹೆಂಡತಿಗೆ ಮಗ ಹೇಳಿದರೆ, ಅವರೊಂದಿಗೆ ನಾನು ಮಾತನಾಡುವುದು ಏನಿದೆ? ಎಂಬ ಉದ್ಧಟತನ. ನಿನಗೆ ಸಂಬಳ ಎಷ್ಟು ಬರುತ್ತಿದೆ? ಅಕೌಂಟ್‌ನಲ್ಲಿ ಬ್ಯಾಲೆನ್ಸ್ ಎಷ್ಟಿದೆ? ಲೆಕ್ಕ ಕೊಡು. ಎಂದು ಕೇಳುತ್ತಾಳೆ. ಸಂಪ್ರದಾಯದಂತೆ ಹಣೆಗೆ ಕುಂಕುಮ ಇಟ್ಟುಕೊಳ್ಳಲು ಹೇಳಿದರೆ, ನನ್ನಿಷ್ಟದಂತೆ ಇರುವೆ, ನೀನು ಏನನ್ನೂ ಹೇಳುವ ಅವಶ್ಯಕತೆ ಇಲ್ಲವೆಂದು ನಿಷ್ಟುರವಾಗಿ ಮಾತನಾಡುವುದೂ ನಡೆದಿದೆ. ಎಲ್ಲವನ್ನೂ ಸಮಚಿತ್ತದಿಂದಲೇ ಸ್ವೀಕರಿಸಿಕೊಂಡು ಬರುತ್ತಿದ್ದರು ನೆಮ್ಮದಿ ಇಲ್ಲವಾಗಿದೆ. ಗಂಡನೊಟ್ಟಿಗೆ ಇದ್ದಷ್ಟು ದಿನಗಳಾದರೂ ನೆಮ್ಮದಿ ಇತ್ತೆ, ಇಲ್ಲವೇ ಇಲ್ಲ. ಆಕೆ ನೀಡುವ ನಿತ್ಯದ ಕಿರಿಕಿರಿಯ ಜೊತೆಗೆ ಮಲಗಿದ್ದಾಗ ಮನೆಯೊಳಗೆ ಡಿಜೆ ಸೆಟ್ ಹಾಕಿದಂತೆ ಕರ್ಕಶವಾದ ಗೊರಕೆ ಶಬ್ದ ಮಾಡುತ್ತಾಳೆ. ಅದನ್ನು ಸಹಿಸಿಕೊಂಡು ನಲುಗಿ ಹೋಗಿದ್ದಾನೆ ಗಂಡ ಮಹಾಶಯ. ಈ ಸಮಸ್ಯೆ ಇದೆಯೆಂದು ಮದುವೆಗೆ ಮುಂಚೆ ನಿಮಗೆ ಹೇಳಿದ್ದಿದ್ದರೆ ನನ್ನನ್ನು ನೀವು ಮದುವೆ ಆಗುತ್ತಿದ್ರಾ? ಎಂದು ಕೇಳುತ್ತಾಳೆ.

ಕುಟುಂಬದಲ್ಲಿ ನೆಮ್ಮದಿಯು ಇಲ್ಲವಾಗಿದೆ. ಮನೆಯಲ್ಲಿ ಮದುವೆಯ ವಯಸ್ಸು ಮೀರುತ್ತಿರುವ ಸ್ನಾತಕೋತ್ತರ ಪದವಿ ಪಡೆದು ಉದ್ಯೋಗದಲ್ಲಿರುವ ಮಗಳಿದ್ದಾಳೆ. ಮಗನ ಕೌಟುಂಬಿಕ ಸಮಸ್ಯೆಯ ಜೊತೆಗೆ ಮದುವೆ ಮಾಡುವ ಚಿಂತೆ.

ಮದುವೆ ನಂತರ ಮಕ್ಕಳು ತಾನೆ, ಗರ್ಭಿಣಿ ಆಗಿ, ಸೀಮಂತ ಮಾಡಿಸಿ ಕೊಳ್ಳುವಾಗಲೂ ತಕರಾರು, ವಿದೇಶದಲ್ಲಿ ಇರುವ ಗಂಡ ಬಂದ್ರೆ ನಾನು ಮಾಡಿಸಿಕೊಳ್ಳುವುದು ಎಂದು ಹಠ ಮಾಡಿದ್ದಾಳೆ. ವರ್ಷದಲ್ಲಿ ಎರಡು–ಮೂರು ಬಾರಿ ರಜೆ ಸಿಗುವುದಿಲ್ಲವೆಂದರೂ ಬಿಟ್ಟಿಲ್ಲ. ಚೆಂದವಾದ ಮಗು ಜನಿಸಿತು, ಮೊಮ್ಮಗನನ್ನು ನೋಡಿ ಹರ್ಷಗೊಂಡಿದ್ದಾರೆ. ಮಗುವಾದ ನಂತರವಾದರೂ ಸೊಸೆಯು ಮೃದು ಆಗಬಹುದು. ಗಂಡನೊಟ್ಟಿಗೆ ಚೆನ್ನಾಗಿ ಬಾಳುತ್ತಾಳೆ ಎಂಬ ನಿರೀಕ್ಷೆಯೂ ಹುಸಿಯಾಗಿದೆ. ನಾಮಕಾರಣಕ್ಕೆ ಅಜ್ಜಿ–ತಾತನನ್ನು ಕರೆದಿಲ್ಲ. ಇತ್ತ ಗಂಡನನ್ನೂ ಗಣನೆಗೆ ತೆಗೆದುಕೊಂಡಿಲ್ಲ. ಈಗ ಮಗುವಿಗೆ ಎರಡು ವರ್ಷ, ಮುದ್ದಾಡುವ ಆಸೆ, ಮನೆಗೆ ಬರುತ್ತಿಲ್ಲ. ಮಗುವನ್ನು ನೋಡಲು ಇವರು ಅಲ್ಲಿಗೆ ಹೋದರೆ ತಿರಸ್ಕಾರದ ನಡುವಳಿಕೆ, ಒಟ್ಟಿನಲ್ಲಿ ಕುಟುಂಬದಲ್ಲಿ ನೆಮ್ಮದಿ ಇಲ್ಲವಾಗಿದೆ.

ಮಗನಿಗೆ ಮದುವೆ ಯಾಕಾದರೂ ಮಾಡಿದೆವೋ ಎಂಬ ಮಾತು ಹೆತ್ತವರಿಂದ ಬರುತ್ತಿದೆ. ನನ್ನ ಮಗ ವಿದೇಶದಲ್ಲಿ ಬಾರಿ ಮೊತ್ತವನ್ನು ಪಡೆಯುವ ಉನ್ನತ ಹುದ್ದೆಯಲ್ಲಿ ಇದ್ದರೂ ಸಂಸಾರದಲ್ಲಿ ಸುಖ ಪಡೆಯುವ ಯೋಗ ಇಲ್ಲವಾಗಿದೆ ಎಂಬ ಕೊರಗು ಇವರಿಗೆ. ಸೊಸೆ ಕೊಡುತ್ತಿರುವ ಮಾನಸಿಕ ಹಿಂಸೆಯನ್ನು ಒಬ್ಬರಾದ ಮೇಲೆ ಒಬ್ಬರಂತೆ ನೆನೆ–ನೆನೆದು ಹೇಳಿಕೊಳ್ಳುತ್ತಿದ್ದಾರೆ.

ಈ ಕುಟುಂಬದ ಕಥೆಯಲ್ಲಿ ಯಾರು ಒಳ್ಳೆಯವರು, ಯಾರು ಕೆಟ್ಟವರು ಎಂದು ನಾನು ನಿರ್ಧರಿಸಲಾರೆ. ಏಕೆಂದರೆ ನನಗೆ ಕಷ್ಟವನ್ನು ಹೇಳಿಕೊಂಡವರು ಹುಡುಗನ ತಂದೆ–ತಾಯಿ ಮಾತ್ರ. ಇನ್ನು ಸೊಸೆ ಮತ್ತು ಬೀಗರ ಹೇಳಿಕೆಗಳು ಹೇಗಿರುತ್ತೋ ತಿಳಿಯದು.

ಇಂದಿನ ದಿನಗಳಲ್ಲಿ ವಿದ್ಯಾವಂತ ಮಕ್ಕಳು ತಮ್ಮ ಜೀವನದ ನಿರ್ಧಾರಗಳನ್ನು ಹೆತ್ತವರ ಬದಲು ತಾವೇ ತೆಗೆದುಕೊಳ್ಳುತ್ತಿದ್ದಾರೆ. ಇದು ಸಂಸಾರಗಳು ದಾರಿ ತಪ್ಪುವುದಕ್ಕೆ ಕಾರಣವಾಗುತ್ತಿದೆ. ಉನ್ನತ ವಿದ್ಯೆ ಕಲಿತ ಮಕ್ಕಳೇ ನಿಮಗೆ ವಿಷಯದ ಅರಿವು ಚೆನ್ನಾಗಿಯೇ ಇರಬಹುದು ಆದರೆ ಜೀವನ ಬಂಡಿಗೆ ಒಂದೊಳ್ಳೆ ಸಾರಥಿಯಾಗಲು ಕಲಿಕೆ ಬೇರೆಯದೇ ಇದೆ!.

ಕರೆ ಮಾಡಿ ಒಂದು ಮುಕ್ಕಾಲು ಗಂಟೆ ದಾಟಿತು. ಅವರ ನೋವಿನ ಕಥೆ ನಿಲ್ಲುವಂತೆ ಕಾಣುತ್ತಿಲ್ಲ. ಸಂಪೂರ್ಣ ರಾಮಾಯಣದ ಕಥೆಗೂ ಕಾಲಮಿತಿ ಇದೆ, ಆದರೆ ಇವರ ವ್ಯಥೆಯ ಕಥೆ ಪ್ರಾರಂಭವಾಗಿ 5 ವರ್ಷಗಳಾಗಿವೆ ನಿಲ್ಲುವ ಸೂಚನೆಗಳು ಕಾಣುತ್ತಿಲ್ಲ. ಮೊಮ್ಮಗನ ಬೆಳವಣಿಗೆ ನೋಡಬೇಕು. ಅವನನ್ನು ಮುದ್ದಿಸಬೇಕೆಂಬ ಹಂಬಲ ಇವರಿಗೆ, ಇವರ ಆಸೆ ಫಲಿಸುತ್ತದೆಯೋ ಇಲ್ಲವೋ ಸ್ವತಃ ಅವರಿಗೂ ನಂಬಿಕೆ ಇಲ್ಲ. ಸೊಸೆ ಮೈಸೂರಿನಲ್ಲಿ ಮಗ ವಿದೇಶದಲ್ಲಿ, ದ'ಂ'ಪ'ತಿ ಜೊತೆ ಸೇರುವುದಕ್ಕೆ ಸಮಸ್ಯೆ ಇದೆ. ಕಡೆಗೆ ನನಗನಿಸಿದ್ದು, ವಿದ್ಯೆ ಕಲಿತವರಿಗಿಂತ ಅವಿದ್ಯಾವಂತರೇ ಮೇಲೆಂದು, ಅವರಾದರೂ ಸಮಾಜಕ್ಕೆ ಅಂಜಿ ತಗ್ಗಿಬಗ್ಗಿ ನಡೆಯುತ್ತಾರೆ, ಇವರಿಗೆ ಏನಾಗಿದೆ?.



ಮಿರ್ಲೆ ಚಂದ್ರಶೇಖರ

ಮೊ: 9916129654

# ಬೆಂಗಳೂರು ವಿವಿಗೆ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಹೆಸರು ನಾಮಕರಣ: ಜೆಡಿಎಸ್ ವಿರೋಧ

## ಸಿದ್ದರಾಮಯ್ಯನವರ ಮೈಸೂರಿನ ಹೊಸ ಮನೆ, ಸೊಸೆಯ ಐಶಾರಾಮಿ ಕ್ಲಬ್‌ಗೆ ಸಿಂಗ್ ಹೆಸರಿಡಲು ಸಲಹೆ

ಬೆಂಗಳೂರು, ಮಾ.9– ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಹೆಸರು ನಾಮಕರಣ ಮಾಡುವುದಕ್ಕೆ ಜೆಡಿಎಸ್ ಕಿಡಿಕಾರಿದೆ. ಮೈಸೂರಿನ ಹೊಸ ಮನೆ ಅಥವಾ ಸೊಸೆಯ ಐಷಾರಾಮಿ ಕ್ಲಬ್‌ಗೆ ಬೇಕಾದರೆ ಮನಮೋಹನ್ ಸಿಂಗ್ ಹೆಸರಿಡಿ ಎಂದು ಸಲಹೆ ನೀಡುವ ಮೂಲಕ ಟೀಕಿಸಿದೆ.







ಇತ್ತೀಚಿಗೆ ಮಂಡಿಸಿದ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರು ವಿವಿಗೆ ಮಾಜಿ ಪ್ರಧಾನಿಗಳ ಹೆಸರಿಡುವುದಾಗಿ ಘೋಷಣೆ ಮಾಡಿದ್ದರು. ಈ ಬಗ್ಗೆ ಭಾನುವಾರ ಟ್ವೀಟ್ ಮಾಡಿರುವ ಜೆಡಿಎಸ್, 'ಸಿದ್ದರಾಮಯ್ಯ ಅವರೇ ಬೆಂಗಳೂರು ವಿಶ್ವವಿದ್ಯಾಲಯ ನಿಮ್ಮ ಮನೆತನದ ಆಸ್ತಿಯಲ್ಲ. ಕಾಂಗ್ರೆಸ್ ಪಕ್ಷದ ಆಸ್ತಿಯೂ ಅಲ್ಲ.. ಬೆಂಗಳೂರು ಎಂಬುದು ಈ ನೆಲಮೂಲದ ಹೆಗ್ಗುರುತು. ಸಮಸ್ತ ಕನ್ನಡಿಗರ ಹೆಮ್ಮೆ. ಹಾಗೂ ಕನ್ನಡಿಗರ ಪ್ರತಿಧ್ವನಿ. ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿ ಪಡೆದ ನಗರ. ಬೆಂಗಳೂರು ಎಂಬುದೇ ಒಂದು ವಿಶ್ವ ಪ್ರಸಿದ್ಧ ಬ್ರ್ಯಾಂಡ್. ಅದೇ ಬೆಂಗಳೂರು ಹೆಸರಿಗೆ ಇರುವ ಶಕ್ತಿ. ನಮಗೆ ಡಾ.ಮನಮೋಹನ್ ಸಿಂಗ್ ಅವರ ಮೇಲೆ ಅಪಾರವಾದ ಗೌರವವಿದೆ. ಆದರೆ ಬೆಂಗಳೂರು ನಗರ ವಿವಿಗೆ ಪರ್ಯಾಯವಾಗಿ ಬೇರೆ ಯಾವುದೇ ಹೆಸರಿಡಲು ತೀವ್ರ ವಿರೋಧವಿದೆ ಎಂದು ಹೇಳಿದೆ.

ಈ ವಿಚಾರದಲ್ಲಿ ಕರ್ನಾಟಕದ ಜನತೆಯೂ ಕಾಂಗ್ರೆಸ್ ಸರ್ಕಾರದ ಈ ನಿರ್ಧಾರವನ್ನು ಒಪ್ಪುವುದಿಲ್ಲ. ರಾಜ್ಯದಲ್ಲಿ ಕನ್ನಡ ಭಾಷೆ, ನೆಲ, ಜಲ ನಾಡಿಗಾಗಿ ಹೋರಾಡಿದ ಸಾವಿರಾರು ಕನ್ನಡಿಗ ಸಾಧಕರು ಇದ್ದಾರೆ. ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಕರ್ನಾಟಕಕ್ಕೆ ಕೀರ್ತಿ ತಂದ ಮಹನೀಯರಿದ್ದಾರೆ. ಆ ಕನ್ನಡಿಗರು ಕಾಂಗ್ರೆಸ್ಸಿಗರ ಕಣ್ಣಿಗೆ ಬೀಳಲಿಲ್ಲವೇ? ಎಂದು ಪ್ರಶ್ನೆ ಮಾಡಿದೆ.

ಸಿದ್ದರಾಮಯ್ಯನವರೇ ಅಷ್ಟು ಅಭಿಮಾನ, ಗೌರವ ಇದ್ದರೆ ಮೈಸೂರಿನಲ್ಲಿ ನಿರ್ಮಿಸುತ್ತಿರುವ ನಿಮ್ಮ ಹೊಸ ಮನೆಗೆ ಮನಮೋಹನ್ ಸಿಂಗ್ ನಿವಾಸ ಎಂದು ಹೆಸರಿಟ್ಟುಕೊಳ್ಳಿ. ನಿಮ್ಮ ಸೊಸೆಯ ಒಡೆತನದಲ್ಲಿರುವ ಬಹುಕೋಟಿ ಮೌಲ್ಯದ ಐಶಾರಾಮಿ ಕ್ಲಬ್‌ಗೆ ಸಿಂಗ್ ಹೆಸರು ಮರು ನಾಮಕರಣ ಮಾಡಿಕೊಳ್ಳಿ ಎಂದು ಸಲಹೆ ನೀಡಿದೆ.

ದೆಹಲಿಯ ಹೊಸದಾಗಿ ನಿರ್ಮಿಸಿದ ಕಾಂಗ್ರೆಸ್ ಕಚೇರಿಗೆ 'ಇಂದಿರಾ ಭವನ್' ಎಂದು ಹೆಸರಿಟ್ಟಿರಿ. ಅದಕ್ಕೆ ಮನಮೋಹನ್ ಸಿಂಗ್ ಹೆಸರಿಡಲು ಇಟಲಿ ಕಾಂಗ್ರೆಸ್‌ನ ಆಪ್ತರ ಗುಂಪು ಒಪ್ಪಲಿಲ್ಲ ಎಂಬುದು ತಮಗೆ ತಿಳಿದಿರುವ ವಿಷಯ. ಆದರೆ ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಆಡಳಿತ ವಿರುವ ಕಾರಣ 'ಗುಲಾಮಿ ಕಾಂಗ್ರೆಸ್' ನಾಯಕರು, ಬೆಂಗಳೂರಿನಲ್ಲಿ ಬೇಳೆ ಬೇಯಿಸಿಕೊಳ್ಳುತ್ತೀರಿ. ಕೆಲ ತಿಂಗಳ ಹಿಂದಷ್ಟೆ ಬೆಂಗಳೂರಿನಲ್ಲಿ ರಾಜೀವ್ ಗಾಂಧಿ ಕಂಚಿನ ಪ್ರತಿಮೆ ಅನಾವರಣಗೊಳಿಸಲಾಗಿತ್ತು. ಈಗ ಬೆಂಗಳೂರು ವಿವಿಗೆ ಮನಮೋಹನ್ ಸಿಂಗ್ ಹೆಸರು ನಾಮಕರಣ ಮಾಡುವುದಾಗಿ ಘೋಷಿಸಿದ್ದೀರಿ. ಹೈಕಮಾಂಡ್ ಗುಲಾಮಗಿರಿಗೆ ಸದಾ 'ಸಿದ್ಧ'ರಾಮಯ್ಯ" ಎಂದು ಟ್ವೀಟ್‌ನಲ್ಲಿ ಆಕ್ರೋಶ ಹೊರ ಹಾಕಿದೆ.

# ಸಾಧಕರಿಗೆ ಯೋಗ ವಿಭೂಷಣ, ಯೋಗ ಭೂಷಣ ಪ್ರಶಸ್ತಿ ಪ್ರದಾನ

## ಮೈಸೂರು ಯೋಗ ಹಬ್ ಆಗಿ ರೂಪಿಸಲು ಕ್ರಿಯಾ ಯೋಜನೆ

ಮೈಸೂರು, ಮಾ.9(ಎಂಕೆ)– ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ನಮೋ ಯೋಗಭವನದಲ್ಲಿ ಮೈಸೂರು ಯೋಗ ಅಸೋಸಿಯೇಷನ್, ಹಿಮಾಲಯ ಪ್ರತಿಷ್ಠಾನದ ವತಿಯಿಂದ ಯೋಗ ಕ್ಷೇತ್ರದ ಸಾಧಕರಿಗೆ ಯೋಗ ವಿಭೂಷಣ ಹಾಗೂ ಯೋಗ ಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಹಿರಿಯ ಯೋಗಾಚಾರ್ಯರಾದ ಕೆ.ಆರ್.ಜಗನ್ನಾಥಯ್ಯ ಶೆಟ್ಟಿ, ಟಿ.ಜಲೇಂದ್ರ ಕುಮಾರ್ ಅವರಿಗೆ ಯೋಗ ವಿಭೂಷಣ, ಯೋಗ ಶಿಕ್ಷಕರಾದ ಕುಮುದಾ, ನಾಗಮಲ್ಲು, ಹೆಚ್.ನಾಗರಾಜಪ್ಪ, ಕೆ.ಚಂದ್ರು, ನವೀನ್‌ಕುಮಾರ್ ಅವರಿಗೆ ಯೋಗ ಭೂಷಣ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾದೇವಿ ಮಾತನಾಡಿ, ಮೈಸೂರು ಯೋಗ ನಗರಿ ಎಂದೇ ಪ್ರಸಿದ್ಧವಾಗಿದೆ. ಹೀಗಾಗಿ ಮೈಸೂರನ್ನು ಯೋಗ ಹಬ್ ಆಗಿ ರೂಪಿಸಲು ಕ್ರಿಯಾ ಯೋಜನೆ ತಯಾರಿಸುವಂತೆ ಕೇಂದ್ರ ಸರ್ಕಾರದ ಆಯುಷ್ ಇಲಾಖೆ ಸೂಚಿಸಿದೆ. ಅದರಂತೆ ಕೇಂದ್ರಕ್ಕೆ ಮಾಹಿತಿ ಸಲ್ಲಿಸಲಾಗುತ್ತಿದೆ ಎಂದರು.





ಯೋಗ ಕ್ಷೇತ್ರದ ಸಾಧಕರಿಗೆ ಯೋಗ ವಿಭೂಷಣ ಹಾಗೂ ಯೋಗ ಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರಾಷ್ಟ್ರೀಯ ಆಯುರ್ವೇದ ಮಿಷನ್ ನಡಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಔಷಧಿ ರಹಿತ ಚಿಕಿತ್ಸೆ ನಮ್ಮ ಗುರಿ. ಪ್ರತಿ ಕೇಂದ್ರದಲ್ಲಿ ಇಬ್ಬರು ಯೋಗ ಶಿಕ್ಷಕರಿದ್ದು, ತರಬೇತಿ ನೀಡಲಿದ್ದಾರೆ. ಪ್ರತಿಯೊಬ್ಬರೂ ಆರೋಗ್ಯವಂತರಾಗಿರಲು ಯೋಗ, ಪ್ರಾಣಾಯಾಮ, ಧ್ಯಾನದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶ್ರೀ ಪತಂಜಲಿ ಮಹರ್ಷಿ ಭಾವಚಿತ್ರಕ್ಕೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಪುಷ್ಪಾರ್ಚನೆ ಮಾಡಿದರು. ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ಕಾರ್ಯದರ್ಶಿ ಕೆಂಪಲಿಂಗರಾಜು, ಮೈಸೂರು ಯೋಗ ಒಕ್ಕೂಟದ ಕಾರ್ಯಾಧ್ಯಕ್ಷ ಬಿ.ಶಾಂತಾರಾಂ, ಹಿಮಾಲಯ ಪ್ರತಿಷ್ಠಾನ ಅಧ್ಯಕ್ಷ ಎನ್.ಅನಂತ, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಸಿ.ರಮೇಶ್ ಶೆಟ್ಟಿ, ಉಪಾಧ್ಯಕ್ಷ ಎನ್.ಪಶುಪತಿ, ಪರಮಹಂಸ ಯೋಗ ಮಹಾವಿದ್ಯಾಲಯ ಸಂಸ್ಥಾಪಕ ಎಂ.ಎಸ್. ಶಿವಪ್ರಕಾಶ್, ವ್ಯಂಗ್ಯಚಿತ್ರಕಾರ ಎಂ.ವಿ.ನಾಗೇಂದ್ರಬಾಬು, ಜಿ.ರವಿಶಂಕರ್ ಮತ್ತಿತರರು ಉಪಸ್ಥಿತರಿದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com*

# ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಿ

## ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರಿಗೆ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯ ರೆಡ್ಡಿ ಕರೆ

ಮೈಸೂರು, ಮಾ.9(ಜಿಎ)–ಇಂದು ಸಾಮಾಜಿಕ ಜಾಲತಾಣಗಳು ಬಹಳ ಮುಖ್ಯ ಅದನ್ನು ಬಳಸುವ ಕೌಶಲ್ಯವನ್ನು ಮಹಿಳೆಯರು ಬೆಳೆಸಿಕೊಳ್ಳಬೇಕು. ಸರ್ಕಾರದ ಯೋಜನೆಗಳು, ಜನಪರ ಯೋಜನೆಗಳ ಜನಸಾಮಾನ್ಯರಿಗೆ ತಲುಪಿಸುವ ಕೆಲಸ ಕಾರ್ಯಕರ್ತೆಯರಯ ಮಾಡಬೇಕು ಎಂದು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆಯೂ ಆಗಿರುವ ಮಾಜಿ ಶಾಸಕಿ ಸೌಮ್ಯರೆಡ್ಡಿ ಕರೆ ನೀಡಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಗರ ಮತ್ತು ಗ್ರಾಮಾಂತರ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಮಹಿಳಾ ಕಾಂಗ್ರೆಸ್ ಸಭೆ ಹಾಗೂ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪಂಚ ಗ್ಯಾರಂಟಿಗಳಿಂದ ಮಹಿಳೆಯರಿಗೆ ಹೇಗೆ ಉಪಯೋಗವಾಗುತ್ತಿದೆ ಎಂಬುದು ಗೊತ್ತಿದೆ. ಮಹಿಳೆಯರ ಸಬಲೀಕರಣಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಗ್ಯಾರಂಟಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಗೃಹಲಕ್ಷ್ಮೀ ಯೋಜನೆ ಹಣ ಉತ್ತಮ ಕೆಲಸಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಬಡತನ ರೇಖೆಯಲ್ಲಿರುವ ಕುಟುಂಬಗಳಿಗೆ ಸಹಕಾರಿಯಾಗಿದೆ ಎಂದರು.

ರಾಜ್ಯದ ಜನರಿಗೆ ಅನೇಕ ಯೋಜನೆಗಳು ತಲುಪುತ್ತಿದೆ. ಹೆಚ್ಚು ಹೆಚ್ಚು ನೋಂದಣಿ ಮಾಡಿಸಿ ಪಕ್ಷವನ್ನ ಇನ್ನಷ್ಟು ಬಲವರ್ಧನೆ ಮಾಡಬೇಕು. ಆದಷ್ಟು ಬೇಗ ರಾಜ್ಯ ಸಮಿತಿ ರಚನೆ ಮಾಡಲಾಗುತ್ತದೆ. ಎಲ್ಲರೂ ಆಸಕ್ತಿಯಿಂದ ಪಕ್ಷ ಸಂಘಟನೆ ಮಾಡುವಲ್ಲಿ ತೊಡಗಿಸಿಕೊಳ್ಳಿ ಎಂದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಗರ ಮತ್ತು ಗ್ರಾಮಾಂತರ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಮಹಿಳಾ ಕಾಂಗ್ರೆಸ್ ಸಭೆ ಹಾಗೂ ಅಭಿನಂದನಾ ಸಮಾರಂಭವನ್ನು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯ ರೆಡ್ಡಿ ಉದ್ಘಾಟಿಸಿದರು.

ಮೈಸೂರಿನ 8 ಕ್ಷೇತ್ರಗಳನ್ನು ಕಾಂಗ್ರೆಸ್ ಪಕ್ಷ ಗೆಲ್ಲಲು ಮಹಿಳೆಯರು ಮುಖ್ಯ ಪಾತ್ರ ವಹಿಸಿದ್ದಾರೆ. ಪಕ್ಷ ಸಂಘಟನೆಯಲ್ಲಿ ನಮ್ಮ ಮಹಿಳೆಯರ ಪಾತ್ರ ಬಹಳ ಮುಖ್ಯವಾಗಿದೆ. ತಮ್ಮ ಕುಟುಂಬ, ಗಂಡ, ಮನೆ, ಮಕ್ಕಳು ಎಲ್ಲರನ್ನೂ ಸರಿದೂಗಿಸಿ ಪಕ್ಷದ ಸಂಘಟನೆಯಲ್ಲೂ ಕೆಲಸ ಮಾಡುತ್ತಾರೆ. ಮಹಿಳೆಯರಿಗೆ ಶೇ.33ರಷ್ಟು ರಾಜಕೀಯ ಮೀಸಲಾತಿಗಾಗಿ ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದೇವೆ. ಪ್ರಧಾನಿ ನರೇಂದ್ರ ಮೋದಿ ಅವರು 2029ಕ್ಕೆ ಜಾರಿ ಮಾಡುತ್ತೇವೆ ಎಂದು ಹೇಳುತ್ತಾರೆ. ರಾಜ್ಯದಲ್ಲಿ 224 ಕ್ಷೇತ್ರಗಳಲ್ಲಿ ಕೇವಲ 10 ಜನ ಮಾತ್ರ ಮಹಿಳೆಯರಿದ್ದಾರೆ. ಆದರೆ, ಬಿಬಿಎಂಪಿಯಲ್ಲಿ ಒಟ್ಟು 198 ಸ್ಥಾನಗಳಲ್ಲಿ 102 ಮಹಿಳಾ ಸದಸ್ಯರೇ ಇದ್ದಾರೆ. ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರು ಹೆಚ್ಚು ಭಾಗವಹಿಸಬೇಕು. ನಮಗೂ ಕೂಡ ಹೆಚ್ಚಿನ ರಾಜಕೀಯ ಪ್ರಾತಿನಿಧ್ಯ ಬೇಕು. ಆ ನಿಟ್ಟಿನಲ್ಲಿ ನಮ್ಮ ಹೋರಾಟ ಇರಬೇಕು ಎಂದು ಸೌಮ್ಯ ರೆಡ್ಡಿ ತಿಳಿಸಿದರು.

ಮೈಸೂರು ಗ್ರಾಮಾಂತರ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಬಂದ ಮೇಲೆ ಮಹಿಳೆಯರ ಕಲ್ಯಾಣ ಕಾರ್ಯಕ್ರಮಕ್ಕಾಗಿ ಹಲವಾರು ಯೋಜನೆಗಳನ್ನು ನೀಡಲಾಗಿದೆ. ಗ್ಯಾರಂಟಿ ಯೋಜನೆಯಲ್ಲಿ 2 ಸಾವಿರ ರೂಪಾಯಿ ಖಾತೆಗೆ ಜಮೆ ಮಾಡಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಆಶಾ ಕಾರ್ಯಕರ್ತೆಯರಿಗೆ ಗೌರವ ಧನ ಹೆಚ್ಚಳ ಮಾಡಲಾಗಿದೆ. ಇದರೊಂದಿಗೆ ಅನೇಕ ಯೋಜನೆಗಳನ್ನು ಕೊಡಲಾಗಿದೆ ಎಂದರು.

ಕೆಪಿಸಿಸಿ ರಾಜ್ಯ ಮಹಿಳಾ ಘಟಕದ ಅಧ್ಯಕ್ಷರಾದ ಬಳಿಕ ಮೈಸೂರಿಗೆ ಮೊದಲ ಬಾರಿಗೆ ಆಗಮಿಸಿದ ಸೌಮ್ಯಾರೆಡ್ಡಿ ಅವರಿಗೆ ಅಭಿನಂದಿಸಲಾಯಿತು. ಈ ವೇಳೆ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮಹಿಳಾ ಕಾಂಗ್ರೆಸ್ ನಗರಾಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಮಾಜಿ ಮೇಯರ್ ಮೋದಾಮಣಿ, ಪುಷ್ಪವಲ್ಲಿ, ರಾಜ್ಯ ಕಾರ್ಯದರ್ಶಿ ಶಶಿರೇಖ, ರಾಜ್ಯ ಕಾರ್ಯದರ್ಶಿ ಸುಶೀಲಾ ರಾವ್, ರಾಜ್ಯ ಉಪಾಧ್ಯಕ್ಷೆ ಲತಾ ಮೋಹನ್, ನಗರ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಈಶ್ವರ್ ಚಕ್ಕಡಿ ಉಪಸ್ಥಿತರಿದ್ದರು.

# ಮಹಿಳಾ ದಿನಾಚರಣೆ ಪ್ರಯುಕ್ತ ಸಾಧಕ ಮಹಿಳೆಯರಿಗೆ ಸನ್ಮಾನ



ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ವಿವಿಧ ಕ್ಷೇತ್ರಗಳ ಸಾಧಕ ಮಹಿಳೆಯರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು,ಮಾ.9(ಪಿಎಂ)– ನಾಟ್ಯ ಸ್ವರಾಂಜಲಿ ಸಂಗೀತ ಶಾಲೆ ವತಿಯಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಶಾಲೆಯ 2ನೇ ವಾರ್ಷಿಕೋತ್ಸವದಲ್ಲಿ ವಿವಿಧ ಕ್ಷೇತ್ರಗಳ ಸಾಧಕ ಮಹಿಳೆಯರನ್ನು ಸನ್ಮಾನಿಸಲಾಯಿತು.

ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಹಿತಿ ಲೀಲಾ ಪ್ರಕಾಶ್, ವಿಜಯವಿಠ್ಠಲ ಶಾಲೆ ಪ್ರಾಂಶುಪಾಲರಾದ ಎ.ಎಸ್.ವೀಣಾ, ಸ್ತ್ರೀರೋಗ ತಜ್ಞೆ ಡಾ.ರೇಖಾ ಅರುಣ್, ಮನೋವಿಜ್ಞಾನಿ ಡಾ.ರೇಖಾಮನಶಾಂತಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮೈಸೂರು ಜಿಲ್ಲಾ ಮಟ್ಟದ ಅಧಿಕಾರಿ ಕೆ.ಶಿಲ್ಪಾ, ಮಂಜುಳಾ ಪ್ರಭಾಕರ್, ಇಂದ್ರಾಣಿ ಅನಂತರಾಮು ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಭರತನಾಟ್ಯ, ಸಂಗೀತ ಮತ್ತು ಗಾಯನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ದಾಸ ಸಾಹಿತ್ಯ, ವಚನ ಸಾಹಿತ್ಯ ಸೇರಿದಂತೆ ಭಕ್ತಿಗೀತೆಗಳನ್ನು ಸಾದರಪಡಿಸಿದ ಗಾಯಕರು ಸಭಿಕರಲ್ಲಿ ಭಕ್ತಿಭಾವ ಮೂಡಿಸಿದರು. ಬೆಂಗಳೂರಿನ ಕಲ್ಯಾ ಶ್ರೀಕಾಂತಾಚಾರ್ (ಮಧ್ವಮಾಧವ ವಿಠಲ ಅಂಕಿತ) ಕಾರ್ಯಕ್ರಮ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷ ನಾಗರಾಜು ಭೈರಿ, ನೀನಾದ್ ಮ್ಯೂಸಿಕಲ್ ಟ್ರಸ್ಟ್ ಅಧ್ಯಕ್ಷ ಪ್ರಸನ್ನ ಕುಮಾರ್, ವಕೀಲರಾದ ಎಲ್.ಚಂದ್ರಶೇಖರ್, ಆರ್.ಲಕ್ಷ್ಮಣ್, ವಿಶ್ವಕರ್ಮ ಮಹಾ ಒಕ್ಕೂಟದ ಉಪಾಧ್ಯಕ್ಷ ಮುರಳಿಧರ, ಉದ್ಯಮಿ ಬಿ.ಸುಬ್ರಹ್ಮಣ್ಯ, ಮುಖಂಡರಾದ ಸತೀಶ್, ಪ್ರದೀಪ್, ಸುಜ್ಞಾನ ಮೂರ್ತಿ, ಬ್ಯಾಂಕ್ ಅಧಿಕಾರಿ ಸೌಮ್ಯ ಸುರೇಶ್, ಸಂಗೀತ ಶಾಲೆಯ ಅಧ್ಯಕ್ಷೆ ಪುಷ್ಪಲತಾ ಶಿವಕುಮಾರ್, ಶಿಕ್ಷಕ ಕೆ.ಎಂ.ಪ್ರದೀಪ್ ಸೇರಿದಂತೆ ಮತ್ತಿತರರು ಹಾಜರಿದ್ದರು.

## ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ ಪ್ರದಾನ ಸಮಾರೋಪ

# 'ಮಿಕ್ಕ ಬಣ್ಣದ ಹಕ್ಕಿ'ಗೆ 2025ನೇ ಸಾಲಿನ ಅತ್ಯುತ್ತಮ ಕನ್ನಡ ಚಿತ್ರ ಪ್ರಶಸ್ತಿ

ಬೆಂಗಳೂರು, ಮಾ.9– 16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ ಪ್ರದಾನ ಸಮಾರೋಪ ಸಮಾರಂಭ ಅದ್ದೂರಿಯಾಗಿ ನಡೆದಿದೆ.

ಫಿಲ್ಮ್ ಫೆಸ್ಟ್ ಕೊನೆಯ ದಿನದ ಕಾರ್ಯಕ್ರಮವನ್ನು ಸುಲೋಚನಾ ಆಡಿಟೋರಿಯಂನಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ 2025ನೇ ಸಾಲಿನ 16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಪ್ರಶಸ್ತಿ ಪ್ರದಾನ ಸಂಭ್ರಮದಲ್ಲಿ ಸಚಿವ ಸಂತೋಷ್ ಎಸ್.ಲಾಡ್, ಸಂಸದ ಪಿ.ಸಿ.ಮೋಹನ್, ನಟರಾದ ಕಿಶೋರ್, ಸಾಧು ಕೋಕಿಲ, ಫಿಲ್ಮ್ ಚೇಂಬರ್ ಅಧ್ಯಕ್ಷ ಸರಸಿಂಹಲು, ಐಎಎಸ್ ಅಧಿಕಾರಿ ಬಿ.ಬಿ.ಕಾವೇರಿ ಮತ್ತು ಅರುಂಧತಿ ನಾಗ್ ಭಾಗಿಯಾಗಿದ್ದರು.

2025ನೇ ಸಾಲಿನ ಫಿಲ್ಮ್ ಫೆಸ್ಟ್‌ನಲ್ಲಿ ಬೆಸ್ಟ್ ಏಷಿಯನ್ ಸಿನಿಮಾ ಅವಾರ್ಡ್ಸ್, ಬೆಸ್ಟ್ ಇಂಡಿಯನ್ ಸಿನಿಮಾ ಅವಾರ್ಡ್ಸ್ ಮತ್ತು ಬೆಸ್ಟ್ ಕನ್ನಡ ಸಿನಿಮಾ ಸೇರಿದಂತೆ ಮೂರು ಕ್ಯಾಟಗರಿಯಲ್ಲಿ ಪ್ರಶಸ್ತಿಗಳನ್ನು ವಿತರಿಸಲಾಗಿದೆ. ಇದರ ಜೊತೆಗೆ ಖ್ಯಾತ ಬಹುಭಾಷಾ ನಟಿ, ಆರು ಬಾರಿ ರಾಷ್ಟ್ರಪ್ರಶಸ್ತಿ ಪಡೆದಿರುವ ನಟಿ ಶಬಾನಾ ಆಜ್ಮಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗಿದೆ. ಶಬಾನಾ ಅವರ ಪರವಾಗಿ ಅವಾರ್ಡ್ ಪಡೆದ ಅರುಂಧತಿ ನಾಗ್, ಶಬಾನಾ ಅತ್ಯುತ್ತಮ ನಟಿ. ಬರಿ ನಟಿ ಅಷ್ಟೇ ಅಲ್ಲ ಸಾಕಷ್ಟು ಹೋರಾಟವನ್ನು ಮಾಡಿದ್ದಾರೆ.



16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಕನ್ನಡ ಚಿತ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನನ್ನ ರೋಲ್ ಮಾಡೆಲ್ ಅವರು ಎಂದು ಶಬಾನಾ ಅವರನ್ನು ಕುರಿತು ಮಾತನಾಡಿದರು.

ಅಂತಿಮವಾಗಿ 2025ನೇ ಸಾಲಿನ 16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕೆ.ಮನೋಹರ ನಿರ್ದೇಶನದ 'ಮಿಕ್ಕ ಬಣ್ಣದ ಹಕ್ಕಿ' ಸಿನಿಮಾಗೆ ಅತ್ಯುತ್ತಮ ಕನ್ನಡ ಚಿತ್ರ ಗರಿ ಸಿಕ್ಕಿದೆ. 2ನೇ ಸ್ಥಾನ ತುಳು ಭಾಷೆಯ 'ಪಿದಾಯಿ' ಮತ್ತು 3ನೇ ಸ್ಥಾನ ತುಳು ಭಾಷೆಯ 'ದಸ್ಕತ್' ಸಿನಿಮಾಗೆ 2025ನೇ ಸಾಲಿನ 16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಪ್ರಶಸ್ತಿ ಸಿಕ್ಕಿದೆ.

16ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ರಾಯಭಾರಿ ನಟ ಕಿಶೋರ್ ಮಾತನಾಡಿ, ನಮಗೆಲ್ಲಾ ಇತಿಹಾಸದ ಬಗ್ಗೆ ಮತ್ತು ಐತಿಹಾಸಿಕ ವ್ಯಕ್ತಿಗಳ ಬಗ್ಗೆಯೂ, ಮತ್ತು ಬದಲಾವಣೆಯ ಹರಿಕಾರರ ಬಗ್ಗೆಯೂ ಬಹಳ ಹೆಮ್ಮೆ ಇದೆ. ಆ ಧಾವಂತದಲ್ಲಿ ನಮ್ಮ ಆತ್ಮ ವಿಮರ್ಶೆ ಮಾಡಿಕೊಳ್ಳುವುದನ್ನು ಮರೆತು ಹೋಗುತ್ತಿದ್ದೇವೆ. 100–200 ವರ್ಷಗಳ ಹಿಂದಿನ ವಿಷಯಗಳು ಇವತ್ತಿಗೂ ಪ್ರಸ್ತುತ ಎನ್ನುವುದಾದರೆ, ನಾವಿನ್ನೂ ಹಾಗೆಯೇ ಇದ್ದೇವೆ ಎಂದರು.

'ಬೇಡರ ಕಣ್ಣಪ್ಪ' ಸಿನಿಮಾದಲ್ಲಿ ದೇವಸ್ಥಾನದಲ್ಲಿ ಮಾಂಸ ತಿಂದು ದೇವರನ್ನು ಒಲಿಸಿಕೊಂಡ. ಆದರೆ ಸಿದ್ದರಾಮಯ್ಯ ಮಾಂಸ ತಿಂದು ದೇವಸ್ಥಾನಕ್ಕೆ ಹೋಗ್ತೀನಿ ಅಂದರೆ ಚರ್ಚೆ ಆಗುತ್ತಿದೆ. ಆಹಾರ ಪದ್ಧತಿ ಈಗಲೂ ಶ್ರೇಷ್ಠ, ಕೀಳು–ಮೇಲೆ ನಿಂತಿದೆ. ಡಾ.ರಾಜ್‌ಕುಮಾರ್ ಅವರನ್ನು ಬರೀ ಚಪ್ಪಾಳೆಗೆ ಸೀಮಿತ ಮಾಡದೇ, ಅದರಾಚೆಗೆ ನೋಡಿ. 'ಸನಾದಿ ಅಪ್ಪಣ್ಣ' ಚಿತ್ರ ಮತ್ತು 'ಕುಲುದಲ್ಲಿ ಕೀಳ್ಯಾವುದೋ' ಹಾಡುಗಳಲ್ಲೇ ದೊಡ್ಡ ಸಂದೇಶ ಇದೆ ಎಂದು ನಟ ಕಿಶೋರ್ ಹೇಳಿದರು.

**ಏಷಿಯನ್ ಬೆಸ್ಟ್ ಸಿನಿಮಾ ಅವಾರ್ಡ್ಸ್:** ಮೊದಲನೇ ಸ್ಥಾನ 'ಇನ್ ದಿ ಲ್ಯಾಂಡ್ ಆಫ್ ಬ್ರದರ್ಸ್', ಎರಡನೇ ಸ್ಥಾನ 'ರೇಡಿಂಗ್ ಲೊಲಿತಾ ಇನ್ ಟೆಹ್ರಾನ್', ಮೂರನೇ ಸ್ಥಾನ 'ಸಬಾ'.

**ಭಾರತೀಯ ಬೆಸ್ಟ್ ಸಿನಿಮಾ ಅವಾರ್ಡ್ಸ್:** ಮೊದಲನೇ ಸ್ಥಾನ 'ಹ್ಯೂಮನ್ಸ್ ಇನ್ ದಿ ಲೂಪ್' , ಎರಡನೇ ಸ್ಥಾನ 'ಲೆವೆಲ್ ಕ್ರಾಸ್', ಮೂರನೇ ಸ್ಥಾನ 'ಸ್ವಾಹಾ' ಪಡೆಯಿತು.

## ಪ್ರವಾಸಿ ತಾಣಗಳಲ್ಲಿ ಭದ್ರತೆ ಹೆಚ್ಚಳ



ಬೆಂಗಳೂರು, ಮಾ.9– ಇತ್ತೀಚೆಗೆ ಕೊಪ್ಪಳದಲ್ಲಿ ವಿದೇಶಿ ಮಹಿಳೆ ಸೇರಿದಂತೆ ಇಬ್ಬರ ಮೇಲೆ ಅತ್ಯಾಚಾರ ನಡೆದಿರುವ ಹಿನ್ನೆಲೆಯಲ್ಲಿ ಪ್ರವಾಸಿ ತಾಣಗಳಲ್ಲಿ ಭದ್ರತಾ ಕ್ರಮಗಳನ್ನು ಗಣನೀಯವಾಗಿ ಬಲಪಡಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಭರವಸೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕರ್ನಾಟಕಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಅವರ ಸುರಕ್ಷತೆ ಖಾತ್ರಿಗೆ ಮಾಡಬೇಕಾದ ಮತ್ತು ಮಾಡಬಾರದ ಬಗ್ಗೆ ವಿವರಿಸಲಾಗುವುದು. ಖಂಡಿತವಾಗಿಯೂ ಹಂಪಿ ಮತ್ತಿತರ ಪ್ರವಾಸಿ ಸ್ಥಳಗಳಲ್ಲಿ ಭದ್ರತಾ ಕ್ರಮಗಳನ್ನು ಹೆಚ್ಚಿಸಲಿದ್ದೇವೆ. ಈಗ ಇರುವ ಭದ್ರತಾ ಕ್ರಮಗಳನ್ನು ಸರ್ಕಾರ ಮರುಪರಿಶೀಲಿಸಲಿದೆ ಎಂದರು.

ಇಸ್ರೇಲಿ ಪ್ರಜೆ ಸೇರಿದಂತೆ ಇಬ್ಬರು ಮಹಿಳೆಯರ ಮೇಲಿನ ಅತ್ಯಾಚಾರ ಪ್ರವಾಸೋದ್ಯಮ ಕ್ಷೇತ್ರದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಒಂದೆಡೆ ನಾವು ಪ್ರಪಂಚದಾದ್ಯಂತದ ಪ್ರವಾಸಿಗರನ್ನು ಆಕರ್ಷಿಸಲು ಪ್ರಯತ್ನಿಸುತ್ತಿದ್ದರೆ ಇನ್ನೊಂದೆಡೆ ಈ ರೀತಿಯ ಘಟನೆಗಳು ಪ್ರವಾಸಿಗರನ್ನು ನಮ್ಮ ದೇಶಕ್ಕೆ ಭೇಟಿ ನೀಡುವುದನ್ನು ತಡೆಯುತ್ತವೆ ಎಂದು ಹೇಳಿದರು.

ಮಾ.6ರಂದು ರಾತ್ರಿ ತುಂಗಭದ್ರಾ ನದಿ ಕ್ಯಾನಾಲ್ ಪಕ್ಕ ಪ್ರವಾಸಿಗರು ಕುಳಿತಿರುತ್ತಾರೆ. ಅಲ್ಲಿಗೆ ಬೈಕ್‌ನಲ್ಲಿ ಬಂದಿದ್ದ ಮೂವರು ಆ ಪ್ರವಾಸಿಗರಿಗೆ ಪೆಟ್ರೋಲ್ ಇದೆಯಾ ಎಂದು ವಿಚಾರಿಸಿದ್ದಾರೆ. ಮಾತನಾಡುತ್ತಾ, ಮೈ ಮೇಲೆ ಎರಗಿದಾಗ ಘರ್ಷಣೆ ನಡೆದಿದೆ. ಆಗ ಒಬ್ಬನನ್ನು ಕೆನಾಲ್‌ಗೆ ತಳ್ಳಿದ್ದಾರೆ. ಪ್ರಕರಣ ಸಂಬಂಧ ಮರುದಿನ ಪೊಲೀಸರಿಗೆ ದೂರು ನೀಡಲಾಗಿದೆ ಎಂದು ತಿಳಿಸಿದರು.

ವಿವರ ಪಡೆದುಕೊಂಡ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಡಿವೈಎಸ್‌ಪಿ ನೇತೃತ್ವದ ಪೊಲೀಸರ ತಂಡ ರಚಿಸಿ ಕಾರ್ಯಾಚರಣೆ ಕೈಗೊಂಡಿದ್ದರು. ಈಗಾಗಲೇ ಇಬ್ಬರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ. ತಲೆಮರೆಸಿಕೊಂಡಿರುವ ಓರ್ವ ಆರೋಪಿಗಾಗಿ ಶೋಧ ಕಾರ್ಯ ನಡೆದಿದೆ. ಆತನನ್ನೂ ಬಂಧಿಸಲಾಗುವುದು ಎಂದರು.

# ರಾಜೀವ್‌ನಗರದ ಮಹಿಳಾ ಪದವಿ ಪೂರ್ವ ಕಾಲೇಜು ಕೊಠಡಿಗಳಿಗೆ ಆರ್‌ಸಿಸಿ ಹಾಕುವ ಕಾರ್ಯಕ್ಕೆ ಚಾಲನೆ

ಮೈಸೂರು, ಮಾ.9(ಜಿಎ)– ಬಿಜೆಪಿಯವರು ಮುಸ್ಲಿಂ ಪದ ಬಿಟ್ಟು ಮಾತನಾಡಿ ತೋರಿಸಲಿ ಎಂದು ಶಾಸಕ, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಸವಾಲು ಹಾಕಿದರು.

ನರಸಿಂಹರಾಜ ಕ್ಷೇತ್ರದ ರಾಜೀವ್ ನಗರದಲ್ಲಿರುವ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿಗೆ ಕರ್ನಾಟಕ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಿಎಸ್‌ಆರ್ ಅನುದಾನ 1.25 ಕೋಟಿ ಹಣದಲ್ಲಿ ಮೊದಲ ಮಹಡಿಯಲ್ಲಿ 9 ಕೊಠಡಿ ನಿರ್ಮಿಸಿ, ಇದೀಗ 75 ಲಕ್ಷ ರೂ. ವೆಚ್ಚದಲ್ಲಿ ಅದಕ್ಕೆ ಆರ್‌ಸಿಸಿ ಹಾಕುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದರು.

ಶಿಕ್ಷಣದಿಂದ ಸುಶೀಕ್ಷಿತ ಸಮಾಜ ನಿರ್ಮಾಣ ಸಾಧ್ಯ. ಇದಕ್ಕಾಗಿ ನಾವು ನಮ್ಮ ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಮಹತ್ವ ನೀಡಿದ್ದೇವೆ. ಕಳೆದ 2 ವರ್ಷಗಳಿಂದಲೂ ಎನ್‌ಆರ್ ಕ್ಷೇತ್ರದಲ್ಲಿ ಪ್ರಥಮ ದರ್ಜೆ ಕಾಲೇಜು ಬೇಕು ಎನ್ನುವ ಬೇಡಿಕೆಯನ್ನು ಇಲ್ಲಿನ ಮತದಾರರು ಇಟ್ಟಿದ್ದಾರೆ. ತಾಂತ್ರಿಕ ಕಾರಣದಿಂದ ಅದು ಸಾಧ್ಯವಾಗಿಲ್ಲ. ಇದೇ ಸಾಲಿನಲ್ಲಿ ಇಲ್ಲಿಗೆ ಪ್ರಥಮ ದರ್ಜೆ ಕಾಲೇಜು ತೆರೆಯುವ ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗುವುದು ಎಂದು ತಿಳಿಸಿದರು.

ರಾಜ್ಯದಲ್ಲಿ ಶೇ.16ರಷ್ಟು ಜನಸಂಖ್ಯೆ ಇರುವ ಮುಸ್ಲಿಂ ಸಮುದಾಯಕ್ಕೆ 4 ಲಕ್ಷ ಕೋಟಿಯ ರಾಜ್ಯ ಬಜೆಟ್‌ನಲ್ಲಿ ಶೇ.1ರಷ್ಟೂ ಅನುದಾನ ಸಿಕ್ಕಿಲ್ಲ, ಆದರೂ ನಾವು ತೃಪ್ತರಾಗಿದ್ದೇವೆ. ಆದರೇ, ಬಿಜೆಪಿಯವರು ಇದನ್ನೇ ಹಲಾಲ್ ಬಜೆಟ್ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಮುಸ್ಲಿಂ ಪದ ಬಿಟ್ಟು ಅವರು ಮಾತನಾಡಿ ತೋರಿಸಲಿ ಎಂದು ಶಾಸಕ, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಸವಾಲು ಹಾಕಿದರು.



ರಾಜೀವ್ ನಗರದಲ್ಲಿರುವ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ 1.25 ಕೋಟಿ ವೆಚ್ಚದಲ್ಲಿ ಮೊದಲ ಮಹಡಿಯಲ್ಲಿ 9 ಕೊಠಡಿ ನಿರ್ಮಿಸಿ, ಇದೀಗ 75 ಲಕ್ಷ ರೂ. ವೆಚ್ಚದಲ್ಲಿ ಆರ್‌ಸಿಸಿ ಹಾಕುವ ಕಾರ್ಯಕ್ರಮಕ್ಕೆ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು.

ಬಿಜೆಪಿಯವರು ಬಳಕೆ ಮಾಡುವ ಪದಗಳನ್ನು ನಾನು ಬಳಸುವುದಿಲ್ಲ, ನಮ್ಮ ಸಂಸ್ಕೃತಿಯೇ ಬೇರೆ, ಅವರ ಬಂಡವಾಳವೇ ಮುಸಲ್ಮಾನರು, ನಾವು ರಾಷ್ಟ್ರದಲ್ಲಿ ಶೇ.20ರಷ್ಟು ಜನಸಂಖ್ಯೆ ಇದ್ದೇವೆ, ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಾವು ಹೋರಾಡಿ ಪ್ರಾಣ ಕಳೆದುಕೊಂಡಿದ್ದೇವೆ. ಸ್ವಾತಂತ್ರ್ಯ ಹೋರಾಟಕ್ಕೆ ಬಿಜೆಪಿ ಕೊಡುಗೆ ಶೂನ್ಯ. ಬಿಜೆಪಿ ತನ್ನ ಅಧಿಕಾರದಲ್ಲಿ ಮಠಗಳಿಗೆ, ದೇವಸ್ಥಾನಗಳ ಅಭಿವೃದ್ಧಿಗೆ ಸಾಕಷ್ಟು ಹಣ ನೀಡಿದೆ. ನಾವೆಂದೂ ಅದರ ಬಗ್ಗೆ ಪ್ರಶ್ನೆ ಮಾಡಿಲ್ಲ. ಬಿಜೆಪಿಯವರು ಯಾವತ್ತೂ ದೇಶ ಕಟ್ಟುವ ಕೆಲಸ ಮಾಡಿಲ್ಲ, ಅವರದೇನಿದ್ದರೂ ದೇಶ ವಿಭಜನೆಯ ಕೆಲಸ. ಯುವ ಜನಾಂಗವನ್ನು ದಾರಿ ತಪ್ಪಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ. ನಮಗೆ ಇನ್ನೂ ಹೆಚ್ಚಿನ ಅನುದಾನ ಸಿಗಬೇಕಿತ್ತು. ಸಿಕ್ಕಿಲ್ಲ, ಅದನ್ನು ದಕ್ಕಿಸಿಕೊಳ್ಳುವ ಬಗ್ಗೆ ನಮ್ಮ ಪ್ರಯತ್ನ ಮುಂದುವರಿಯುತ್ತದೆ ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು. ಈ ಸಂದರ್ಭದಲ್ಲಿ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ಬಾಲ್, ಡಿಸಿಸಿ ಪ್ರಧಾನ ಕಾರ್ಯದರ್ಶಿ ಶಹಬುದ್ದೀನ್, ಮುಖಂಡರಾದ ಎಂ.ಎನ್. ಮಹದೇವ, ಡಾ.ಹಕೀಂ, ಶ್ರೀನಿವಾಸ, ಶೌಕತ್ ಅಲಿಖಾನ್, ಅಫ್ರೋಜ್ ಖಾನ್, ಫ್ರೊ.ನಬೀಜಾನ್, ಶಿವಲಿಂಗು ಇನ್ನಿತರರು ಉಪಸ್ಥಿತರಿದ್ದರು.

## ಹಾಸನ ಮಿತ್ರ

# ಅರಕಲಗೂಡಲ್ಲಿ ರಾಗಿ, ಭತ್ತದ ಖರೀದಿ ಕೇಂದ್ರಕ್ಕೆ ಚಾಲನೆ



ಅರಕಲಗೂಡು ಪಟ್ಟಣದ ಎಪಿಎಂಸಿ ಯಾರ್ಡ್‌ನಲ್ಲಿ ರಾಗಿ ಮತ್ತು ಭತ್ತದ ಖರೀದಿ ಕೇಂದ್ರಕ್ಕೆ ಶಾಸಕ ಎ.ಮಂಜು ಚಾಲನೆ ನೀಡಿದರು.

ಅರಕಲಗೂಡು, ಮಾ.9– ರೈತರು ಬೆಳೆ ಬೆಳೆಯಲು ಮಾಡಿರುವ ವೆಚ್ಚಕ್ಕೆ ಹೋಲಿಸಿದರೆ ಸರ್ಕಾರ ನೀಡುತ್ತಿರುವ ಬೆಂಬಲ ಬೆಲೆ ಏನೇನು ಸಾಲದು ಎಂದು ಶಾಸಕ ಎ.ಮಂಜು ಅಭಿಪ್ರಾಯಪಟ್ಟರು.

ಪಟ್ಟಣದ ಎಪಿಎಂಸಿ ಯಾರ್ಡ್‌ನಲ್ಲಿ ರಾಗಿ ಮತ್ತು ಭತ್ತದ ಖರೀದಿ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರೈತರು ತಮ್ಮ ಆದಾಯವನ್ನು ದುಪ್ಪಟ್ಟು ಮಾಡಿಕೊಳ್ಳದಿದ್ದರೆ ಬದುಕು ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಕೃಷಿ ಬದುಕು ಕಷ್ಟ ಹಾಗೂ ಅಗತ್ಯ ಸೌಲಭ್ಯಗಳಿಲ್ಲ ಎಂಬ ಕಾರಣಕ್ಕೆ ರೈತರ ಮಕ್ಕಳಿಗೆ ಹೆಣ್ಣು ಕೊಡಲು ಯಾರೂ ಮುಂದೆ ಬರದ ಸ್ಥಿತಿ ಎದುರಾಗಿದೆ. ರೈತರು ನೆಮ್ಮದಿ ಯಿಂದ ಬದುಕಲು ತಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಳ್ಳುವುದು ಅಗತ್ಯ ಎಂದರು.

ಪಟ್ಟಣದ ಎಪಿಎಂಸಿ ಯಾರ್ಡ್ ಮತ್ತು ರಾಮನಾಥಪುರ ರೇಷ್ಮೆ ಇಲಾಖೆ ತರಬೇತಿ ಕೇಂದ್ರಗಳಲ್ಲಿ ಖರೀದಿ ಕೇಂದ್ರ ತೆರೆಯಲಾಗಿದೆ. ಬೆಂಬಲ ಬೆಲೆಯಲ್ಲಿ ಮಾರಾಟ ಮಾಡಲು ಅರಕಲಗೂಡು ಕೇಂದ್ರದಲ್ಲಿ ರಾಗಿ 1267 ಮತ್ತು ಭತ್ತದ ಮಾರಾಟಕ್ಕೆ 64, ರಾಮನಾಥಪುರದಲ್ಲಿ ರಾಗಿ 2263, ಭತ್ತಕ್ಕೆ 46 ಮಂದಿ ರೈತರು ಹೆಸರು ನೋಂದಾಯಿಸಿ ಕೊಂಡಿದ್ದಾರೆ. 55005 ಕ್ವಿಂಟಾಲ್ ರಾಗಿ, 3426 ಕ್ವಿಂಟಾಲ್ ಭತ್ತ ಖರೀದಿಸಲು ನಿರ್ಧರಿಸಲಾಗಿದೆ. ರಾಗಿಗೆ ಕ್ವಿಂಟಲ್ 4290 ಹಾಗೂ ಭತ್ತಕ್ಕೆ 2320 ದರ ನಿಗದಿಗೊಳಿಸಿದೆ ಅಧಿಕಾರಿಗಳು ಯಾವುದೇ ಲೋಪಕ್ಕೆ ಅವಕಾಶ ನೀಡದಂತೆ ಜಾಗ್ರತೆ ವಹಿಸಬೇಕು. ರೈತರು ಗುಣಮಟ್ಟದ ರಾಗಿ ಮತ್ತು ಭತ್ತ ಮಾರಾಟ ಮಾಡುವಂತೆ ಸಲಹೆ ಮಾಡಿದರು.

ಈ ವೇಳೆ ಆಹಾರ ಇಲಾಖೆ ಶಿರಸ್ತೇದಾರ್ ಎಲ್.ಬಿ.ಮಂಜು, ಎಪಿಎಂಸಿ ಕಾರ್ಯದರ್ಶಿ ಸೋಮಶೇಖರ್, ಖರೀದಿ ಕೇಂದ್ರದ ಅಧಿಕಾರಿಗಳು, ರೈತರು ಉಪಸ್ಥಿತರಿದ್ದರು.

# ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿ ಮೇಲೆ ಆನೆ ದಾಳಿ; ಮಹಿಳೆಗೆ ಗಂಭೀರ ಗಾಯ




ಹಾಸನ,ಮಾ.9– ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿ ಮೇಲೆ ಕಾಡಾನೆ ದಾಳಿ ನಡೆಸಿದ ಘಟನೆ ಬೇಲೂರು ತಾಲೂಕಿನ ಚಿಕ್ಕಸಾಲಾವಾರ ಗ್ರಾಮದ ಬಳಿ ನಡೆದಿದೆ. ಆನೆ ದಾಳಿಯಿಂದ ಬೈಕ್‌ನಲ್ಲಿದ್ದ ಮಹಿಳೆಗೆ ಗಂಭೀರ ಗಾಯವಾಗಿದೆ. ಭಾನುವಾರ ಬೆಳಗ್ಗೆ ಉಮೇಶ್ ಹಾಗೂ ರೇವತಿ (50) ದಂಪತಿ ಕೂಲಿ ಕೆಲಸಕ್ಕೆ ಬೈಕ್‌ನಲ್ಲಿ ಹೋಗುತ್ತಿದ್ದರು. ಈ ವೇಳೆ ಕಾಡಾನೆ ಏಕಾಏಕಿ ದಾಳಿ ನಡೆಸಿದೆ. ಪರಿಣಾಮ ರೇವತಿಯವರ ತಲೆ ಮತ್ತು ಸೊಂಟದ ಭಾಗಕ್ಕೆ ಗಂಭೀರ ಗಾಯಗಳಾಗಿವೆ. ಅದೃಷ್ಟವಶಾತ್ ದಂಪತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗಾಯಾಳುಗಳಿಗೆ ಅರೇಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಹಾಸನ ಜಿಲ್ಲಾಸ್ಪತ್ರೆಗೆ ರವಾನೆ ಮಾಡಲಾಗಿದೆ.

# ಕೇರಳಾಪುರದ ವೀರಭದ್ರೇಶ್ವರಸ್ವಾಮಿ ವಿಜೃಂಭಣೆಯ ರಥೋತ್ಸವ ಸಂಪನ್ನ



ಹಾಸನ, ಮಾ.9– ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಕೇರಳಾಪುರ ಗ್ರಾಮದಲ್ಲಿ ಚೋಳರ ಕಾಲದ ಪ್ರಸಿದ್ಧ ವೀರ ಭದ್ರೇಶ್ವರ ಸ್ವಾಮಿಯ ರಥೋತ್ಸವ ಸಂಭ್ರಮದಿಂದ ನಡೆಯಿತು.

ದೇವರ ಉತ್ಸವ ಮೂರ್ತಿಯನ್ನು ಹೊರತಂದು ಪ್ರದಕ್ಷಿಣೆ ಹಾಕಿದ ಬಳಿಕ ದೇವಸ್ಥಾನ ಎದುರಿದ್ದ ಅಲಂಕೃತ ರಥದ ಮೇಲೆ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು. ನಂತರ ಭಕ್ತರು ಹರ್ಷೋದ್ಗಾರದಿಂದ ತೇರು ಎಳೆದರು. ರಥ ಬೀದಿಯಲ್ಲಿ ತೇರು ಮುಂದೆ ಚಲಿಸುವಾಗಿ ಭಕ್ತರು ಹಣ್ಣು ಧವನ ಎಸೆದರು.

ಮೈಲಾರ ಲಿಂಗೇಶ್ವರ ದೇವಸ್ಥಾನದವರೆಗೆ ಸಾಗಿದ ತೇರನ್ನು ಸಂಜೆ ಪೂಜೆ ಸಲ್ಲಿಸಿ ವಾಪಸ್ ಸ್ವಸ್ಥಳಕ್ಕೆ ತಂದು ನಿಲ್ಲಿಸಲಾಯಿತು. ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದರು. ದೇವಾಲಯದ ವತಿಯಿಂದ ಸಾಮೂಹಿಕ ಅನ್ನಸಂತರ್ಪಣೆ ನಡೆಯಿತು. ದೇವಸ್ಥಾನದಲ್ಲಿ ಮೂರ್ತಿಯನ್ನು ಬಗೆ ಬಗೆಯ ಹೂಗಳಿಂದ ಸಿಂಗರಿಸಲಾಗಿತ್ತು.

## ಮುನಿಗೋಪಾಲ್‌ರಾಜುಗೆ ಸನ್ಮಾನ...



ಚೆಸ್ಕಾಂನ ಪ್ರಭಾರ ಎಂಡಿ ಆಗಿ ಅಧಿಕಾರ ಸ್ವೀಕರಿಸಿದ ಮುನಿಗೋಪಾಲ್‌ರಾಜು ಅವರನ್ನು ಮೈಸೂರಿನ ಯಾದವ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಕೆ.ಜವರೇಗೌಡ, ಜಂಟಿ ಕಾರ್ಯದರ್ಶಿ ಕೆ.ತುಕರಾಮ್, ಖಜಾಂಚಿ ವಾಸುದೇವ ಇನ್ನಿತರರಿದ್ದರು.

## ಬೀಡನಹಳ್ಳಿ ವ್ಯಕ್ತಿ ನಾಪತ್ತೆ



ಮೈಸೂರು,ಮಾ.9–ತಿ.ನರಸೀಪುರ ತಾಲೂಕು, ಬನ್ನೂರು ಹೋಬಳಿ ಬೀಡನಹಳ್ಳಿ ಬೆಟ್ಟೇಗೌಡ(68) ಎಂಬುವರು ಮನೆಯಿಂದ ಹೊರಗೆ ಹೋದವರು ವಾಪಸ್ ಬಾರದೆ ಕಾಣೆಯಾಗಿದ್ದಾರೆ ಎಂದು ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಸುಳಿವು ಸಿಕ್ಕವರು ದೂ. 0821–2520040, 2444800, 08227–275632, 9480805053 ಮೂಲಕ ತಿಳಿಸುವಂತೆ ಠಾಣೆಯ ಪ್ರಕಟಣೆ ಮನವಿ ಮಾಡಿದೆ.

# ಹೇಮಾವತಿ ಜಲಾನಯನ ಪ್ರದೇಶದಲ್ಲಿ ನೀರಿಗೆ ಹಾಹಾಕಾರ

## ಎಲ್ಲಾ ಶಾಸಕರ ಒಗ್ಗಟ್ಟಿನ ಹೋರಾಟ ಅಗತ್ಯ ಎಂದ ರೈತರು



ಹೇಮಾವತಿ ನೀರಿನ ಸಮಸ್ಯೆ ಕುರಿತು ತಾಲೂಕು ರೈತಸಂಘದ ಸದಸ್ಯರು ಸಭೆ ನಡೆಸಿ ಚರ್ಚಿಸಿದರು.

ಕೆ.ಆರ್.ಪೇಟೆ,ಮಾ.9– ಹೇಮಾವತಿ ಜಲಾನಯನ ಪ್ರದೇಶದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದ್ದು, ಈ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಜಲಾನಯನ ಪ್ರದೇಶದ ಎಲ್ಲಾ ಶಾಸಕರು ಒಗ್ಗಟ್ಟಿನ ಹೋರಾಟ ನಡೆಸಬೇಕಾಗಿದೆ ಎಂದು ತಾಲೂಕು ರೈತಸಂಘ ಆಗ್ರಹಿಸಿದೆ.

ಹೇಮಾವತಿ ನೀರಿನ ವಿಚಾರದಲ್ಲಿ ನಡೆಸಬೇಕಾದ ಮುಂದಿನ ಹೋರಾಟದ ಬಗ್ಗೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ರೈತ ಮುಖಂಡರ ಸಭೆಯಲ್ಲಿ ಮಾತನಾಡಿದ ತಾಲೂಕು ರೈತಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ, ಶಾಸಕ ಹೆಚ್.ಟಿ.ಮಂಜು ತಾಲೂಕಿನ ರೈತರ ಧ್ವನಿಯಾಗಿ ರಾಜ್ಯ ವಿಧಾನ ಸಭೆಯಲ್ಲಿ ಹೇಮಾವತಿ ನೀರಿನ ಸಮಸ್ಯೆ ಬಗ್ಗೆ ಧ್ವನಿಯೆತ್ತಿದ್ದಾರೆ. ಇದಕ್ಕಾಗಿ ರೈತಸಂಘ ಅವರನ್ನು ಅಭಿನಂದಿಸುತ್ತದೆ. ಹೇಮಾವತಿ ನೀರಿಗಾಗಿ ಶಾಸಕ ಹೆಚ್.ಟಿ. ಮಂಜು ಸದನದಲ್ಲಿ ಧ್ವನಿಯೆತ್ತಿದಾಗ ಅವರ ಧ್ವನಿ ಏಕಾಂಗಿಯಾಗಿತ್ತು. ಹೇಮಾವತಿ ಜಲಾನಯನ ಪ್ರದೇಶಕ್ಕೆ ಸೇರಿದ ನಾಗಮಂಗಲದ ಶಾಸಕ ಹಾಗೂ ರಾಜ್ಯ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸೇರಿದಂತೆ ಹೇಮಾವತಿ ಜಲಾನಯನ ಪ್ರದೇಶದ 18 ವಿಧಾನಸಭಾ ಸದಸ್ಯರು ಇದ್ದಾರೆ. ಈ ಪೈಕಿ ಯಾವುದೇ ಶಾಸಕರು ಹೇಮಾವತಿ ಭಾಗದ ರೈತರ ಹಿತಕ್ಕಾಗಿ ಸದನದಲ್ಲಿ ಧ್ವನಿಯೆತ್ತಿಲ್ಲ. ಇದು ನಾಚಿಕೆಗೇಡಿನ ಸಂಗತಿ ಎಂದರು.

ಕೆಆರ್‌ಎಸ್ ಜಲಾಶಯದ ನೀರಿನ ವಿಚಾರ ಬಂದಾಗ ಆ ಭಾಗದ ಎಲ್ಲಾ ಶಾಸಕರು ಪಕ್ಷಭೇದ ಮರೆತು ರೈತರ ಪರ ನಿಲ್ಲುತ್ತಾರೆ. ಆದರೆ ಹೇಮಾವತಿ ಜಲಾನಯನ ಪ್ರದೇಶದ ಯಾವುದೇ ಶಾಸಕರು ರೈತರ ಪರವಾಗಿ ಮಾತನಾಡದಿರುವುದು. ಹೇಮಾವತಿ ನೀರನ್ನು ಕೆಆರ್‌ಎಸ್. ಜಲಾಶಯಕ್ಕೆ ಬಸಿದುಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗಿದೆ ಎಂದು ಖಂಡಿಸಿದರು.

ರಾಜ್ಯದಲ್ಲಿ ಬರು ಬೇಸಿಗೆ ಆರಂಭವಾಗಿದೆ. ಕೆರೆ–ಕಟ್ಟೆಗಳು ಬರಿದಾಗಿದೆ. ಜನ–ಜಾನುವಾರುಗಳು ಮತ್ತು ಪ್ರಾಣಿ ಪಕ್ಷಿಗಳಗೂ ಕುಡಿಯುವ ನೀರಿಗೆ ಸಮಸ್ಯೆ ಎದುರಾಗಿದೆ. ತಾಲೂಕು ರೈತಸಂಘ ಈಗಾಗಲೇ ಹೇಮೆಯ ನೀರಿಗಾಗಿ ಹೋರಾಟ ಆರಂಭಿಸಿದೆ. ನಾವು ಬೆಳೆಗೆ ನೀರು ಕೇಳುತ್ತಿಲ್ಲ. ಗ್ರಾಮೀಣ ಪ್ರದೇಶದ ಜನರ ಕುಡಿಯುವ ನೀರಿನ ಸಮಸ್ಯೆಯ ಪರಿಹಾರಕ್ಕಾಗಿ ಹೇಮಾವತಿ ಜಲಾಶಯದಿಂದ ಒಂದು ಟಿಎಂಸಿ ನೀರು ಹರಿಸಿ ಕಾಲುವೆಗಳ ಮುಖಾಂತರ ಕೆರೆ–ಕಟ್ಟೆಗಳಿಗೆ ನೀರು ಹರಿಸಿ ಎಂದು ಕೇಳುತ್ತಿದ್ದೇವೆ ಎಂದು ಅವರು ಹೇಳಿದರು.

ಈ ಹಿಂದೆಯೂ ರೈತ ಹೋರಾಟಕ್ಕೆ ಮಣಿದು ರಾಜ್ಯ ಸರ್ಕಾರ ತನ್ನ ನಿಯಮಗಳಿಗೆ ಕಟ್ಟು ಬೀಳದೆ ಬೇಸಿಗೆಯಲ್ಲಿ ಹೇಮಾವತಿ ಜಲಾಶಯದಲ್ಲಿ ಕಡಿಮೆ ನೀರಿನ ಸಂಗ್ರಹವಿದ್ದಾಗಲೂ ಕೆರೆ–ಕಟ್ಟೆಗಳಿಗೆ ನೀರು ಹರಿಸಿದೆ. ಫೆಬ್ರವರಿ ತಿಂಗಳಿನಿಂದ ಮೇ ತಿಂಗಳವರೆಗೆ ಬರು ಬೇಸಿಗೆ ಇರುತ್ತದೆ. ಈ ಅವಧಿಯಲ್ಲಿಯೇ ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತದೆ.

ಹೇಮಾವತಿ ನೀರಿನ ವಿಚಾರದಲ್ಲಿ ಹೇಮಾವತಿ ಜಲಾನಯನ ಪ್ರದೇಶದ ಎಲ್ಲಾ ಶಾಸಕರು ಒಗ್ಗಟ್ಟಿನ ಮಂತ್ರ ಪಠಿಸಿ ಸರ್ಕಾರದ ಮೇಲೆ ಒತ್ತಡ ಹೇರಿ ಕೆರೆಕಟ್ಟೆಗಳಿಗೆ ತಕ್ಷಣವೇ ಜಲಾಶಯದಿಂದ ಹೇಮಾವತಿ ನಾಲೆಗಳಿಗೆ ನೀರು ಹರಿಸಲು ಕ್ರಮವಹಿಸುವಂತೆ ಕಾರಿಗನಹಳ್ಳಿ ಪುಟ್ಟೇಗೌಡ ಒತ್ತಾಯಿಸಿದ್ದಾರೆ.

ರೈತ ಮುಖಂಡರಾದ ಎಂ.ವಿ.ರಾಜೇಗೌಡ, ಮರುವನಹಳ್ಳಿ ಶಂಕರ್, ಕರೋಟಿ ತಮ್ಮಯ್ಯ, ನಾಗೇಗೌಡ, ಮುದ್ದುಕುಮಾರ್, ನಗರೂರು ಕುಮಾರ್, ಕೃಷ್ಣಾಪುರ ಮಿಲ್ ರಾಜಣ್ಣ ಸೇರಿದಂತೆ ಹಲವರಿದ್ದರು.

## ಸಾರ್ವಜನಿಕರು ನಿಶ್ಚಿಂತೆಯಿಂದ ಇರಲು ಕಾರಣ ಪೊಲೀಸ್ ಇಲಾಖೆ



**ಮಂಡ್ಯ:** ಸಮಾಜದಲ್ಲಿ ಯಾವುದೇ ತೊಂದರೆಯಾಗದಂತೆ ಸಾರ್ವಜನಿಕರು ಶಾಂತಿ, ಸುಖದಿಂದ ಬದುಕಲು ಹಾಗೂ ನಿಶ್ಚಿಂತೆಯಿಂದ ನಿದ್ದೆ ಮಾಡಲು ಕಾರಣ ಪೊಲೀಸ್ ಇಲಾಖೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಹೇಳಿದರು.

ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಮ್ಯಾರಥಾನ್ ಓಟಕ್ಕೆ ಹಸಿರು ಬಾವುಟ ಪ್ರದರ್ಶಿಸುವ ಮೂಲಕ ಚಾಲನೆ ನೀಡಿದ ಅವರು ಕರ್ನಾಟಕ ಪೊಲೀಸ್ ಇಲಾಖೆ 50 ವರ್ಷಗಳನ್ನು ಪೂರೈಸಿರುವುದು ಹೆಮ್ಮೆಯ ಸಂಗತಿ ಎಂದು ಹರ್ಷ ವ್ಯಕ್ತಪಡಿಸಿದರು.

ಶಿಸ್ತಿನ ಪ್ರತೀಕವಾಗಿ ಪೊಲೀಸ್ ಇಲಾಖೆ ಕಾರ್ಯನಿರ್ವಹಿಸುತ್ತಿದೆ. ಸಾಮಾಜದ ಸ್ವಾಸ್ಥ್ಯವನ್ನು ಪೊಲೀಸ್ ಇಲಾಖೆ ಕಾಪಾಡಿಕೊಂಡು ಬಂದಿರುವುದು ಶ್ಲಾಘನೀಯ, ನಾವೆಲ್ಲರೂ ಪೊಲೀಸ್ ಇಲಾಖೆಯ ಕಾರ್ಯವನ್ನು ಪ್ರಶಂಸಿಸಬೇಕು ಎಂದು ಹೇಳಿದರು.

ಮನಸ್ಸು ಮತ್ತು ದೇಹ ಆರೋಗ್ಯಕರವಾಗಿದ್ದರೆ ಸದೃಢವಾಗಿ ಕೆಲಸ ನಿರ್ವಹಿಸ ಬಹುದು, ಒಳ್ಳೆಯ ಅಭ್ಯಾಸಗಳನ್ನು ಬೆಳೆಸಿಕೊಂಡು ಸದೃಢರಾಗಲು ದೇಹವನ್ನು ದಂಡಿಸಬೇಕು, ಸಮಾಜಕ್ಕೆ ಉತ್ತಮ ಸೇವೆಯನ್ನು ಒದಗಿಸಬೇಕು, ಮ್ಯಾರಥಾನ್‌ನಲ್ಲಿ ಭಾಗವಹಿಸಿದ ಎಲ್ಲರಿಗೂ ಶುಭಾಶಯಗಳನ್ನು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ ನಮ್ಮ ಆರೋಗ್ಯ ಸೀಮಿತದಲ್ಲಿ ಇರಬೇಕೆಂದರೆ ಪ್ರತಿಯೊಬ್ಬರೂ ಸಧೃಡರಾಗಿ ಇರಬೇಕು, ಸದೃಢವಾಗಿ ಇರಲು ದೇಹವನ್ನು ದಂಡಿಸಬೇಕು, ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಇದನ್ನು ಸತತವಾಗಿ ಕಾಯ್ದುಕೊಳ್ಳಬೇಕು ಎಂದು ಹೇಳಿದರು.

ಈ ಮ್ಯಾರಥಾನ್ ಓಟದ ಮೂಲ ಉದ್ದೇಶ "ನಶೆ ಮುಕ್ತ ಕರ್ನಾಟಕ" ಅಭಿಯಾನ ಮಾಡುವುದು, ಹಾಗಾಗಿ 'ನಮ್ಮ ಪೊಲೀಸ್ ನಮ್ಮ ಹೆಮ್ಮೆ' ಎಂಬ ಘೋಷವಾಕ್ಯದಡಿ ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಚಲನಚಿತ್ರ ನಟ ರಿಷಿ, ಬಿಗ್ ಬಾಸ್ ಖ್ಯಾತಿಯ ರಜತ್, ಕನ್ನಡ ಮೀರಾ ಶಿವಲಿಂಗಯ್ಯ, ವೆಂಕಟಗಿರಿಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಕಲ್ಲಹಳ್ಳಿ ಗ್ರಾಮದ 111 ಗುಂಟೆ ಸರ್ಕಾರಿ ಜಮೀನು ಸರ್ವೆ ನಡೆಸಿ ಹದ್ದು ಬಸ್ತು ನಿಗದಿ ಮಾಡಲು ಸೂಚನೆ

**ಮಂಡ್ಯ:** ನಗರದ ಕಲ್ಲಹಳ್ಳಿ ಗ್ರಾಮದ ಬಳಿ ಇರುವ ಸರ್ವೆ ನಂಬರ್ 391ರಿಂದ 395 ವರೆಗಿನ 111 ಗುಂಟೆ ಸರ್ಕಾರಿ ಜಮೀನಿನ ಸರ್ವೆ ಕಾರ್ಯ ನಡೆಸಿ ಹದ್ದುಬಸ್ತು ನಿಗದಿ ಮಾಡಲು ಮುಂದಾಗಬೇಕೆಂದು ತಹಶೀಲ್ದಾರ್ ಶಿವಕುಮಾರ್ ಬಿರಾದರ್ ಅವರಿಗೆ ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ರವಿಕುಮಾರ್ ಗೌಡ ಸೂಚಿಸಿದರು.

ಇಂದು ಬೆಳಗ್ಗೆ ಕಲ್ಲಹಳ್ಳಿ ಗ್ರಾಮಸ್ಥರೊಡನೆ ಸದರಿ ಸರ್ಕಾರಿ ಜಮೀನು ವೀಕ್ಷಣೆ ನಡೆಸಿದ ಶಾಸಕರು, ಸದರಿ ಜಾಗದ ಹದ್ದುಬಸ್ತು ನಿಗದಿ ಮಾಡಿ, ಒತ್ತುವರಿ ತೆರವು ಮಾಡಬೇಕು ಮುಂದಿನ ಒಂದು ವಾರದೊಳಗೆ ಈ ಕಾರ್ಯ ಪೂರ್ಣಗೊಳಿಸಬೇಕೆಂದು ಸ್ಥಳದಲ್ಲಿದ್ದ ಭೂ ದಾಖಲೆಗಳ ಸಹಾಯಕ ನಿರ್ದೇಶಕಿ ಮಮತಾ ಹಾಗೂ ರಾಜಸ್ವ ನಿರೀಕ್ಷಕ ಪ್ರಭು ಅವರಿಗೆ ನಿರ್ದೇಶಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಗ್ರಾಮಸ್ಥರು ಬೇಡಿಕೆಯನ್ನು ಮನ್ನಿಸಿ ಈಗಾಗಲೇ ಮುಡಾ ವತಿಯಿಂದ 5 ಕೋಟಿ ರೂ. ವೆಚ್ಚದ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಕೆರೆ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತದೆ ಎಂದು ತಿಳಿಸಿದರು.

ಸದರಿ ಸರ್ಕಾರಿ ಜಾಗದಲ್ಲಿ ನಿರ್ಮಿಸಲುದ್ದೇಶಿಸಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಕನ್ನಡ ಭವನದ ಜೊತೆಗೆ ಗ್ರಾಮಸ್ಥರ ಬೇಡಿಕೆಯಂತೆ ರೈತರ ಅನುಕೂಲಕ್ಕೆ ಕಣ ಮತ್ತು ರಸ್ತೆ ನಿರ್ಮಾಣ ಮತ್ತು ಪಶು ಆಸ್ಪತ್ರೆ ನಿರ್ಮಾಣದ ಬಗ್ಗೆ ಗ್ರಾಮಸ್ಥರ ಜೊತೆ ಚರ್ಚಿಸಿ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದೆಂದರು.



ಗ್ರಾಮಸ್ಥರು ಸಹಕರಿಸಿದರೆ, ಸಾರ್ವಜನಿಕ ಅನುಕೂಲಕ್ಕೆ ಅಗತ್ಯವಾಗುವ ಯೋಜನೆಯನ್ನು ಜಾರಿಗೊಳಿಸಲು ಮುಂದಾಗುತ್ತೇವೆ, ಇದಕ್ಕೆ ಎಲ್ಲರ ಸಹಕಾರ ಹಾಗೂ ಸಂಯಮ ಅಗತ್ಯವಾಗಿದ್ದು, ಅರಳಿಕಟ್ಟೆ ನಿರ್ಮಾಣ ಮತ್ತು ಬೋರ್ ವೆಲ್ ಅಳವಡಿಕೆಗೆ ಕ್ರಮ ವಹಿಸುವ ಭರವಸೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಆರ್‌ಎಪಿಸಿಎಂಎಸ್ ನಿರ್ದೇಶಕ ಕೆ.ಸಿ.ರವೀಂದ್ರ, ನಗರಸಭಾ ಸದಸ್ಯ ಟಿ.ರವಿ, ಕೆಗುರುಸ್ವಾಮಿ, ಕೆರಾಜು, ಕೆಎಸ್. ಆನಂದ್, ಕೆ.ಜೆ.ಆನೂಪ್, ಕೆ.ಬಿ.ರಾಮು, ಕೆಸಿಮಂಜುನಾಥ್, ಕಾರ್ತಿಕ್ ಮತ್ತಿತರರಿದ್ದರು.

### ಶ್ರೀ ಲಕ್ಷ್ಮೀನಾರಾಯಣಸ್ವಾಮಿಯ ತೆಪ್ಪೋತ್ಸವ



ಕೆ.ಆರ್.ಪೇಟೆ ತಾಲೂಕಿನ ಹೊಸಹೊಳಲು ಗ್ರಾಮದ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ತೆಪ್ಪೋತ್ಸವವು ಗ್ರಾಮದ ಚಿಕ್ಕಕೆರೆಯಲ್ಲಿ ವೈಭವದಿಂದ ನಡೆಯಿತು.

## ಬಿಜೆಪಿ ನಾಯಕರಿಗೆ ತಾಕತ್ತಿದ್ದರೆ ಕೇಂದ್ರದ ವಿರುದ್ಧ ಪ್ರತಿಭಟಿಸಲಿ



ಮಳವಳ್ಳಿ, ಮಾ.9– ಬಿಜೆಪಿ ನಾಯಕರಿಗೆ ತಾಕತ್ತಿದ್ದರೆ ರಾಜ್ಯದ ಬಗ್ಗೆ ಗೌರವವಿದ್ದರೆ ಸ್ವಾಭಿಮಾನ ಇದ್ದರೆ ಕೇಂದ್ರದ ವಿರುದ್ಧ ಪ್ರತಿಭಟನೆ ಮಾಡಲಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸವಾಲು ಹಾಕಿದರು.

ಮಳವಳ್ಳಿ ಪಟ್ಟಣದಲ್ಲಿ ಭಾನುವಾರ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಾರಿಯ ಬಜೆಟ್‌ನಲ್ಲಿ ಎಲ್ಲಾ ವರ್ಗದ ಜನರಿಗೂ ಅವಕಾಶ ನೀಡುವ ಸಲುವಾಗಿ 4 ಲಕ್ಷ ಕೋಟಿಗೂ ಹೆಚ್ಚಿನ ಬಜೆಟ್ ಮಂಡಿಸಿದ್ದೇವೆ ಇದೊಂದು ಅಭಿವೃದ್ಧಿ ಪರವಾದ ಎಲ್ಲಾ ವರ್ಗದ ಜನರ ಏಳಿಗೆಗೆ ಪೂರಕವಾದ ಬಜೆಟ್. ಇಂತಹ ಬಜೆಟ್‌ನ್ನು ಸ್ವಾಗತಿಸುವ ಹೃದಯ ಶ್ರೀಮಂತಿಕೆ ಬಿಜೆಪಿ ಮುಖಂಡರಲ್ಲಿ ಇಲ್ಲ. ಹೊಟ್ಟೆ ಉರಿಯಿಂದ ಇಲ್ಲಸಲ್ಲದ ಟೀಕೆ ಮಾಡುತ್ತಾರೆ. ಇದಕ್ಕೆ ಔಷಧಿ ಕಳುಹಿಸೋಣ ಎಂದು ಮಾರ್ಮಿಕವಾಗಿ ಹೇಳಿದರು.

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಎಲ್ಲಾ ಬಡವರ ಅಭಿವೃದ್ಧಿಗೆ ಮುಂದಾಗಿದೆ. ಎದೆ ಸೀಳಿದರು ಮೂರು ಅಕ್ಷರ ಇಲ್ಲದ ಮುಸ್ಲಿಮರು ಪಂಚರ್ ಹಾಕಿಯೇ ಜೀವನ ಮಾಡಬೇಕು ಎಂದು ಬಿಜೆಪಿ ನಾಯಕರೇ ಹೇಳಿದ್ದರು. ಅಂತಹ ಜನರ ಅಭಿವೃದ್ಧಿ ಆಗಬೇಕಲ್ಲವೆ. ಈ ನಿಟ್ಟಿನಲ್ಲಿ ಸರ್ಕಾರಿ ಕಾಮಗಾರಿಯಲ್ಲಿ ಹಿಂದುಳಿದವರಿಗೆ, ಎಸ್ಸಿಎಸ್ಟಿಗಳಿಗೆ ಮೀಸಲಾತಿ ನೀಡಿದಂತೆ ಅಲ್ಪಸಂಖ್ಯಾತರಿಗೂ ನೀಡಿದ್ದೇವೆ ಇದರಲ್ಲಿ ತಪ್ಪೇನು ಎಂದು ಪ್ರಶ್ನಿಸಿದರು.

ಸಮಾಜ ಹೊಡೆಯಲು ಬಿಜೆಪಿಯವರು ಹೊರಟಿದ್ದಾರೆ, ನಾವು ಸಮಾಜದಲ್ಲಿ ಹಿಂದುಳಿದವರನ್ನು ಮುಖ್ಯ ವಾಹಿನಿಗೆ ತರಲು ಹೊರಟಿದ್ದೇವೆ. ಬೆಂಗಳೂರು ನಗರ ಸೇರಿದಂತೆ ರಾಜ್ಯದ ರಸ್ತೆಗಳ ಅಭಿವೃದ್ಧಿ, ನೀರಾವರಿ ಯೋಜನೆಗಳನ್ನು ಜಾರಿಗೆ ನೀಡಿದ್ದೇವೆ. ತಮ್ಮ ಅವಧಿಯಲ್ಲಿ ಇಂತಹ ಕೆಲಸ ಮಾಡಲು ಆಗಲಿಲ್ಲ ಎಂಬ ಹೊಟ್ಟೆ ಉರಿಯಿಂದ ಇಂತಹ ಟೀಕೆ ಮಾಡುತ್ತಿದ್ದು ಇದಕ್ಕೆಲ್ಲ ರಾಜ್ಯದ ಜನ ಈಗಾಗಲೇ ತಕ್ಕ ಉತ್ತರ ನೀಡಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ, ಮದ್ದೂರು ಶಾಸಕ ಉದಯ್‌ಗೌಡ, ಎಂ.ಎಸ್.ಚಿದಂಬರ್ ಈ ವೇಳೆ ಹಾಜರಿದ್ದರು.

### ಕೃಷ್ಣಕುಮಾರ್ ನಿಧನ

**ಶ್ರೀರಂಗಪಟ್ಟಣ:** ತಾಪಂ ಮಾಜಿ ಸದಸ್ಯ ಗಣಂಗೂರು ಕೃಷ್ಣ ಕುಮಾರ್ (57) ಭಾನುವಾರ ಸಂಜೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ತಾಯಿ, ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಿಗ್ಗೆ 10 ಗಂಟೆಗೆ ಗಣಂಗೂರು ಗ್ರಾಮದಲ್ಲಿ ನಡೆಯಲಿದೆ



ಒಂದನೇ ಪುಟದಿಂದ

## ಭಾರತಕ್ಕೆ ಚಾಂಪಿಯನ್ಸ್ ಕಿರೀಟ

ಈ ವೇಳೆ 62 ಎಸೆತಗಳಲ್ಲಿ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 48 ರನ್ ಗಳಿಸಿ ಅರ್ಧ ಶತಕದ ಅಂಚಿನಲ್ಲಿದ್ದ ಅಯ್ಯರ್ ಸ್ಯಾಂಟ್ನರ್‌ಗೆ ವಿಕೆಟ್ ಒಪ್ಪಿಸಿ ಹೊರ ನಡೆದರು. ಇನ್ನು ಶ್ರೇಯಸ್‌ಗೆ ಉತ್ತಮ ಸಾಥ್ ನೀಡಿದ ಅಕ್ಷರ್ ಪಟೇಲ್ 40 ಎಸೆತಗಳಲ್ಲಿ 29 ರನ್ ಗಳಿಸಿ ನಿರ್ಗಮಿಸಿದರು.

**ಕನ್ನಡಿಗನ ಎಚ್ಚರಿಕೆ ಆಟ:** ಲೀಗ್ ಪಂದ್ಯಗಳಲ್ಲಿ ಕಳಪೆ ಪ್ರದರ್ಶನದಿಂದ ಭಾರೀ ಟೀಕೆಗೆ ಗುರಿಯಾಗಿದ್ದ ಕನ್ನಡಿಗ ಕೆ.ಎಲ್. ರಾಹುಲ್ ಸೆಮಿಫೈನಲ್‌ನಂತೆ ಫೈನಲ್ ಪಂದ್ಯದಲ್ಲೂ ಎಚ್ಚರಿಕೆಯ ಆಟವಾಡಿದರು. ಪಂದ್ಯದಲ್ಲಿ ನ್ಯೂಜಿಲೆಂಡ್ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಅವರು 33 ಎಸೆತಗಳಲ್ಲಿ ತಲಾ ಒಂದೊಂದು ಸಿಕ್ಸರ್, ಬೌಂಡರಿ ಒಳಗೊಂಡ 34 ರನ್ ಗಳಿಸಿ ತಂಡಕ್ಕೆ ಜಯ ತಂದು ಕೊಟ್ಟರು. ಇವರೊಂದಿಗೆ ಜವಾಬ್ದಾರಿಯುತ ಆಟವಾಡಿದ ಹಾರ್ದಿಕ್ ಪಾಂಡ್ಯ 18, ರವೀಂದ್ರ ಜಡೇಜಾ 9 ರನ್ ಗಳಿಸಿದರು. ನ್ಯೂಜಿಲೆಂಡ್ ಪರ ಮಿಚೆಲ್ ಸ್ಯಾಂಟ್ನರ್, ಮೈಕಲ್ ಬ್ರೇಸ್‌ವೆಲ್ ತಲಾ 2, ಕೈಲ್ ಜೇಮಿಸನ್, ರಚಿನ್ ರವೀಂದ್ರ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ಪರ ಇನ್ನಿಂಗ್ಸ್ ಆರಂಭಿಸಿದ ರಚಿನ್ ರವೀಂದ್ರ ಹಾಗೂ ವಿಲ್ ಯಂಗ್ ಜೋಡಿ ಮೊದಲ ವಿಕೆಟ್‌ಗೆ 57 ರನ್‌ಗಳ ಜೊತೆಯಾಟವಾಡಿ ಉತ್ತಮ ಆರಂಭ ನೀಡಿತು. ಈ ವೇಳೆ ವಿಲ್ ಯಂಗ್ 15 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ರಚಿನ್ ರವೀಂದ್ರ 37 ರನ್ ಗಳಿಸಿ ಔಟಾದರೇ, ಕೇನ್ ವಿಲಿಯಮ್ಸನ್ 11, ಟಾಮ್ ಲಾಥಮ್ 14 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಜೊತೆಗೂಡಿದ ಫಿಲಿಪ್ಸ್ ಹಾಗೂ ಡೇರಿಲ್ ಮಿಚೆಲ್ ಜೋಡಿ 57 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿತು. ಆದರೆ ಗ್ಲೆನ್ ಫಿಲಿಪ್ಸ್ 34 ರನ್ ಗಳಿಸಿ ವಿಕೆಟ್ ಒಪ್ಪಿಸಿದರೇ, ಡೇರಿಲ್ ಮಿಚೆಲ್ 63 ರನ್ ಗಳಿಸಿ ತಂಡ 250 ರನ್ ಗಡಿ ದಾಟಲು ನೆರವಾದರು. ಉಳಿದಂತೆ ಮೈಕಲ್ ಬ್ರೇಸ್‌ವೆಲ್ 53, ಮಿಚೆಲ್ ಸ್ಯಾಂಟ್ನರ್ 8 ರನ್ ಗಳಿಸಿದರು.

ಭಾರತದ ಪರ ವರುಣ್ ಚಕ್ರವರ್ತಿ, ಕುಲ್‌ದೀಪ್ ಯಾದವ್ ತಲಾ 2, ಮೊಹಮ್ಮದ್ ಶಮಿ, ರವೀಂದ್ರ ಜಡೇಜಾ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು. ಅಂತಿಮವಾಗಿ ರೋಹಿತ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರೇ, ರಚಿನ್ ರವೀಂದ್ರ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

**ಬಹುಮಾನದ ಮೊತ್ತ:** ಚಾಂಪಿಯನ್ಸ್ ಟ್ರೋಫಿ ಗೆದ್ದ ಭಾರತ 2.24 ಮಿಲಿಯನ್ ಡಾಲರ್ (19.45 ಕೋಟಿ ರೂ.) ನಗದು ಬಹುಮಾನ ಪಡೆದಿದೆ. ರನ್ನರ್–ಅಪ್ ನ್ಯೂಜಿಲೆಂಡ್ 1.12 ದಶಲಕ್ಷ ಡಾಲರ್ (9.75 ಕೋಟಿರೂ.) ಪಡೆದಿದೆ. ಸೆಮಿಫೈನಲ್‌ನಲ್ಲಿ ಸೋತ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾಗೆ 4.86 ಕೋಟಿ ರೂ. ನೀಡಲಾಗುತ್ತದೆ. ಸುಮಾರು 60 ಕೋಟಿ ರೂಗಳು ಚಾಂಪಿಯನ್ಸ್ ಟ್ರೋಫಿಯ ಬಹುಮಾನದ ಗಾತ್ರವಾಗಿದ್ದು, ಚಾಂಪಿಯನ್, ರನ್ನರ್ ಅಪ್ ಹಾಗೂ ಸೆಮಿಫೈನಲ್‌ನಿಂದ ಹೊರಬಿದ್ದ ತಂಡಗಳನ್ನು ಹೊರತುಪಡಿಸಿ, ಗುಂಪು ಹಂತದಲ್ಲಿ ಪ್ರತಿ ಪಂದ್ಯದ ಗೆಲುವಿಗೆ 30 ಲಕ್ಷ ರೂ. ಬಹುಮಾನ ದೊರೆಯಲಿದೆ.

ಟೂರ್ನಿಯಲ್ಲಿ ಐದು ಮತ್ತು ಆರನೇ ಸ್ಥಾನ ಪಡೆದ ತಂಡಗಳು ಸುಮಾರು 3 ಕೋಟಿ ರೂ. ಬಹುಮಾನ ಪಡೆದರೆ, ಏಳು ಮತ್ತು ಎಂಟನೇ ಸ್ಥಾನ ಪಡೆದ ತಂಡಗಳು ಸುಮಾರು 1.2 ಕೋಟಿ ರೂ ಮೊತ್ತವನ್ನು ಪಡೆಯಲಿದೆ. ಇದಲ್ಲದೆ, ಈ ಐಸಿಸಿ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಎಲ್ಲಾ ಎಂಟು ತಂಡಗಳಿಗೆ ತಲಾ 1.08 ಕೋಟಿ ರೂ ಹಣ ಸಿಗಲಿದೆ.

### ಟೀಂ ಇಂಡಿಯಾ ಗೆಲುವು: ಗಣ್ಯರಿಂದ ಅಭಿನಂದನೆ

**ನವದೆಹಲಿ:** ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಮುಡಿಗೇರಿಸಿಕೊಂಡ ಭಾರತ ಕ್ರಿಕೆಟ್ ತಂಡವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಗಣ್ಯರು ಅಭಿನಂದಿಸಿದ್ದಾರೆ.

ಭಾರತ ಟ್ರೋಫಿಗೆ ಮುತ್ತಿಕ್ಕುತ್ತಿದ್ದಂತೆಯೇ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು, 3ಬಾರಿ ಚಾಂಪಿಯನ್ಸ್ ಟ್ರೋಫಿ ಗೆದ್ದ ಏಕೈಕ ತಂಡ ಭಾರತವಾಗಿದೆ. ಇತಿಹಾಸವನ್ನು ಸೃಷ್ಟಿಸಿದ ಆಟಗಾರರು, ನಿರ್ವಹಣೆ ಮತ್ತು ಸಹಾಯಕ ಸಿಬ್ಬಂದಿ ಅತ್ಯುನ್ನತ ಪುರಸ್ಕಾರಕ್ಕೆ ಅರ್ಹರು. ನಾನು ಭಾರತೀಯ ಕ್ರಿಕೆಟ್‌ಗೆ ಉಜ್ವಲ ಭವಿಷ್ಯವನ್ನು ಬಯಸುತ್ತೇನೆ ಎಂದು ಹೇಳಿದ್ದಾರೆ.

ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಪ್ರಧಾನಿ ಮೋದಿ, ಅಸಾಧಾರಣ ಆಟ ಮತ್ತು ಅಸಾಧಾರಣ ಫಲಿತಾಂಶ. ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಭಾರತಕ್ಕೆ ತಂದ ನಮ್ಮ ಕ್ರಿಕೆಟ್ ತಂಡದ ಬಗ್ಗೆ ಹೆಮ್ಮೆಯಿದೆ. ಅವರು ಟೂರ್ನಿಯುದ್ದಕ್ಕೂ ಅದ್ಭುತ ಪ್ರದರ್ಶನ ನೀಡಿದ್ದಾರೆ. ಸಂಘಟಿತ ಪ್ರದರ್ಶನಕ್ಕಾಗಿ ನಮ್ಮ ತಂಡಕ್ಕೆ ಅಭಿನಂದನೆಗಳು ಎಂದು ಶುಭ ಕೋರಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, "ಇದು ಇತಿಹಾಸ ಬರೆದ ಗೆಲುವು. ಐಸಿಸಿ #ಚಾಂಪಿಯನ್ಸ್ ಟ್ರೋಫಿ 2025ರಲ್ಲಿ ಅದ್ಭುತ ಗೆಲುವು ಸಾಧಿಸಿದ ಟೀಮ್ ಇಂಡಿಯಾಗೆ ಅಭಿನಂದನೆಗಳು. ನಿಮ್ಮ ಒಗ್ಗಟ್ಟಿನ ಶಕ್ತಿ ಮತ್ತು ಮೈದಾನದಲ್ಲಿನ ಅಜೇಯ ಪ್ರಾಬಲ್ಯವು, ದೇಶವನ್ನು ಹೆಮ್ಮೆಪಡುವಂತೆ ಮಾಡಿದೆ. ಕ್ರಿಕೆಟ್ ಶ್ರೇಷ್ಠತೆಗೆ ಹೊಸ ಮಾನದಂಡವನ್ನು ಕಟ್ಟಿಕೊಂಡ ಭಾರತ ತಂಡಕ್ಕೆ ಅಭಿನಂದನೆಗಳು. ನೀವು ಯಾವಾಗಲೂ ವಿಜಯದ ಸಂಕೇತರ.." ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಇದು ಅದ್ಭುತ ಗೆಲುವು. ನಿಮ್ಮಲ್ಲಿ ಪ್ರತಿಯೊಬ್ಬರೂ ಕೋಟ್ಯಂತರ ಹೃದಯಗಳನ್ನು ಹೆಮ್ಮೆಯಿಂದ ಗೆದ್ದುಕೊಂಡಿದ್ದೀರಿ. ಅದ್ಭುತ ವೈಯಕ್ತಿಕ ಪ್ರದರ್ಶನ ಮತ್ತು ಮೈದಾನದಲ್ಲಿ ಸಂಪೂರ್ಣ ಪ್ರಾಬಲ್ಯದಿಂದ ಗುರುತಿಸಲ್ಪಟ್ಟ ಟೂರ್ನಮೆಂಟ್‌ನಲ್ಲಿ, ಟೀಂ ಇಂಡಿಯಾದ ಅದ್ಭುತ ಗೆಲುವು ನಿಜವಾಗಿಯೂ ಸ್ಫೂರ್ತಿದಾಯಕವಾಗಿದೆ. ಅಭಿನಂದನೆಗಳು.." ಎಂದು ಟ್ವೀಟ್ ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವಿಟ್ ಮಾಡಿದ್ದು, ಅಮೋಘ ಆಟದ ಮೂಲಕ ಭಾರತ ತಂಡ ಚಾಂಪಿಯನ್ ಟ್ರೋಫಿಯ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಇಡೀ ಪಂದ್ಯಾವಳಿಯಲ್ಲಿ ಸೋಲಿಲ್ಲದ ಸರದಾರರಾದ ಭಾರತೀಯ ತಂಡಕ್ಕೆ ಅಭಿನಂದನೆಗಳು. ಬೌಲಿಂಗ್, ಬ್ಯಾಟಿಂಗ್, ಕ್ಷೇತ್ರರಕ್ಷಣೆ ಹೀಗೆ ಎಲ್ಲಾ ವಿಭಾಗಗಳಲ್ಲೂ ನಮ್ಮವರ ಆಟ ಹುಬ್ಬೇರಿಸುವಂತಿತ್ತು. ಪ್ರತಿ ಪಂದ್ಯದಲ್ಲೂ ರನ್ ಗಳಿಸುತ್ತಾ, ನಿರಂತರವಾಗಿ ತಂಡವನ್ನು ಗೆಲುವಿನ ದಡ ಸೇರಿಸುತ್ತಿರುವ ನಾಡಿನ ಮನೆಮಗ ಕೆ.ಎಲ್. ರಾಹುಲ್ ಆಟ ಹೆಚ್ಚು ಖುಷಿಕೊಟ್ಟಿದೆ. ಭಾರತ ಗೆದ್ದಿದೆ.. ಈ ಸಲ ಕಪ್ ನಮ್ದೆ. ಎಂದು ಸಂತಸ ವ್ಯಕ್ತಪಡಿಸಿದ್ದಾರೆ.





### ಆಸ್ಟ್ರೇಲಿಯಾ ದಾಖಲೆ ಉಡೀಸ್ ಮಾಡಿದ ಭಾರತ

**ದುಬೈ:** ಐಸಿಸಿ ಚಾಂಪಿಯನ್ಸ್ ಟ್ರೋಫಿ 2025ರ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಮಣಿಸಿದ ಭಾರತ ಮೂರನೇ ಬಾರಿಗೆ ಪ್ರಶಸ್ತಿ ಗೆಲ್ಲುವ ಮೂಲಕ ಪ್ರಬಲ ಆಸ್ಟ್ರೇಲಿಯಾದ ದಾಖಲೆ ಮುರಿದಿದೆ.

ಇನ್ನು ಐಸಿಸಿ ಟೂರ್ನಿಗಳ ವಿಚಾರ ಬಂದಾಗ ಆಸ್ಟ್ರೇ ಲಿಯಾ ಅತೀ ಹೆಚ್ಚು ಐಸಿಸಿ ಪ್ರಶಸ್ತಿಗಳನ್ನು ಗೆದ್ದ ತಂಡ ವಾಗಿದ್ದು, ಇಷ್ಟು ದಿನ ಎಲ್ಲ 3 ವಿಭಾಗದ ಮಾದರಿಯ ಕ್ರಿಕೆಟ್‌ನಲ್ಲಿ ಅತೀ ಹೆಚ್ಚು ಐಸಿಸಿ ಟೂರ್ನಿಗಳನ್ನು ಗೆದ್ದ ತಂಡವಾಗಿತ್ತು. ಆದರೆ ಇದೀಗ ಚಾಂಪಿಯನ್ಸ್ ಟ್ರೋಫಿ ವಿಭಾಗದಲ್ಲಿ ಭಾರತದ ಆಸೀಸ್ ದೈತ್ಯರನ್ನು ಹಿಂದಿಕ್ಕಿದೆ.

ಈವರೆಗೂ 9 ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಗಳಾಗಿದ್ದು, ಈ ಪೈಕಿ ಆಸ್ಟ್ರೇಲಿಯಾ 2 ಬಾರಿ ಗೆದ್ದಿತ್ತು. ಆಸ್ಟ್ರೇಲಿಯಾ 2006 ಮತ್ತು 2009ರಲ್ಲಿ ಚಾಂಪಿ ಯನ್ಸ್ ಟ್ರೋಫಿ ಗೆದ್ದಿತ್ತು. ಅತೀ ಹೆಚ್ಚು ಬಾರಿ ಚಾಂಪಿಯನ್ಸ್ ಟ್ರೋಫಿ ಗೆದ್ದ ತಂಡವಾಗಿ ಬೀಗುತ್ತಿತ್ತು. ಆದರೆ ಇದೀಗ ಭಾರತ 3ನೇ ಬಾರಿಗೆ ಪ್ರಶಸ್ತಿಗೆ ಮುತ್ತಿಡುವ ಮೂಲಕ ಭಾರತ 3ನೇ ಬಾರಿಗೆ ಚಾಂಪಿಯನ್ಸ್ ಟ್ರೋಫಿ ಗೆದ್ದು ಆಸ್ಟ್ರೇಲಿಯಾದ ದಾಖಲೆಯನ್ನು ಹಿಂದಿಕ್ಕಿದೆ.

ಭಾರತ ಮೊದಲು 2002ರಲ್ಲಿ ಚಾಂಪಿಯನ್ಸ್ ಟ್ರೋಫಿ ಗೆದ್ದಿತ್ತು. ಅಂದು ಭಾರತ ಮತ್ತು ಶ್ರೀಲಂಕಾ ಎರಡೂ ತಂಡ ಗಳನ್ನು ಜಂಟಿ ವಿನ್ನರ್ಸ್ ಆಗಿ ಘೋಷಣೆ ಮಾಡಲಾಗಿತ್ತು. ಬಳಿಕ 2013ರಲ್ಲಿ ಮಹೇಂದ್ರ ಸಿಂಗ್ ಧೋನಿ ನೇತೃತ್ವದಲ್ಲಿ ಭಾರತ ಚಾಂಪಿಯನ್ಸ್ ಟ್ರೋಫಿ ಗೆದ್ದಿತ್ತು. ಇದೀಗ 2025ರಲ್ಲಿ ರೋಹಿತ್ ಶರ್ಮಾ ನೇತೃತ್ವದಲ್ಲಿ ಭಾರತ ತಂಡ 3ನೇ ಬಾರಿಗೆ ಚಾಂಪಿಯನ್ಸ್ ಟ್ರೋಫಿ ಎತ್ತಿ ಹಿಡಿದಿದೆ.

## ಬೆದರಿಕೆ: ಆತಂಕ ನಿರ್ಮಾಣ

ಆವರಣದಲ್ಲಿ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಹಾಕಿದ್ದ. ಬಾಂಬ್ ಬೆದರಿಕೆ ಕರೆ ಸ್ವೀಕರಿಸಿದ ಸಿಬ್ಬಂದಿ ತಕ್ಷಣವೇ ಮೇಲಾಧಿಕಾರಿಗಳ ಗಮನಕ್ಕೆ ತಂದರು. ಕೂಡಲೇ ತಪಾಸಣಾ ಕಾರ್ಯಕ್ಕೆ ಮುಂದಾದ ಆರ್‌ಪಿಎಫ್ ತಂಡ ರೈಲ್ವೆ ನಿಲ್ದಾಣವನ್ನೆಲ್ಲಾ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿಗಳೊಂದಿಗೆ ಜಾಲಾಡಿತು.

ನಿಲ್ದಾಣದಲ್ಲಿರುವ ಪ್ರತಿಯೊಂದು ಪ್ಲಾಟ್‌ಫಾರಂ, ಮಳಿಗೆ, ಪ್ರಯಾಣಿಕರ ವಿಶ್ರಾಂತಿ ಗೃಹ, ಕಚೇರಿ ಕೊಠಡಿ ಸೇರಿದಂತೆ ರೈಲ್ವೆ ನಿಲ್ದಾಣವನ್ನು ಪರಿಶೀಲಿಸಿದ ಬಳಿಕ ನಿಲ್ದಾಣದಲ್ಲಿದ್ದ ರೈಲುಗಳ ಬೋಗಿಗಳನ್ನು ಪರಿಶೀಲಿಸಲಾಯಿತು. ಅಲ್ಲದೆ, ಮೆಟಲ್ ಡಿಟೆಕ್ಟರ್ ದಾಟಿ ರೈಲ್ವೆ ನಿಲ್ದಾಣಕ್ಕೆ ಬಂದಿದ್ದ ಪ್ರತಿಯೊಬ್ಬ ಪ್ರಯಾಣಿಕರ ಬ್ಯಾಗ್, ಸೂಟ್‌ಕೇಸ್ ಸೇರಿದಂತೆ ತಂದಿದ್ದ ಲಗೇಜ್ ಪರಿಶೀಲಿಸಲಾಯಿತು. ಅಲ್ಲದೆ, ವಿವಿಧ ಪಾರ್ಸೆಲ್ ರೂಪದಲ್ಲಿ ಸಾಗಿಸಲು ತರಲಾಗಿದ್ದ ವಿವಿಧ ವಸ್ತುಗಳಿದ್ದ ಲಗೇಜ್ ರೂಮ್ ಪರಿಶೀಲಿಸಲಾಯಿತು. ಬಾಂಬ್ ಬೆದರಿಕೆ ಕರೆಯನ್ನು ಗಂಭೀರವಾಗಿ ಪರಿಗಣಿಸಿದ ರೈಲ್ವೆ ಪೊಲೀಸರು ಸತತವಾಗಿ ಎರಡು ಗಂಟೆಗೂ ಹೆಚ್ಚು ಕಾಲ ರೈಲ್ವೆ ನಿಲ್ದಾಣದಲ್ಲಿ ತೀವ್ರ ತಪಾಸಣೆ ನಡೆಸಿದ ಬಳಿಕ ಬಾಂಬ್ ಬೆದರಿಕೆ ಕರೆ ಹುಸಿ ಕರೆ ಎಂದೇ ನಿರ್ಧರಿಸಲಾಯಿತು.

**ಕಟ್ಟೆಚ್ಚರ ಮುಂದುವರಿಕೆ:** ಸತತ ಪರಿಶೀಲನೆ ಬಳಿಕ ಹುಸಿ ಕರೆಯೆಂದು ಪರಿಗಣಿಸಲಾಯಿತಾದರೂ, ರೈಲ್ವೆ ನಿಲ್ದಾಣಕ್ಕೆ ಬರುವ ಹಾಗೂ ವಿವಿಧ ರೈಲುಗಳ ಮೂಲಕ ಮೈಸೂರಿಗೆ ಆಗಮಿಸುವ ಪ್ರಯಾಣಿಕರ ಮೇಲೆ ರೈಲ್ವೆ ಪೊಲೀಸರು ಹದ್ದಿನ ಕಣ್ಣಿಟ್ಟು ತಪಾಸಣೆ ನಡೆಸಿದರು. ಅಲ್ಲದೆ, ನಿಲ್ದಾಣದ ಪ್ಲಾಟ್‌ಫಾರಂನಲ್ಲಿ ಗಸ್ತು ಹೆಚ್ಚಿಸಲಾಗಿತ್ತು.

**ಕರೆ ಬೆನ್ನತ್ತಿದ್ದ ಪೊಲೀಸರು:** ಹುಸಿ ಬೆದರಿಕೆ ಕರೆ ಮಾಡಿದ ಅನಾಮದೇಯನ ವಿರುದ್ಧ ಪ್ರಕರಣ ದಾಖಲಿಸಿರುವ ಪೊಲೀಸರು ಹುಸಿ ಕರೆಯ ಜಾಡು ಹಿಡಿದು ತನಿಖೆ ಆರಂಭಿಸಿದ್ದಾರೆ.

## ಆಸ್ಪತ್ರೆಗೆ ದಾಖಲು

ಆಸ್ಪತ್ರೆಯ ಕಾರ್ಡಿಯಾಲಜಿ ವಿಭಾಗದ ಮುಖ್ಯಸ್ಥರಾದ ಡಾ.ರಾಜೀವ್ ನಾರಂಗ್ ನೇತೃತ್ವದ ತಂಡ ಧನ್ಕರ್‌ಗ ಚಿಕಿತ್ಸೆ ನೀಡುತ್ತಿದೆ. ಎದೆನೋವು ಹಾಗೂ ಉಸಿರಾಟದ ಸಮಸ್ಯೆ ತೀವ್ರವಾಗಿದ್ದ ಕಾರಣ ಜಗದೀಪ್ ಧನ್ಕರ್ ಅವರನ್ನು ಕ್ರಿಟಿಕಲ್ ಕೇರ್ ಯೂನಿಟ್(ಸಿಸಿಯು)ನಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯದ ಮಾಹಿತಿ ಪ್ರಕಾರ ಧನ್ಕರ್ ಆರೋಗ್ಯ ಸ್ಥಿರವಾಗಿದೆ. ಚಿಕಿತ್ಸೆ ಮುಂದುವರಿಸಲಾಗಿದೆ ಎಂದಿದ್ದಾರೆ. ಇಂದು ಬೆಳಗ್ಗೆ 2 ಗಂಟೆ ಸುಮಾರಿಗೆ ಧನ್ಕರ್ ಅವರನ್ನು ಆಸ್ಪತ್ರೆ ದಾಖಲಿಸಲಾಗಿದೆ.

73 ವರ್ಷದ ಜಗದೀಪ್ ಧನ್ಕರ್ ಆಸ್ಪತ್ರೆ ದಾಖಲಾಗುತ್ತಿದ್ದಂತೆ ಹಲವು ನಾಯಕರು ಆಸ್ಪತ್ರೆಯತ್ತ ದೌಡಾಯಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಏಮ್ಸ್ ಆಸ್ಪತ್ರೆಗೆ ಭೇಟಿ ನೀಡಿದ್ದಾರೆ. ಧನ್ಕರ್‌ಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ತಂಡದ ಜೊತೆ ಮೋದಿ ಮಾತುಕತೆ ನಡೆಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ನರೇಂದ್ರ ಮೋದಿ, ಏಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಉಪರಾಷ್ಟ್ರಪತಿ ಜಗದೀಪ್ ಧನ್ಕರ್ ಆರೋಗ್ಯ ವಿಚಾರಿಸಿದ್ದೇನೆ. ಜಗದೀಪ್ ಧನ್ಕರ್ ಉತ್ತಮ ಆರೋಗ್ಯಕ್ಕಾಗಿ ಹಾಗೂ ಶೀಘ್ರ ಚೇತರಿಕೆಗಾಗಿ ಪ್ರಾರ್ಥಿಸುತ್ತಿದ್ದೇನೆ ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

## 'ನಮ್ಮ ಪೊಲೀಸ್– ನಮ್ಮ ಹೆಮ್ಮೆ' ಮ್ಯಾರಥಾನ್

10 ಕಿ.ಮೀ. ಓಟವು ಅರಮನೆಯಿಂದ ಡಿ.ದೇವರಾಜು ರಸ್ತೆ, ಜೆಎಲ್‌ಬಿ ರಸ್ತೆ, ಮೆಟ್ರೋಪೋಲ್ ವೃತ್ತ, ಕಲಾಮಂದಿರ, ಪಡುವಾರಹಳ್ಳಿ, ಬಯಲು ರಂಗಮಂದಿರ, ಸೆನೆಟ್ ಭವನ, ಕುವೆಂಪು ಪ್ರತಿಮೆ, ಬೋಗಾದಿ ರಸ್ತೆ, ಫೈರ್ ಬ್ರಿಗೇಡ್, ಏಕಲವ್ಯವೃತ್ತ, ರಾಮಸ್ವಾಮಿ, ತಾತಯ್ಯ ವೃತ್ತ, ಬಸವೇಶ್ವರ ವೃತ್ತ, ಗನ್‌ಹೌಸ್, ಹಾರ್ಡಿಂಜ್ ವೃತ್ತ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಕೊನೆಗೊಂಡಿತು. ಸಾರ್ವಜನಿಕರು, ಪೊಲೀಸ್ ಇಲಾಖೆ ಮತ್ತು ಇತರ ವಿಶೇಷ ಘಟಕಗಳಿಂದ 9 ಸಾವಿರ ಸ್ಪರ್ಧಿಗಳು ಭಾಗವಹಿಸಿದ್ದರು. ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾತನಾಡಿ, ಮ್ಯಾರಥಾನ್ ಯಶಸ್ವಿಗೊಳಿಸಿದ ಎಲ್ಲಾರಿಗೂ ಧನ್ಯವಾಧಗಳು, ಇಷ್ಟು ಸಂಖ್ಯೆಯ ಕ್ರೀಡಾಪಟುಗಳು ಪಾಲ್ಗೊಂಡಿರುವುದು ಸಂತೋಷವಾಗಿದೆ ಎಂದರು.

ದಕ್ಷಿಣ ವಲಯದ ಡಿಐಪಿ ಡಾ.ಬೋರಲಿಂಗಯ್ಯ ಮಾತನಾಡಿ, ಈ ಮ್ಯಾರಥಾನ್‌ನಲ್ಲಿ 9–10 ಸಾವಿರ ಜನ ಪಾಲ್ಗೊಂಡಿರುವುದು ಶ್ಲಾಘನೀಯ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಓಟಗಾರರನ್ನು ಒಂದೆಡೆ ಸೇರಿಸಿರುವುದು ಸಂತೋಷವುಂಟು ಮಾಡಿದೆ. 'ನಮ್ಮ ಪೊಲೀಸ್ ನಮ್ಮ ಹೆಮ್ಮೆ', 'ಫಿಟ್‌ನೆಸ್ ಫಾರ್ ಆಲ್', 'ಮಾದಕ ವಸ್ತು ಮುಕ್ತ ಕರ್ನಾಟಕ' ಘೋಷಣೆಯೊಂದಿಗೆ ಕರ್ನಾಟಕ ಪೊಲೀಸ್ ಇಲಾಖೆ ಮ್ಯಾರಥಾನ್ ಆಯೋಜಿಸಿದೆ. ದೈಹಿಕ ಸಧೃಡತೆ, ಆರೋಗ್ಯ ಕಾಪಾಡಿಕೊಳ್ಳುವುದು ಅಗತ್ಯ. ಎಲ್ಲರೂ ಫಿಟ್‌ನೆಸ್ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಡಿಸಿಪಿಗಳಾದ ಎಂ.ಮುತ್ತುರಾಜ್, ಜಾಹ್ನವಿ, ಎಸ್ಪಿ ಡಾ.ವಿಷ್ಣುವರ್ಧನ್, ಸಿಎಆರ್ ಡಿಸಿಪಿ ಮಾರುತಿ, ಕಮಾಂಡೆಂಟ್ ಭೀಮಯ್ಯ, ಎಎಸ್ಪಿ ಮಲ್ಲಿಕ್, ಎಸಿಪಿಗಳು, ಇನ್ಸ್‌ಪೆಕ್ಟರ್‌ಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಕೆಪಿಎ ಸಿಬ್ಬಂದಿ ನಂದಿನಿ, ನಿರೂಪಕಿ ಕೌಸಲ್ಯ ನಿರೂಪಣೆ ಮಾಡಿದರು.

## ಹಳೇ ಕಟ್ಟಡ ಕುಸಿದು ಇಬ್ಬರು ಸಾವು

ಪೊಲೀಸರು ತಿಳಿಸಿದ್ದಾರೆ. ಸತ್ಯನಾರಾಯಣ ಎಂಬುವರಿಗೆ ಸೇರಿದ್ದ ಎಂಟು ಮಳಿಗೆಗಳಿದ್ದ ಹಳೆಯ ಕಟ್ಟಡ ಇದಾಗಿದ್ದು, ಇದರ ಮುಂದೆ ಫುಟ್‌ಪಾತ್‌ನಲ್ಲಿ ವ್ಯಾಪಾರ ನಡೆಯುತ್ತಿತ್ತು. ಇಂದು ಮಧ್ಯಾಹ್ನ 1.30ರ ಸುಮಾರಿನಲ್ಲಿ ಈ ವೇಳೆ ಕಟ್ಟಡದ ಸಜ್ಜಾ ಕುಸಿದುಬಿದ್ದಿದೆ. ಇದರ ಪರಿಣಾಮ ಇಬ್ಬರು ಸಾವನ್ನಪ್ಪಿ, ಮೂವರು ಮಹಿಳೆಯರು ತೀವ್ರವಾಗಿ ಗಾಯಗೊಂಡಿದ್ದಾರೆ. ಸ್ಥಳಕ್ಕೆ ಬೇಲೂರು ಪೊಲೀಸರು ಹಾಗೂ ಅಗ್ನಿಶಾಮಕ ದಳ ದೌಡಾಯಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ.

ಘಟನೆ ಸಂಬಂಧ ಹಾಸನ ಎಸ್‌ಪಿ ಮೊಹಮ್ಮದ್ ಸುಜೀತಾ ಪ್ರತಿಕ್ರಿಯಿಸಿದ್ದು, ಹಾಸನ ಜಿಲ್ಲೆ ಬೇಲೂರಿನಲ್ಲಿ ಹಳೆಯ ಕಟ್ಟಡದ ಸಜ್ಜಾ ಕುಸಿತದಲ್ಲಿ ನಜೀರ್, ಅಮರನಾಥ್ ಎಂಬುವವರು ಮೃತಪಟ್ಟಿದ್ದಾರೆ. ಚನ್ನಕೇಶವಸ್ವಾಮಿ ದೇವಾಲಯ ರಸ್ತೆಯಲ್ಲಿರುವ ಖಾಸಗಿ ಕಟ್ಟಡದ ಸಜ್ಜಾ ಕುಸಿದು ಅನಾಹುತ ಸಂಭವಿಸಿದ್ದು, ನೀಲಮ್ಮ, ಜ್ಯೋತಿ, ಎಂಬುವರು ಗಂಭೀರ ಗಾಯಗೊಂಡಿದ್ದಾರೆ. ಇನ್ನು ಸಣ್ಣಪುಟ್ಟ ಗಾಯಗೊಂಡಿರುವ ಶಿಲ್ಪಾ ಎಂಬುವರನ್ನು ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತರು, ಗಾಯಾಳುಗಳು ರಸ್ತೆ ಬದಿ ವ್ಯಾಪಾರಿಗಳೆಂಬ ಮಾಹಿತಿ ಇದೆ ಎಂದು ತಿಳಿಸಿದರು. ಈ ದುರ್ಘಟನೆಯಿಂದ ಹೂ ವ್ಯಾಪಾರಿ ಪವಾಡ ಸದೃಶ ರೀತಿಯಲ್ಲಿ ಪಾರಾಗಿದ್ದಾರೆ, ಈಗ ಕುಸಿದು ಬಿದ್ದಿರುವ ಈ ಸಜ್ಜಾ ಕೆಳಗೆ ಸೋಮಶೇಖರ್ ಎಂಬ ವ್ಯಕ್ತಿ ಹೂ ವ್ಯಾಪಾರ ಮಾಡುತ್ತಿದ್ದ. ಆದರೆ, ನಿದ್ದೆ ಮಂಪರಿನಲ್ಲಿ ಅಂಗಡಿ ಬಿಟ್ಟು ಪಕ್ಕಕ್ಕೆ ಹೋಗಿದ್ದ. ಆ ವೇಳೆ ಸಜ್ಜಾ ಕುಸಿದುಬಿದ್ದಿದೆ. ಅದೃಷ್ಟವಶಾತ್ ಹೂ ವ್ಯಾಪಾರಿ ಸೋಮಶೇಖರ್ ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ಇನ್ನು ಈ ಬಗ್ಗೆ ಸೋಮಶೇಖರ್ ಮಾಧ್ಯಮದೊಂದಿಗೆ ಮಾತನಾಡಿ, ನೋಡ ನೋಡುತ್ತಲೇ ನಮ್ಮ ಜೊತೆಗಿದ್ದವರ ಸಾವಾಗಿದೆ. ಯಾವುದೋ ಜನ್ಮದ ಪುಣ್ಯ ನನ್ನ ಜೀವ ಉಳಿಸಿದೆ. ದೇವರೇ ನನ್ನ ಪಾರು ಮಾಡಿದ್ದಾನೆ. ಇಂದು ಭಾನುವಾರ ಹಾಗಾಗಿ ಹೆಚ್ಚಿನ ವ್ಯಾಪಾರಿಗಳು ಬಂದಿಲ್ಲ. ಬೇರೆ ದಿನ ಆಗಿದ್ದರೆ ದೊಡ್ಡ ದುರಂತ ಆಗುತ್ತಿತ್ತು ಎಂದು ಘಟನೆಯ ಭೀಕರತೆ ಬಿಚ್ಚಿಟ್ಟಿದ್ದಾರೆ.

ಮೈಸೂರು ಮಿತ್ರ



# ಬೇಸಿಗೆ ಬಿರು ಬಿಸಿಲು: ನಾಗರಹೊಳೆಯಲ್ಲಿ ಕಾಡಂಚಿನ ಕೆರೆಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ

● ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ವಲಯದಲ್ಲಿ ಈ ಬಾರಿಯೂ ಟ್ಯಾಂಕರ್ ಸೇವೆ ● ಕುಡಿಯುವ ನೀರಿಗಾಗಿ ಕಾಡಂಚಿನ ಗ್ರಾಮಗಳಿಗೆ ಪ್ರಾಣಿಗಳು ಬರದಂತೆ ನೋಡಿಕೊಳ್ಳಲು ಕ್ರಮ





ನಾಗರಹೊಳೆಯ ಅಂತರಸಂತೆ ವಲಯದ ಕೆರೆಗಳಿಗೆ ಟ್ಯಾಂಕರ್ ಮೂಲಕ ನೀರು ತುಂಬಿಸುತ್ತಿರುವುದು. ಕೆರೆಗೆ ನೀರು ತುಂಬಿಸಿ ಟ್ಯಾಂಕರ್ ಹೊರಡುತ್ತಿದ್ದಂತೆಯೇ ಬಂದ ಹುಲಿ.

### ವನ್ಯಜೀವಿಗಳ ಹಿತಕಾಯಲು ಕ್ರಮ



ನಾಗರಹೊಳೆ ಅಭಯಾರಣ್ಯದಲ್ಲಿ ವನ್ಯಜೀವಿಗಳ ಹಿತ ಕಾಯಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಪ್ರಾಣಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕಟ್ಟೆಚ್ಚರ ವಹಿಸಲಾಗಿದೆ. ಬೇಸಿಗೆಯಲ್ಲಿ ಅರಣ್ಯ ಸಂಪತ್ತು ಕಾಪಾಡಲು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.

–ಪಿ.ಎ.ಸೀಮಾ, ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ.

ಅಂತರಸಂತೆ ವಲಯದಲ್ಲಿ 6 ಕೆರೆಗಳಲ್ಲಿ ನೀರು ಖಾಲಿಯಾಗಿದ್ದು, ಅವುಗಳಿಗೆ ಟ್ಯಾಂಕರ್ ಮೂಲಕ ನೀರುಣಿಸಲು ಕ್ರಮ ಕೈಗೊಳ್ಳಲಾಗಿದೆ. ಅದರಲ್ಲೂ ಕಾಡಂಚಿನ ಗ್ರಾಮಗಳ ಅಂಚಿನಲ್ಲಿ ಅರಣ್ಯ ಪ್ರದೇಶದಲ್ಲಿರುವ ಕೆರೆಗಳಿಗೆ ಆದ್ಯತೆ ನೀಡಿ ನೀರು ತುಂಬಿಸಲಾಗುತ್ತಿದೆ. ಕೆಲವು ಕೆರೆಗಳಿಗೆ ಸೋಲಾರ್ ಬೋರ್‌ವೆಲ್ ಇರುವುದರಿಂದ ಪ್ರಾಣಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುವುದಿಲ್ಲ.


–ಸಿದ್ದರಾಜು, ಆರ್‌ಎಫ್‌ಓ, ಅಂತರಸಂತೆ ವಲಯ




ಬೈಕ್‌ನಲ್ಲಿ ಮೋಟಾರ್ ಸ್ಪ್ರೇಯರ್ ಇಟ್ಟುಕೊಂಡು ಬೇಸಿಗೆ ಗಸ್ತಿನಲ್ಲಿ ತೊಡಗಿರುವ ಸಿಬ್ಬಂದಿ.



ಟವರ್ ಮೇಲೆ ಅರಣ್ಯ ವೀಕ್ಷಣೆ ಮಾಡುತ್ತಿರುವ ಸಿಬ್ಬಂದಿ.





ಸಫಾರಿ ವೇಳೆ ಪ್ರವಾಸಿಗರಿಗೆ ದರ್ಶನ ನೀಡಿದ ಹುಲಿ, ಆನೆ. ಚಿತ್ರಗಳು: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಮಾ.9– ಬಿಸಿಲಿನ ಬೇಗೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಅರಣ್ಯ ಪ್ರದೇಶಗಳು ಒಣಗಲಾರಂಭಿಸಿವೆ. ಕೆಲವು ಕೆರೆಗಳಲ್ಲಿ ನೀರು ಬತ್ತಿ ಹೋಗಿದ್ದು, ಪ್ರಾಣಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ ನೋಡಿಕೊಳ್ಳಲು ಅರಣ್ಯ ಇಲಾಖೆ ಟ್ಯಾಂಕರ್ ಮೂಲಕ ಕೆರೆಗೆ ನೀರು ಪೂರೈಸಲು ಮುಂದಾಗಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿಯೇ ಅಂತರಸಂತೆ ವಲಯದ ಸಫಾರಿ ಕೇಂದ್ರ, ರಾಜ್ಯ ಮಾತ್ರವಲ್ಲದೆ ದೇಶದ ಗಮನ ಸೆಳೆದಿದ್ದು, ಹುಲಿ ಮತ್ತು ಆನೆಗಳು ಸೇರಿದಂತೆ ವಿವಿಧ ಪ್ರಾಣಿಗಳ ಸಾಂದ್ರತೆ ಹೆಚ್ಚಾಗಿರುವ ವಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಹೆಚ್ಚಿನ ಹುಲಿಗಳ ಆವಾಸ ಸ್ಥಾನ, ಕಪ್ಪು ಚಿರತೆ ಸಾಮ್ರಾಜ್ಯ, ಆನೆಗಳ ಹಿಂಡು, ಸಾಂಬಾರ್, ಕಾಡು ಕುರಿ(ಬಾರ್ಕಿಂಗ್ ಡೀರ್), ಹೆಬ್ಬಾವು, ಸೀಳುನಾಯಿ(ಕಾಡುನಾಯಿ), ಜಿಂಕೆ ಸೇರಿದಂತೆ ವೈವಿಧ್ಯಮಯ ವನ್ಯಸಂಕುಲ ಹೊಂದಿರುವ ಅಂತರಸಂತೆ ವಲಯ ಕಬಿನಿ ಹಿನ್ನೀರಿನ ಪ್ರದೇಶಕ್ಕೂ ಹೊಂದಿಕೊಂಡಿದೆ. ಕಾಡಂಚಿನ ಹಲವು ಗ್ರಾಮ ಹಾಗೂ ಹಾಡಿಯನ್ನು ಅಂತರಸಂತೆ ವಲಯ ಹೊಂದಿದ್ದು, ಈ ಹಿನ್ನೆಲೆಯಲ್ಲಿ ಮಾನವ–ಪ್ರಾಣಿ ಸಂಘರ್ಷ ತಡೆಗೆ ವಿವಿಧ ಕ್ರಮ ಕೈಗೊಳ್ಳಲಾಗಿದೆ.

**6 ಕೆರೆಯಲ್ಲಿ ನೀರಿಲ್ಲ:** ಅಂತರಸಂತೆ ವಲಯದಲ್ಲಿ 18 ಕೆರೆಗಳಿದ್ದು, ಅವುಗಳಲ್ಲಿ 6 ಕೆರೆಯಲ್ಲಿ ನೀರಿನ ಕೊರತೆ ಉಂಟಾಗಿದೆ. ಈ ಕೆರೆಗಳಲ್ಲಿ ನೀರು ಸಂಪೂರ್ಣವಾಗಿ ಬತ್ತಿ ಹೋಗುವ ಮುನ್ನವೇ ಅರಣ್ಯ ಇಲಾಖೆ ಮುಂದಾಲೋಚನೆಯಿಂದ ನೀರು ತುಂಬಿಸುವ ಕಾರ್ಯ ಆರಂಭಿಸಿದೆ. ಟ್ಯಾಂಕರ್ ಮೂಲಕ ಪ್ರತಿದಿನ ಖಾಲಿಯಿರುವ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಇದರಿಂದ ಹುಲಿ, ಆನೆ ಸೇರಿದಂತೆ ವಿವಿಧ ಪ್ರಾಣಿಗಳಿಗೆ ಕುಡಿಯಲು ನೀರು ಪೂರೈಸಿದಂತಾಗಿದೆ.

**ನೀರಿಗಾಗಿ ಗ್ರಾಮಗಳಿಗೆ ಬರದಂತೆ ಕ್ರಮ:** ಹೆಚ್.ಡಿ.ಕೋಟೆಯಿಂದ ಮಾನಂದವಾಡಿ ರಸ್ತೆ ಅಂತರಸಂತೆ ವಲಯ ವ್ಯಾಪ್ತಿಯ ಅರಣ್ಯ ಪ್ರದೇಶದಂಚಿಗೆ ಕೆಲ ಗ್ರಾಮ ಮತ್ತು ಹಾಡಿಗಳಿವೆ. ಕಾಡು ಹಾಗೂ ಕಾಡಂಚಿನ ಗ್ರಾಮಗಳ ಅಂಚಿನಲ್ಲಿರುವ ಕೆರೆಗಳಿಗೆ ನೀರು ತುಂಬಿಸಲು ಆದ್ಯತೆ ನೀಡಲಾಗಿದೆ. ಈ ಹಿಂದೆ ಗ್ರಾಮಗಳ ಅಂಚಿನಲ್ಲಿ ಅರಣ್ಯ ಪ್ರದೇಶದಲ್ಲಿರುವ ಕೆರೆಗಳಲ್ಲಿ ಪ್ರತಿದಿನ ನೀರು ಕುಡಿದು ಅಭ್ಯಾಸವಾಗಿದ್ದ ಪ್ರಾಣಿಗಳು, ಬೇಸಿಗೆಯಲ್ಲಿ ಕೆರೆಯಲ್ಲಿ ನೀರು ಬತ್ತಿಹೋದ ಹಿನ್ನೆಲೆಯಲ್ಲಿ ಕಾಡಂಚಿನ ಗ್ರಾಮಗಳತ್ತ ಹೋಗಬಾರದೆಂದು ಮುಂಜಾಗ್ರತಾ ಕ್ರಮದಿಂದಾಗಿ ಕೆರೆಗಳಿಗೆ ನೀರುಣಿಸಲಾಗುತ್ತಿದೆ.

ಅರಣ್ಯದ ಒಳಭಾಗ ಕೆಲವು ಕೆರೆಗಳಿಗೆ ಸೋಲಾರ್ ಬೋರ್‌ವೆಲ್ ಇರುವುದರಿಂದ ನೀರು ಕೆರೆಗಳಲ್ಲಿ ತುಂಬಿವೆ. ಕಳೆದ ವರ್ಷ ಮಳೆ ಹೆಚ್ಚಾಗಿ ಬಂದ ಕಾರಣ ಮತ್ತಷ್ಟು ಕೆರೆಗಳಲ್ಲಿ ತುಂಬಿರುವ ನೀರು ಪ್ರಾಣಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುವುದಿಲ್ಲ. ಅಲ್ಲದೆ, ಕಬಿನಿ ಹಿನ್ನೀರಿನ ಪ್ರದೇಶವೂ ಪಕ್ಕದಲ್ಲಿಯೇ ಇರುವುದರಿಂದ ಪ್ರಾಣಿಗಳಿಗೆ ವರದಾನವಾಗಿ ಪರಿಣಮಿಸಿದೆ.

**ಕಟ್ಟೆಚ್ಚರ:** ಬೇಸಿಗೆಯಿಂದಾಗಿ ಅರಣ್ಯ ಪ್ರದೇಶ ಒಣಗಿರುವುದರಿಂದ ಸಂಭವನೀಯ ಕಾಡ್ಗಿಚ್ಚು ಪ್ರಕರಣ ತಡೆಗಟ್ಟಲು ಈಗಾಗಲೇ ಬೆಂಕಿ ತಡೆರೇಖೆ ನಿರ್ಮಾಣ ಸೇರಿದಂತೆ ವಿವಿಧ ಕ್ರಮ ಕೈಗೊಳ್ಳಲಾಗಿದ್ದು, ಅರಣ್ಯದ ಎತ್ತರ ಪ್ರದೇಶದಲ್ಲಿ ನಿರ್ಮಿಸಿರುವ ವಾಚ್ ಟವರ್ ಮೇಲೆ ದಿನವಿಡೀ ಸಿಬ್ಬಂದಿ ಹದ್ದಿನ ಕಣ್ಣಿಟ್ಟು ಅರಣ್ಯ ಕಾವಲು ಕಾಯುತ್ತಿದ್ದಾರೆ. ಅಲ್ಲದೆ, ಬೈಕ್‌ಗಳಲ್ಲಿ ಮೋಟಾರ್ ಚಾಲಿತ ಎರಡು ಸ್ಪ್ರೇಯರ್ ಇಟ್ಟುಕೊಂಡು ಗಸ್ತು ತಿರುಗುವ ವ್ಯವಸ್ಥೆ ಕಲ್ಪಿಸಲಾಗಿದೆ.

**ಬೇಸಿಗೆಯಲ್ಲೂ ಪ್ರಾಣಿಗಳ ದರ್ಶನ:** ಅಂತರಸಂತೆಯ ವಲಯದ ಕಾಕನಕೋಟೆ ಸಫಾರಿ ಕೇಂದ್ರದಿಂದ ಸಫಾರಿಗೆ ಹೋಗಿದ್ದ ಪ್ರವಾಸಿಗರಿಗೆ ಬೇಸಿಗೆಯಲ್ಲಿ ಅರಣ್ಯ ಪ್ರದೇಶ ಒಣಗಿರುವ ದರ್ಶನವಾಗಿದ್ದರೂ, ವಿವಿಧೆಡೆ ಹುಲಿ, ಆನೆ ವಿವಿಧ ಪ್ರಾಣಿಗಳು ದರ್ಶನ ನೀಡಿ ಪುಳಕಿತರನ್ನಾಗಿಸಿದವು.

## ರೈಲಿನಲ್ಲಿ ಸಿಕ್ಕ 56,770 ಹಣದ ಬ್ಯಾಗ್ ಹಿಂತಿರುಗಿಸಿ ಪ್ರಾಮಾಣಿಕತೆ ಮೆರೆದ ರೈಲ್ವೆ ಟಿಕೆಟ್ ಇನ್‌ಸ್ಪೆಕ್ಟರ್

ಮೈಸೂರು, ಮಾ.9(ಬಿಎಲ್‌ಯು, ಬಿಸಿಟಿ)– ಮೈಸೂರಿನ ಹಿರಿಯ ರೈಲ್ವೆ ಅಧಿಕಾರಿಯೊಬ್ಬರು ರೈಲಿನಲ್ಲಿ ಅನಾಥವಾಗಿ ಬಿದ್ದಿದ್ದ ಹಣವಿರುವ ಬ್ಯಾಗ್ ಅನ್ನು ಅದರ ಮಾಲೀಕರಿಗೆ ಹಿಂತಿರುಗಿಸಿ ಪ್ರಾಮಾಣಿಕತೆ ಮೆರೆದಿದ್ದಾರೆ.

ಎಂಜಿಆರ್ ಚೆನ್ನೈನಿಂದ ಕೆಎಸ್‌ಆರ್ ಬೆಂಗಳೂರು ರೈಲಿನಲ್ಲಿ ನಿನ್ನೆ ಮೈಸೂರು ವಿಭಾಗದ ಉಪ ಮುಖ್ಯ ಟಿಕೆಟ್ ಇನ್ಸ್‌ಪೆಕ್ಟರ್ (ಡಿಸಿಟಿಐ) ಎಂ.ಎಸ್.ಅನಿತಾ ಅವರು ಕರ್ತವ್ಯದಲ್ಲಿದ್ದರು. ಈ ವೇಳೆ ಬೋಗಿಯ ಸೀಟ್ ಸಂಖ್ಯೆ 13 ಮತ್ತು 14ರಲ್ಲಿ ಕೈ ಚೀಲವೊಂದು ಬಿದ್ದಿತ್ತು. ಕೈ ಚೀಲ ತಮ್ಮದೆಂದು ಯಾರು ಹಕ್ಕು ಮಂಡಿಸಲಿಲ್ಲ. ಈ ವೇಳೆ ಅನಿತಾ ಅವರು ಕೈ ಚೀಲ ತೆರೆದು ನೋಡಿದಾಗ ಅದರಲ್ಲಿ 56,770 ಹಣವಿತ್ತು. ತರುವಾಯ ಮೈಸೂರಿನಲ್ಲಿರುವ ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್)ಗೆ ಬ್ಯಾಗ್ ಅನ್ನು ಸುರಕ್ಷಿತವಾಗಿ ಹಸ್ತಾಂತರ ಮಾಡಿ ಪ್ರಾಮಾಣಿಕತೆ ಮೆರೆದರು. ಇಂದು ಬೆಳಗ್ಗೆ ಹಣವಿದ್ದ ಬ್ಯಾಗ್ ಮಾಲೀಕರು ರೈಲ್ವೆ ಪೊಲೀಸರನ್ನು ಸಂಪರ್ಕಿಸಿ ಅದನ್ನು ಪಡೆದರು. ಈ ವೇಳೆ ರೈಲ್ವೆ ಇಲಾಖೆ ಸಿಬ್ಬಂದಿ ಪ್ರಾಮಾಣಿಕತೆ ಹಾಗೂ ದಕ್ಷತೆಯ ಸೇವೆಗಾಗಿ ಪ್ರಶಂಸೆ ವ್ಯಕ್ತಪಡಿಸಿದರು.

### ಅಭಿನಂದನೆ...



ಮೈಸೂರು ಗಾಂಧಿ ಚೌಕದ ದಿ ಮೈಸೂರ್ ಕೋ–ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಳಿ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿ, ಈಗ ಬ್ಯಾಂಕ್‌ನ ಉಪಾಧ್ಯಕ್ಷರಾಗಿ ರವಿ (ಟೆಂಟ್ ರವಿ) ಆಯ್ಕೆಯಾಗಲು ಸಹಕರಿಸಿದ ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಮಾದೇಶ್ ಹಾಗೂ ಜೆಡಿಎಸ್ ಮುಖಂಡ ಮಂಜಣ್ಣ ಅವರನ್ನು ಕುಂಬಾರಕೊಪ್ಪಲಿನ ಗ್ರಾಮಸ್ಥರ ಪರವಾಗಿ ಅಭಿನಂದಿಸಲಾಯಿತು. ಈ ವೇಳೆ ಮುಖಂಡರಾದ ಭೈರಪ್ಪ, ಟೆಂಟ್ ರಾಜಣ್ಣ, ರಾಜೇಂದ್ರ, ಚೇತನ, ಚೆಲುವೇಗೌಡ, ವಿ.ಟಿ.ಎಲ್.ಲೋಕೇಶ್, ಕುಮಾರ್ ಫಾಲ್ಕನ್, ಚೆಲುವಣ್ಣ, ಡಾಬ ಪ್ರಸನ್ನ, ರಾಮ್‌ಪ್ರಸಾದ್, ಶ್ರೀನಿವಾಸ್, ಭೈರಿ, ರಘು, ಗುಂಡ, ಚಿದಾನಂದ ಇನ್ನಿತರರಿದ್ದರು.

## ಇಂದಿನಿಂದ ಎರಡು ದಿನ ಒಂಟಿಕೊಪ್ಪಲಿನಲ್ಲಿ ಸಿದ್ದಪ್ಪಾಜಿ ಜಾತ್ರೆ



ಮೈಸೂರು,ಮಾ.9(ಪಿಎಂ)– ಒಂಟಿಕೊಪ್ಪಲಿನ ಕಾಳಿದಾಸ ರಸ್ತೆಯ 2ನೇ ಕ್ರಾಸ್‌ನ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ವತಿಯಿಂದ ಮಾ.10 ಮತ್ತು 11ರಂದು ಶ್ರೀ ಸಿದ್ದಪ್ಪಾಜಿ ದೇವರ 75ನೇ ವರ್ಷದ ಜಾತ್ರಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಮಾ.10ರ ಸೋಮವಾರ ಬೆಳಗ್ಗೆ 10 ಗಂಟೆಯಿಂದ ಗಣಪತಿ ಪೂಜೆ, ಪುಣ್ಯಾಹ, ಕಲಾ ಹೋಮ, ಪೂರ್ಣಾಹುತಿ ಪೂಜಾ ವಿಧಿವಿಧಾನಗಳು ನಡೆಯಲಿವೆ. ಬಳಿಕ ಮಧ್ಯಾಹ್ನ 1 ಗಂಟೆಗೆ ಕುಂಭಾಭಿಷೇಕ, ಮಹಾ ಮಂಗಳಾರತಿ ನಡೆಯಲಿದ್ದು, ನಂತರ ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 7 ಗಂಟೆಗೆ ರಥೋತ್ಸವವು ಮೊಹಲ್ಲಾದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ. ಹೂ ಹೊಂಬಾಳೆ ಅಲಂಕೃತವಾದ ಕಂಡಾಯ ಮತ್ತು ಪಂಚ ಕಳಸ ನೀಲಗಾರರು, ಬಸವಪ್ಪನವರು, ತಮಟೆ ಮತ್ತು ಹೂ ದೀಪಾಲಂಕಾರಗಳಿಂದ ಕೂಡಿದ ಜಾನಪದ ಕಲಾ ತಂಡಗಳು ರಥೋತ್ಸವದಲ್ಲಿ ಸಾಗಲಿವೆ. ದೇವಸ್ಥಾನಕ್ಕೆ ರಥೋತ್ಸವ ಮರಳಿದ ನಂತರ ದೇವಾಲಯದಲ್ಲಿ ಮಹಾಮಂಗಳಾರತಿ ನಡೆಯಲಿದೆ. ಮಾ.11ರ ಮಧ್ಯಾಹ್ನ 1 ಗಂಟೆಗೆ ದೇವಸ್ಥಾನದಲ್ಲಿ ಮಹಾಮಂಗಳಾರತಿ ನಡೆಯಲಿದ್ದು, ಬಳಿಕ ಅನ್ನಸಂತರ್ಪಣೆ ಜರುಗಲಿದೆ.

### ಅಭಿನಂದನೆ...



ಡಿವೈಎಸ್‌ಪಿ ಆಗಿ ಮುಂಬಡ್ತಿ ಹೊಂದಿದ ಮೈಸೂರು ಹೆಬ್ಬಾಳು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಮಲ್ಲೇಶ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಪ್ರಬುದ್ಧ ವೇದಿಕೆ ಅಧ್ಯಕ್ಷ ಜೆ.ಎಂ ಜವರನಾಯಕ, ಉಪಾಧ್ಯಕ್ಷ ಟಿ.ಕಾಟೂರು ಸಿದ್ದರಾಜು, ಜಯಪುರ ಎಂ.ರಂಗಸ್ವಾಮಿ, ಗುಮಚನಹಳ್ಳಿ ಪ್ರವೀಣ್ ಇನ್ನಿತರರು ಉಪಸ್ಥಿತರಿದ್ದರು.

### ಹೆಚ್.ಪಿ.ಚಿದಂಬರಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಚ್.ಟಿ.ವೆಂಕಟೇಶಮೂರ್ತಿ ಅವರ ಮಾರ್ಗದರ್ಶನದಲ್ಲಿ ಹೆಚ್.ಪಿ. ಚಿದಂಬರ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

## ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮ



ಮೈಸೂರಿನ ವಿ.ವಿ.ಮೊಹಲ್ಲಾದಲ್ಲಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಸಮಾರಂಭದಲ್ಲಿ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು,ಮಾ.9(ಎಂಟಿವೈ)– ವಿದ್ಯಾರ್ಥಿನಿಯರು ಶ್ರದ್ಧೆಯಿಂದ ಅಧ್ಯಯನದಲ್ಲಿ ತೊಡಗಿ ಶಿಕ್ಷಣ ಮಾತ್ರವಲ್ಲದೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವತ್ತ ಗಮನ ಹರಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿನಿರ್ದೇಶಕ ಬಿ.ರಂಗೇಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ವಿ.ವಿ.ಮೊಹಲ್ಲಾದಲ್ಲಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸಮೀಪಿಸುತ್ತಿದೆ. ಈಗಾಗಲೇ ವಿದ್ಯಾರ್ಥಿಗಳಿಗೆ ಪಾಠಗಳು ಪೂರ್ಣಗೊಂಡಿದೆ. ಪರೀಕ್ಷೆಗಾಗಿ ವಿದ್ಯಾರ್ಥಿನಿಲಯದಲ್ಲಿ ಹೆಚ್ಚುವರಿ ತರಗತಿ ಸೇರಿದಂತೆ ವಿವಿಧ ಕಾರ್ಯಕ್ರಮ ರೂಪಿಸಿ ಸಜ್ಜುಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿಲಯದಲ್ಲಿರುವ ವಿದ್ಯಾರ್ಥಿನಿಯರು ತಮ್ಮ ಕಷ್ಟದ ಹಾದಿಯನ್ನು ನೆನೆದು, ಹಿರಿಯರನ್ನು ಆದರ್ಶವಾಗಿಟ್ಟುಕೊಂಡು ಸಾಧನೆ ಮಾಡುವತ್ತ ಗಮನ ಹರಿಸಬೇಕು ಎಂದರು. ಸಮಾರಂಭದಲ್ಲಿ ಸಾಹಿತಿ ಜಯಪ್ಪ ಹೊನ್ನಾಳಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಜನಾರ್ಧನ್, ಮಹಿಳಾ–ಮಕ್ಕಳ ಕಲ್ಯಾಣ ಇಲಾಖೆಯ ತಿಬ್ಬಯ್ಯ, ದೀಪಾ ಮಲ್ಲಿಕಾರ್ಜುನ, ಮುರಳೀಧರ್, ಸುಷ್ಮ ಕುಮಾರ್, ರಮೇಶ್, ಬಸವರಾಜು, ಶಿವಮಲ್ಲಯ್ಯ, ಚಿಕ್ಕೀರಯ್ಯ, ಪ್ರದೀಪ್, ಮಹೇಶ್, ವಾರ್ಡನ್ ಗಾಯತ್ರಿ, ರುಕ್ಮಿಣಿ, ಶೈಲಶ್ರೀ ಉಪಸ್ಥಿತರಿದ್ದರು. ಇದೇ ವೇಳೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

## ದೇಶ - ವಿದೇಶ

### ಸಿರಿಯಾದಲ್ಲಿ ಪ್ರತೀಕಾರದ ಹತ್ಯೆ: 2 ದಿನದಲ್ಲಿ ಸಾವಿರಕ್ಕೂ ಅಧಿಕ ಮಂದಿ ಸಾವು

**ಬೈರುತ್:** ಸಿರಿಯನ್ ಭದ್ರತಾ ಪಡೆಗಳು ಮತ್ತು ಪದಚ್ಯುತ ಅಧ್ಯಕ್ಷ ಬಷರ್ ಅಸ್ಸಾದ್ ಅವರ ನಿಷ್ಠಾವಂತರ ನಡುವಿನ 2 ದಿನಗಳ ಕಾಳಗದಲ್ಲಿ ಸೇಡಿನ ಹತ್ಯೆಗಳಲ್ಲಿ ಮೃತಪಟ್ಟ ನಾಗರಿಕರ ಸಂಖ್ಯೆ ಸಾವಿರಕ್ಕೂ ಅಧಿಕವಾಗಿದೆ ಎಂದು ಯುದ್ಧ ಮೇಲ್ವಿಚಾರಣಾ ಗುಂಪು ತಿಳಿಸಿದೆ. ಇದು 14 ವರ್ಷಗಳ ಹಿಂದೆ ಸಿರಿಯಾದ ಸಂಘರ್ಷ ಪ್ರಾರಂಭವಾದಾಗಿನಿಂದ ನಡೆದ ಅತ್ಯಂತ ಮಾರಕ ಹಿಂಸಾಚಾರಗಳಲ್ಲಿ ಒಂದಾಗಿದೆ. 745 ನಾಗರಿಕರು ಮೃತಪಟ್ಟಿದ್ದಾರೆ. ಹತ್ತಿರದಿಂದ ನಡೆದ ಗುಂಡಿನ ದಾಳಿಯಲ್ಲಿ, 125 ಸರ್ಕಾರಿ ಭದ್ರತಾ ಪಡೆ ಸದಸ್ಯರು ಮತ್ತು ಅಸ್ಸಾದ್‌ಗೆ ಸಂಬಂಧಿಸಿದ ಸಶಸ್ತ್ರ ಗುಂಪುಗಳೊಂದಿಗೆ 148 ಉಗ್ರರು ಮೃತಪಟ್ಟಿದ್ದಾರೆ ಎಂದು ಬ್ರಿಟನ್ ಮೂಲದ ಸಿರಿಯನ್ ಮಾನವ ಹಕ್ಕುಗಳ ವೀಕ್ಷಣಾಲಯವು ಹೇಳಿದೆ. ಲಟಾಕಿಯಾ ನಗರದ ಸುತ್ತಮುತ್ತಲಿನ ದೊಡ್ಡ ಪ್ರದೇಶಗಳಲ್ಲಿ ವಿದ್ಯುತ್ ಮತ್ತು ಕುಡಿಯುವ ನೀರನ್ನು ಕಡಿತಗೊಳಿಸಲಾಗಿದೆ ಎಂದು ಅದು ಹೇಳಿದೆ. ಕಳೆದ ಗುರುವಾರ ಭುಗಿಲೆದ್ದ ಘರ್ಷಣೆಗಳಿಂದ ಅಸ್ಸಾದ್ ಅವರನ್ನು ಅಧಿಕಾರದಿಂದ ತೆಗೆದುಹಾಕಿದ ನಂತರ ದಂಗೆಕೋರರು ಅಧಿಕಾರ ವಹಿಸಿಕೊಂಡ ಮೂರು ತಿಂಗಳ ನಂತರ, ಡಮಾಸ್ಕಸ್‌ನಲ್ಲಿ ಹೊಸ ಸರ್ಕಾರಕ್ಕೆ ಪ್ರಮುಖ ಸಮಸ್ಯೆಗಳು ಉಂಟಾದವು.

### ಮಣಿಪುರದಲ್ಲಿ ಮತ್ತೆ ಘರ್ಷಣೆ: ಒರ್ವ ಸಾವು, 25 ಮಂದಿಗೆ ಗಾಯ



**ಇಂಫಾಲ:** ಗಲಭೆಪೀಡಿತ ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯಾದ ನಂತರ ಮತ್ತೆ ಘರ್ಷಣೆ ನಡೆದಿದೆ. ಶನಿವಾರ ಕಾಂಗ್‌ಪೋಕ್ಪಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕುಕಿ ಪ್ರತಿಭಟನಾಕಾರರು ಮತ್ತು ಭದ್ರತಾ ಪಡೆಗಳ ನಡುವಿನ ಘರ್ಷಣೆಯಲ್ಲಿ ಒಬ್ಬ ಪ್ರತಿಭಟನಾಕಾರ ಸಾವನ್ನಪ್ಪಿದ್ದಾನೆ. ಮಹಿಳೆಯರು ಸೇರಿದಂತೆ 25 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೃತನನ್ನು 30 ವರ್ಷದ ಲಾಲ್ ಗೌತಾಂಗ್ ಸಿಂಗ್ಸಿಟ್ ಎಂದು ಗುರುತಿಸಲಾಗಿದೆ. ಘರ್ಷಣೆ ವೇಳೆ ಗುಂಡು ತಗುಲಿ ಗಂಭೀರವಾಗಿ ಗಾಯಗೊಂಡಿದ್ದ ಆತನನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ. ಗಮ್ಗಿಫೈ, ಮೋಟ್‌ಬಂಗ್, ಕೀಥೆಲ್‌ಮಂಬಿಯಲ್ಲಿ ಭದ್ರತಾ ಪಡೆಗಳೊಂದಿಗೆ ನಡೆದ ಘರ್ಷಣೆಯಲ್ಲಿ ಕನಿಷ್ಠ 25 ಪ್ರತಿಭಟನಾಕಾರರು ಗಾಯಗೊಂಡಿದ್ದು, ಅವರನ್ನು ಸ್ಥಳೀಯ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಪ್ರತಿಭಟನಾಕಾರರು ಖಾಸಗಿ ವಾಹನಗಳಿಗೆ ಬೆಂಕಿ ಹಚ್ಚಿದ್ದು, ಇಂಫಾಲ್‌ನಿಂದ ಸೇನಾಪತಿ ಜಿಲ್ಲೆಗೆ ಪ್ರಯಾಣಿಸುತ್ತಿದ್ದ ರಾಜ್ಯ ಸಾರಿಗೆ ಬಸ್ ಅನ್ನು ತಡೆಯಲು ಪ್ರಯತ್ನಿಸಿದಾಗ ಪರಿಸ್ಥಿತಿ ಹದಗೆಟ್ಟಿತು ಎಂದು ಪೊಲೀಸರು ತಿಳಿಸಿದರು.

### ಉಕ್ರೇನ್ ಮೇಲೆ ಕ್ಷಿಪಣಿ ದಾಳಿ ನಡೆಸಿದ ರಷ್ಯಾ; 25 ಮಂದಿ ಸಾವು



**ಉಕ್ರೇನ್:** ಅಸೋಸಿಯೇಟೆಡ್ ಪ್ರೆಸ್ (ಎಪಿ) ವರದಿ ಪ್ರಕಾರ, ಶುಕ್ರವಾರ ರಾತ್ರಿ ಉಕ್ರೇನ್‌ನ ಡೊನೆಟ್ಸ್ಕ್ ಪ್ರದೇಶದ ಡೊಬ್ರೊಪಿಲ್ಯಾ ಕೇಂದ್ರದ ಮೇಲೆ ರಷ್ಯಾ ಎರಡು ಬ್ಯಾಲಿಸ್ಟಿಕ್ ಕ್ಷಿಪಣಿಗಳೊಂದಿಗೆ ಭಯಾನಕ ದಾಳಿ ನಡೆಸಿದೆ ಎಂದು ಉಕ್ರೇನಿಯನ್ ಅಧಿಕಾರಿಗಳು ತಿಳಿಸಿದ್ದಾರೆ. ದಾಳಿಯಲ್ಲಿ ಕನಿಷ್ಠ 25 ಮಂದಿ ಸಾವನ್ನಪ್ಪಿದ್ದು, 5 ಮಕ್ಕಳು ಸೇರಿದಂತೆ ಸುಮಾರು 30 ಜನರು ಗಾಯಗೊಂಡಿದ್ದಾರೆ. ಈ ಸಂಬಂಧ ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಶನಿವಾರ ಬೆಳಿಗ್ಗೆ (ಮಾರ್ಚ್ 8) ಟೆಲಿಗ್ರಾಮ್ ಮೂಲಕ ಹೇಳಿಕೆ ನೀಡಿದ್ದು, ನಿನ್ನೆ ರಾತ್ರಿ, ರಷ್ಯಾದ ಸೇನೆಯು ಡೊನೆಟ್ಸ್ಕ್ ಪ್ರದೇಶದ ಡೊಬ್ರೊಪಿಲ್ಯಾ ಕೇಂದ್ರದ ಮೇಲೆ ಎರಡು ಬ್ಯಾಲಿಸ್ಟಿಕ್ ಕ್ಷಿಪಣಿಗಳೊಂದಿಗೆ ದಾಳಿ ಮಾಡಿತು. ಈ ದಾಳಿಯ ನಂತರ ನಮ್ಮ ತುರ್ತು ಸೇವೆಗಳ ಸಿಬ್ಬಂದಿ ಸ್ಥಳಕ್ಕೆ ತಲುಪಿದಾಗ ಉದ್ದೇಶಪೂರ್ವಕವಾಗಿ ಗುರಿಯಾಗಿಸಿಕೊಂಡು ಮತ್ತೊಂದು ದಾಳಿ ನಡೆಸಲಾಯಿತು. ಈ ರೀತಿಯ ಬೆದರಿಕೆ ಮತ್ತು ಬೆದರಿಕೆ ವಿಧಾನವು ಅತ್ಯಂತ ಅಸಹ್ಯಕರ ಮತ್ತು ಅಮಾನವೀಯವಾಗಿದ್ದು, ಇದನ್ನು ರಷ್ಯಾದ ಕಡೆಗೆ ಹೆಚ್ಚಾಗಿ ಬಳಸಲಾಗುತ್ತದೆ ಎಂದು ಹೇಳಿದ್ದಾರೆ.

### ಎಸ್‌ಎಲ್‌ಬಿಸಿ ಸುರಂಗ ಕುಸಿತ: ರಕ್ಷಣಾ ಕಾರ್ಯದಲ್ಲಿ ರೋಬೋಟ್ ನಿಯೋಜನೆ



**ಹೈದರಾಬಾದ್:** ತೆಲಂಗಾಣದ ನಾಗರ್ ಕರ್ನೂಲ್ ಜಿಲ್ಲೆಯ ಶ್ರೀಶೈಲಂ ಎಡದಂಡೆ ಕಾಲುವೆ (ಎಸ್‌ಎಲ್‌ಬಿಸಿ) ಸುರಂಗ ಕುಸಿತದ ಘಟನೆಯಲ್ಲಿ ನಾಪತ್ತೆಯಾಗಿರುವ ಕಾರ್ಮಿಕರ ಪತ್ತೆಗೆ ರೋಬೋಟ್‌ಗಳನ್ನು ನಿಯೋಜಿಸಲಾಗುವುದು ಎಂದು ನೀರಾವರಿ ಸಚಿವ ಎನ್.ಉತ್ತಮ್‌ಕುಮಾರ್ ರೆಡ್ಡಿ ಹೇಳಿದ್ದಾರೆ.

ನಾಪತ್ತೆಯಾದವರ ಕುಟುಂಬಗಳೊಂದಿಗೆ ಸರ್ಕಾರ ನಿಲ್ಲುತ್ತದೆ ಎಂದು ಭರವಸೆ ನೀಡಿದ ಅವರು, ಮಾ.11ರಂದು ಮುಖ್ಯಮಂತ್ರಿಗಳು ಪರಿಸ್ಥಿತಿಯನ್ನು ಅವಲೋಕಿಸಿ ಕುಸಿತ ಘಟನೆ ಬಗ್ಗೆ ಹೇಳಿಕೆ ನೀಡಲಿದ್ದಾರೆ ಎಂದು ತಿಳಿಸಿದರು. ಶನಿವಾರ ಅಪಘಾತ ಸ್ಥಳಕ್ಕೆ ಭೇಟಿ ನೀಡಿ ರಕ್ಷಣಾ ಕಾರ್ಯದ ಕುರಿತು ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂವರು ಇರುವ ಬಗ್ಗೆ ಸುಳಿವು ಸಿಕ್ಕಿದೆ. ಅವರಿದ್ದಾರೆ ಎಂದು ಗುರುತಿಸಲಾದ ಸ್ಥಳದಲ್ಲಿ ರಾಥೋಲ್ ಗಣಿಗಾರರು ಕಾರ್ಯಾಚರಣೆ ಕೈಗೊಂಡಿದ್ದು, ನಾಪತ್ತೆಯಾದವರ ಪರಿಸ್ಥಿತಿ ಕುರಿತು ಮಾಹಿತಿ ತಿಳಿದುಬಂದ ನಂತರ ಸರ್ಕಾರ ಪರಿಹಾರ ಘೋಷಣೆ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ ಎಂದು ತಿಳಿಸಿದರು.

### ಅಮೆರಿಕದಲ್ಲಿ ಮತ್ತೊಂದು ಹಿಂದೂ ದೇವಾಲಯ ವಿರೂಪ



**ಅಮೆರಿಕ:** ದಕ್ಷಿಣ ಕ್ಯಾಲಿಫೋರ್ನಿಯಾದ ಚಿನೋ ಹಿಲ್ಸ್‌ನಲ್ಲಿರುವ ಬಿಎಪಿಎಸ್ ಶ್ರೀ ಸ್ವಾಮಿನಾರಾಯಣ ಮಂದಿರದ ಮೇಲೆ ಭಾನುವಾರ ಭಾರತ ವಿರೋಧಿ ಸಂದೇಶಗಳನ್ನು ಬರೆದು ಅಪವಿತ್ರಗೊಳಿಸಲಾಗಿದೆ. ಕಳೆದ ಕೆಲವು ತಿಂಗಳುಗಳಲ್ಲಿ ಅಮೆರಿಕದಲ್ಲಿ ಹಿಂದೂ ದೇವಾಲಯಗಳ ಮೇಲೆ ನಡೆಯುತ್ತಿರುವ ದ್ವೇಷದ ದಾಳಿಗಳ ಸರಣಿಯಲ್ಲಿ ಇದು ಇತ್ತೀಚಿನದು. ಚಿನೋ ಹಿಲ್ಸ್‌ನಲ್ಲಿರುವ ಈ ದೇವಾಲಯ ದಕ್ಷಿಣ ಕ್ಯಾಲಿಫೋರ್ನಿಯಾದ ಅತಿ ದೊಡ್ಡ ಹಿಂದೂ ದೇವಾಲಯಗಳಲ್ಲಿ ಒಂದಾಗಿದೆ. ಬಿಎಪಿಎಸ್ ಸಾರ್ವಜನಿಕ ವ್ಯವಹಾರಗಳ ವಿಭಾಗವು ಈ ಘಟನೆಯನ್ನು ಹಿಂದೂ ಸಮುದಾಯದ ವಿರುದ್ಧ ದ್ವೇಷದ ಮತ್ತೊಂದು ಪ್ರದರ್ಶನ ಎಂದು ಖಂಡಿಸಿದೆ. ಈ ಬಾರಿ ಕ್ಯಾಲಿಫೋರ್ನಿಯಾದ ಚಿನೋ ಹಿಲ್ಸ್‌ನಲ್ಲಿ ಮತ್ತೊಂದು ಮಂದಿರ ಅಪವಿತ್ರಗೊಳಿಸಲ್ಪಟ್ಟಾಗ, ಹಿಂದೂ ಸಮುದಾಯವು ದ್ವೇಷದ ವಿರುದ್ಧ ದೃಢವಾಗಿ ನಿಲ್ಲುತ್ತದೆ. ಚಿನೋ ಹಿಲ್ಸ್ ಮತ್ತು ದಕ್ಷಿಣ ಕ್ಯಾಲಿಫೋರ್ನಿಯಾದ ಸಮುದಾಯದೊಂದಿಗೆ, ನಾವು ಎಂದಿಗೂ ದ್ವೇಷ ಬೇರೂರಲು ಬಿಡುವುದಿಲ್ಲ" ಎಂದು ಬಿಎಪಿಎಸ್ ಸಾರ್ವಜನಿಕ ವ್ಯವಹಾರಗಳು ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿವೆ.

ಮೈಸೂರು ಮಿತ್ರ ಸೋಮವಾರ 10 ಮಾರ್ಚ್ 2025



# ಬರಿದಾಗುತ್ತಿರುವ ಕಾವೇರಿ ಒಡಲು

## ಬಿಸಿಲಿನ ಬೇಗೆಗೆ ಬತ್ತಿದ ಕಾವೇರಿ ನದಿ, ಕಲ್ಲು ಬಂಡೆಗಳು ಕಾಣುವಂತ ಸ್ಥಿತಿ, ಏಪ್ರಿಲ್, ಮೇನಲ್ಲಿ ಕುಡಿಯುವ ನೀರಿಗೂ ಹಾಹಾಕಾರ ಸಾಧ್ಯತೆ





ಮಡಿಕೇರಿ,ಮಾ.9– ಈ ಬಾರಿ ಮಾರ್ಚ್ ಆರಂಭದಲ್ಲೇ ಬಿಸಿಲು ತನ್ನ ಪ್ರತಾಪ ತೋರಲು ಆರಂಭಿಸಿದ್ದು ಉಷ್ಣಾಂಶದ ಏರಿಕೆ ಬಿಸಿಲಿನ ತಾಪದಿಂದ ಕಾವೇರಿ ನದಿಯಲ್ಲಿ ನೀರಿನ ಹರಿವು ಗಣನೀಯ ಪ್ರಮಾಣದಲ್ಲಿ ಇಳಿಮುಖಗೊಳ್ಳುತ್ತಿರುವುದು ಆತಂಕ ಸೃಷ್ಟಿಸಿದೆ.

ಕಾವೇರಿ ನದಿಯಲ್ಲಿ ನೀರಿನ ಹರಿವು ಕುಂಠಿತಗೊಂಡ ಕಾರಣ ನದಿ ಬರಡಾಗಿದ್ದು, ಕಾವೇರಿ ಒಡಲಿನಿಂದ ಕಲ್ಲು ಬಂಡೆಗಳು ಕಾಣಲಾರಂಭಿಸಿವೆ. ಇನ್ನು ಕೊಪ್ಪ ಸೇತುವೆ ಕೆಳ ಭಾಗ ಕಾವೇರಿ ನದಿ ಹರಿವು ಪೂರ್ಣ ಪ್ರಮಾಣದಲ್ಲಿ ಕ್ಷೀಣಿಸಿದ್ದು, ಭವಿಷ್ಯದ ದಿನಗಳಲ್ಲಿ ನೀರಿಗೆ ಬರ ಬರುವ ಎಲ್ಲಾ ಕ್ಷಣಗಳು ಕಂಡು ಬರುತ್ತಿದೆ.

ನದಿಯ ತಟಗಳಲ್ಲಿರುವ ಕೃಷಿ ಭೂಮಿ, ತೋಟಗಳಿಗೆ ಮೋಟಾರ್ ಪಂಪ್ ಬಳಸಿ ನದಿಯಿಂದ ನೀರು ಹಾಯಿಸುವ ಹಿನ್ನೆಲೆಯಲ್ಲಿ ಬೇಸಿಗೆಯ ಆರಂಭದಲ್ಲೇ ನದಿಯಲ್ಲಿ ನೀರಿನ ಹರಿವಿನ ಕೊರತೆ ಎದುರಾಗುವುದು ಸಾಮಾನ್ಯ ಎಂಬ ಆರೋಪ ಹಿಂದಿನಿಂದಲೂ ಕೇಳಿ ಬರುತ್ತಿದೆ. ಏಪ್ರಿಲ್–ಮೇ ತಿಂಗಳಲ್ಲಿ ಕುಡಿಯುವ ನೀರಿಗೆ ಅಭಾವ ಎದುರಾದ ಸಂದರ್ಭ ಜಿಲ್ಲಾಡಳಿತದಿಂದ ಮೋಟಾರ್ ಪಂಪ್‌ಗಳನ್ನು ವಶಪಡಿಸಿಕೊಂಡ ಪ್ರಕರಣ ಕೂಡ ಇಲ್ಲಿ ಸ್ಮರಿಸಿಕೊಳ್ಳಬಹುದು.

ಸಾಮಾನ್ಯವಾಗಿ ನದಿಯಿಂದ ನೀರೆತ್ತಿ ಸರಬರಾಜು ಮಾಡುವ ಪ್ರಕ್ರಿಯೆಗೆ ನದಿಯಲ್ಲಿ ನೀರಿನ ಹರಿವು ಅಗತ್ಯ. ಇಂತಹ ಸಂದರ್ಭ ನದಿಗೆ ಅಡ್ಡಲಾಗಿ ಮರಳಿನ ಮೂಟೆಗಳನ್ನು ಅಳವಡಿಸಿ ನೀರು ಶೇಖರಿಸಿ ಪೂರೈಸುವುದು ಮಾಮೂಲಿಯಾಗಿದೆ. ಇದೀಗ ನದಿಯಲ್ಲಿ ದಿನದಿಂದ ದಿನಕ್ಕೆ ನೀರಿನ ಹರಿವು ಕ್ಷೀಣಿಸುತ್ತಿದ್ದು, ಮುಂದಿನ ದಿನಗಳಲ್ಲಿ ಬಿಸಿಲು ಹೆಚ್ಚಾದಲ್ಲಿ ನೀರಿನ ಅಭಾವ ತಲೆದೋರುವ ಆತಂಕ ಕಾಡುತ್ತಿದೆ.

ಕುಶಾಲನಗರ ಪುರಸಭೆ ವ್ಯಾಪ್ತಿಯಲ್ಲಿ ಸದ್ಯದ ಮಟ್ಟಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿಲ್ಲ ಎಂದು ಪುರಸಭೆ ಮುಖ್ಯಾಧಿಕಾರಿ ಕೃಷ್ಣಪ್ರಸಾದ್ ಸ್ಪಷ್ಟಪಡಿಸಿದ್ದಾರೆ. ಬೇಸಿಗೆಯನ್ನು ಸಮರ್ಥವಾಗಿ ಎದುರಿಸಲು ಸನ್ನದರಾಗಿದ್ದೇವೆ. ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಅಗತ್ಯ ಕ್ರಮಗಳನ್ನು ಈಗಾಗಲೆ ಮುಂಜಾಗ್ರತೆಯಾಗಿ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

# ನಾಲ್ವರು ಕಾಫಿ ಬೀಜದ ಕಳ್ಳರ ಬಂಧನ

## ಬಂಧಿತರಿಂದ 2550 ಕೆಜಿ ಕಾಫಿ, ಕಳ್ಳತನಕ್ಕೆ ಬಳಸಿದ್ದ ವಾಹನಗಳ ವಶ

**ಕಾಫಿ ಟ್ರೇಡರ್ಸ್ ಮಾಲೀಕರಿಗೆ ಎಚ್ಚರಿಕೆ**

**ಜಿಲ್ಲೆಯಲ್ಲಿ ಯಾವುದೇ ಕಾಫಿ ಟ್ರೇಡರ್ಸ್ ಕಾಫಿ ಖರೀದಿ ಸಂದರ್ಭದಲ್ಲಿ ರಶೀಧಿ ಮತ್ತು ಬಿಲ್ಲನ್ನು ನೀಡದೆ ಮತ್ತು ಮಾರಾಟ ಮಾಡುವವರ ಸಂಪೂರ್ಣ ವಿವರಗಳನ್ನು ಇಟ್ಟುಕೊಳ್ಳದೆ ಕಾಫಿಯನ್ನು ಖರೀದಿಸಿದರೆ ಮತ್ತು ಕಳ್ಳತನ ಮಾಡಿರುವ ಕಾಫಿಯನ್ನು ಖರೀಧಿ ಮಾಡಿರುವುದು ಕಂಡು ಬಂದಲ್ಲಿ ಕಾಫಿ ಟ್ರೇಡರ್ಸ್ ಮಾಲೀಕರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಎಚ್ಚರಿಕೆ ನೀಡಿದ್ದಾರೆ.**



ವಿರಾಜಪೇಟೆ, ಮಾ.9– ತೋಟಗಳಲ್ಲಿ ಒಣಗಿಸಲು ಇಟ್ಟಿದ್ದ ಹಸಿ ಕಾಫಿ ಬೀಜವನ್ನು ಕಳವು ಮಾಡುತ್ತಿದ್ದ ನಾಲ್ವರು ಖದೀಮರನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದು, 2550 ಕೆಜಿ ಕಾಫಿ ಮತ್ತು ಕಳ್ಳತನಕ್ಕೆ ಬಳಸಲಾಗಿದ್ದ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದ್ದಾರೆ.

ಪೊನ್ನಂಪೇಟೆ ತಾಲೂಕು ತಿತಿಮಿತಿ ಗ್ರಾಮದ ಶಾಂತಿನಗರ ನಿವಾಸಿ ಕೆ.ಬಿ.ಶಫೀಕ್(26), ಟಿ.ಜೆ.ಫ್ರಾನ್ಸಿಸ್(29), ಪೊನ್ನಪ್ಪ ಸಂತೆ ಗ್ರಾಮದ ಎಂ.ಬಿ.ಯಾಸಿನ್(28) ಮತ್ತು ತಿತಿಮತಿ ಗ್ರಾಮದ ನೊಕ್ಯಾ ನಿವಾಸಿ ಅನೀಸ್ ಎಂ.ಜಿ(24) ಬಂಧಿತ ಕಾಫಿ ಬೀಜದ ಕಳ್ಳರು.

ಆರೋಪಿಗಳಿಂದ 51 ಚೀಲದಲ್ಲಿದ್ದ 2550 ಕೆಜಿ ಕಾಫಿ ಬೀಜ, ಒಂದು ಪಿಕಪ್ ವಾಹನ, ಒಂದು ಮಾರುತಿ 800 ಮತ್ತು ಒಂದು ಮೋಟಾರ್ ಸೈಕಲ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಸಿದ್ದಾಪುರ ಪೊಲೀಸ್ ಠಾಣೆ ವ್ಯಾಪ್ತಿಯ ಬಾಡಗ–ಬಾಣಂಗಲ ಗ್ರಾಮದ ನಿವಾಸಿ ಸಜಿ ಥಾಮಸ್ ಅವರ ತೋಟದಲ್ಲಿ ಒಣಗಿಸಲು ಇಟ್ಟಿದ್ದ ಸುಮಾರು 800 ಕೆಜಿ ಹಸಿ ಕಾಫಿಯನ್ನು ಫೆ26ರಂದು ಕಳ್ಳತನ ಮಾಡಲಾಗಿತ್ತು. ಈ ಕುರಿತು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ 2 ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸ್ ವರಿಷ್ಠಾಧಿಕಾರಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಿದ್ದಾಪುರ ಪೊಲೀಸ್ ಠಾಣಾಧಿಕಾರಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆಹಾಕಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದರು. ಈ ಪ್ರಕರಣದ ಪತ್ತೆಗಾಗಿ ಮಡಿಕೇರಿ ಉಪವಿಭಾಗದ ಡಿವೈಎಸ್ಪಿ ಪಿ.ಎ.ಸೂರಜ್, ಮಡಿಕೇರಿ ವೃತ್ತದ ಸರ್ಕಲ್ ಇನ್ಸ್‌ಪೆಕ್ಟರ್ ಪಿ.ಕೆ.ರಾಜು, ಸಬ್‌ಇನ್ಸ್‌ಪೆಕ್ಟರ್ ರಾಘವೇಂದ್ರ, ಶಿವಣ್ಣ ಎಚ್.ಟಿ ಮತ್ತು ಸಿದ್ದಾಪುರ ಪೊಲೀಸ್ ಠಾಣೆಯ ಸಿಬ್ಬಂದಿಗಳ ವಿಶೇಷ ತಂಡವನ್ನು ರಚಿಸಲಾಯಿತು. ಈ ತಂಡ ಯಶಸ್ವಿ ಕಾರ್ಯಚರಣೆ ನಡೆಸಿ ಮಾರ್ಚ್ 8ರಂದು ಈ ನಾಲ್ವರು ಆರೋಪಿಗಳನು ಬಂಧಿಸಿದರು ಎಂದು ಅವರು ತಿಳಿಸಿದ್ದಾರೆ.

ಆರೋಪಿಗಳು ವಿರಾಜಪೇಟೆ ನಗರ ಮತ್ತು ಗ್ರಾಮಾಂತರ ಠಾಣಾ ವ್ಯಾಪ್ತಿಯಲ್ಲಿ ಹಸಿ ಕಾಫಿ ಬೀಜವನ್ನು ಕಳವು ಮಾಡಿರುವುದು ವಿಚಾರಣೆ ವೇಳೆ ಬಯಲಿಗೆ ಬಂದಿದೆ. ಮತ್ತಷ್ಟು ವಿಚಾರಣೆಗಾಗಿ ಆರೋಪಿಗಳನ್ನು ತಮ್ಮ ಕಸ್ಟಡಿಗೆ ಕೊಡುವಂತೆ ಕೋರಿದ್ದಾರೆ.

ಆರೋಪಿಗಳನ್ನು ಬಂಧಿಸಿ ಕಾಫಿ ಕಳವು ಪ್ರಕರಣವನ್ನು ಭೇದಿಸಿದ ತಂಡವನ್ನು ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅಭಿನಂದಿಸಿ, ಶ್ಲಾಘಿಸಿದ್ದಾರೆ.

# 6 ಮಂದಿ ಪತ್ರಕರ್ತರಿಗೆ ವಾರ್ಷಿಕ ಪ್ರಶಸ್ತಿ ಪ್ರಧಾನ

## ವೃತ್ತಿಗೆ ಗೌರವ ತರುವ ಕೆಲಸ ಪತ್ರಕರ್ತರಿಂದಾಗಬೇಕು



ಮಡಿಕೇರಿ,ಮಾ.9– ಕೊಡಗು ಪತ್ರಕರ್ತರ ಸಂಘದ ವಾರ್ಷಿಕ ಮಹಾಸಭೆ ಮತ್ತು ಅತ್ಯುತ್ತಮ ವರದಿಗಳಿಗೆ ನೀಡಲಾಗುವ 2023–24ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರಧಾನ ಸಮಾರಂಭ, ಇಲ್ಲಿನ ಪತ್ರಿಕಾ ಭವನದಲ್ಲಿ ಭಾನುವಾರ ನಡೆಯಿತು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಸಮಾಜ ಸೇವಕ ಮಂಡಿಬೆಲೆ ರಾಜಣ್ಣ ಮಾತನಾಡಿ, ಪತ್ರಿಕೋದ್ಯಮ ಇಂದು ಕವಲು ದಾರಿಯಲ್ಲಿದ್ದು, ನಷ್ಟದ ಹಾದಿಯಲ್ಲಿದೆ. ಪತ್ರಕರ್ತರು ವೃತ್ತಿಯನ್ನಾಗಿ ತೆಗೆದುಕೊಂಡು ಪತ್ರಿಕೆಯಲ್ಲಿ ಕೆಲಸ ಮಾಡಿದಲ್ಲಿ ಜೀವನ ನಡೆಸುವುದು ಕಷ್ಟ, ಇದನ್ನು ಕೇವಲ ಪ್ರವೃತ್ತಿಯನ್ನಾಗಿ ಮಾತ್ರ ತೆಗೆದುಕೊಳ್ಳಬಹುದಾಗಿದೆ. ಹೆಚ್ಚಿನ ಪತ್ರಕರ್ತರು ಇಂದು ವೃತ್ತಿಗೆ ಅಗೌರವ ತರುವ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಮೊದಲು ವೃತ್ತಿಗೆ ಗೌರವ ತರುವ ಕೆಲಸವನ್ನು ಪತ್ರಕರ್ತರಿಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಉದ್ಯಮಿ ನಾಪಂಡ ಮುತ್ತಪ್ಪ ಮಾತನಾಡಿ, ಯಾವುದೇ ಸಂಘಟನೆಗಳು ವಿಭಜನೆಗೊಳ್ಳುತ್ತಾ ಸಾಗಿದಲ್ಲಿ, ಅದು ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಇದರಿಂದಾಗಿ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಸಾಧ್ಯವಿಲ್ಲ ಎಂದರು.

ಜಾನಪದ ಪರಿಷತ್ತಿನ ಜಿಲ್ಲಾಧ್ಯಕ್ಷ ಬಿ.ಜಿ. ಅನಂತಶಯನ ಮಾತನಾಡಿ, ಬರವಣಿಗೆಯನ್ನು ಸಮಾಜದ ಹಿತಕ್ಕಾಗಿ ಬಳಸಬೇಕು. ಒಗ್ಗಟ್ಟಿನಿಂದ ಯಾವುದೇ ಕೆಲಸ ಮಾಡಿದರೂ, ಅದರಿಂದ ಯಶಸ್ಸು ಸಾಧ್ಯ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೇಶವ ಕಾಮತ್ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕೊಡಗು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ. ಮುರಳೀಧರ್ ವಹಿಸಿದ್ದರು. ವೇದಿಕೆಯಲ್ಲಿ ಪತ್ರಿಕಾಭವನ ಸ್ಥಾಪಕ ಮ್ಯಾನೇಜಿಂಗ್ ಟ್ರಸ್ಟಿ ಟಿ.ಪಿ. ರಮೇಶ್, ಕೊಡಗು ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯದರ್ಶಿ ಉಜ್ವಲ್ ರಂಜಿತ್ ಹಾಜರಿದ್ದರು.

**ಪ್ರಶಸ್ತಿ ಪ್ರದಾನ:** ಸಂಘದಿಂದ ನೀಡಲಾಗುವ ಪ್ರಶಸ್ತಿಗಳಿಗೆ 6 ಮಂದಿ ಪತ್ರಕರ್ತರು ಭಾಜನರಾಗಿದ್ದು, ಅವರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಅತ್ಯುತ್ತಮ ರಾಜಕೀಯ ವರದಿ ಪ್ರಶಸ್ತಿ ಎಚ್.ಟಿ.ಅನಿಲ್, ಅತ್ಯುತ್ತಮ ಗ್ರಾಮೀಣ ವರದಿ ಪ್ರಶಸ್ತಿಗೆ ವಿನೋದ್ ಮೂಡಗದ್ದೆ, ಅತ್ಯುತ್ತಮ ಕೃಷಿ ವರದಿ ಪ್ರಶಸ್ತಿ ಡಿ.ಪಿ.ಲೋಕೇಶ್, ಅತ್ಯುತ್ತಮ ಕ್ರೀಡಾ ವರದಿ ಪ್ರಶಸ್ತಿ ವಿಘ್ನೇಶ್ ಭೂತನಕಾಡು, ಅತ್ಯುತ್ತಮ ಮಾನವೀಯ ವರದಿ ದತ್ತಿ ಪ್ರಶಸ್ತಿಗೆ ಉಷಾ ಪ್ರೀತಮ್ ಅವರುಗಳಿಗೆ ಲಭಿಸಿತು. ದೃಶ್ಯ ಮಾಧ್ಯಮ ವಿಭಾಗದಲ್ಲಿ ಮಾನವೀಯ ವರದಿ ಪ್ರಶಸ್ತಿಗೆ ಟಿ.ಜೆ.ಪ್ರವೀಣ್, ಎಚ್.ಟಿ. ಅನಿಲ್ ಅವರುಗಳು ಭಾಜನರಾದರು.

# ಗಾಂಜಾ ಮಾರುತ್ತಿದ್ದ ಮೈಸೂರಿನ ವ್ಯಕ್ತಿ ಬಂಧನ

## ಬಂಧಿತನಿಂದ 30 ಕೆಜಿಗೂ ಅಧಿಕ ಗಾಂಜಾ ವಶ



ವಿರಾಜಪೇಟೆ, ಮಾ.9– ನಿಷೇಧಿತ ಮಾದಕ ವಸ್ತು ಗಾಂಜಾವನ್ನು ಮಾರಾಟ ಮಾಡುತ್ತಿದ್ದ ಮೈಸೂರಿನ ವ್ಯಕ್ತಿಯೊಬ್ಬನನ್ನು ವಿರಾಜಪೇಟೆ ಪೊಲೀಸರು ಬಂಧಿಸಿ ಆತನಿಂದ 30 ಕೆಜಿಗೂ ಅಧಿಕ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಸತ್ಯನಗರದ ನಿವಾಸಿ ಇಲಿಯಾಸ್(47) ಬಂಧಿತ ಆರೋಪಿ. ಕೊಡಗು ಜಿಲ್ಲೆಯಲ್ಲಿ ವ್ಯಾಪಕವಾಗಿ ಮಾದಕ ವಸ್ತುಗಳ ಮಾರಾಟ ಮತ್ತು ಸರಬರಾಜು ಮಾಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ಬಂದ ದೂರಿನ ಮೇರೆಗೆ ವಿರಾಜಪೇಟೆ ಡಿವೈಎಸ್ಪಿ ಮಹೇಶ್ ಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಅನೂಪ್ ಮಾದಪ್ಪ, ಸಬ್ ಇನ್ಸ್‌ಪೆಕ್ಟರ್ ಶ್ರೀಮತಿ ವಾಣಿಶ್ರೀ ಮತ್ತು ವಿರಾಜಪೇಟೆ ಠಾಣಾ ಸಿಬ್ಬಂದಿ ನೇತೃತ್ವದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಂಡವೊಂದನ್ನು ರಚಿಸಿ ಮಾದಕ ವಸ್ತುಗಳ ಮಾರಾಟ ಮತ್ತು ಸರಬರಾಜನ್ನು ತಡೆಯುವಂತೆ ಸೂಚನೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತರಾದ ತಂಡ ಶನಿವಾರ ವಿರಾಜಪೇಟೆ ನಿಸರ್ಗ ಬಡಾವಣೆಯ ಕಿರುಮಕ್ಕಿ ಜಂಕ್ಷನ್ ಸಮೀಪ ಗಾಂಜಾ ಮಾರಾಟ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಆರೋಪಿ ಇಲಿಯಾಸ್‌ನನ್ನು ಬಂಧಿಸಿ ಆತನ ಬಳಿ ಇದ್ದ 30 ಕೆಜಿ 500 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಪ್ರಕರಣವನ್ನು ಭೇದಿಸಿ ಆರೋಪಿಯನ್ನು ಬಂಧಿಸಿದ ತಂಡದ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಶ್ಲಾಘಿಸಿದ್ದಾರೆ.

**ಯುವಕ ಯುವತಿಯರು ಮಾದಕ ವ್ಯಸನಿಗಳಾಗಿ ಜೀವನವನ್ನು ಹಾಳು ಮಾಡಿಕೊಳ್ಳುವುದನ್ನು ತಡೆಗಟ್ಟಬೇಕಾಗಿದೆ. ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆ ಅಥವಾ ತುರ್ತು ಸಹಾಯವಾಣಿ 112 ಮೂಲಕ ಮಾಹಿತಿ ನೀಡಬೇಕು. ಮಾಹಿತಿ ನೀಡುವವರ ಹೆಸರು ಮತ್ತು ವಿವರಗಳನ್ನು ರಹಸ್ಯವಾಗಿ ಇಡಲಾಗುವುದು.**

**–ಎಸ್ಪಿ ಕೆ.ರಾಮರಾಜನ್**

# ಮುಂದಿನ ಸಚಿವ ಸಂಪುಟದಲ್ಲಿ ಜಿಲ್ಲೆಗೆ ಹೆಚ್ಚು ಅನುದಾನ



ಯಳಂದೂರು ಸಮೀಪದ ಚಾಮರಾಜನಗರ ತಾಲೂಕಿನ ಕೆಂಪನಪುರ ಹುಲ್ಲೇಪುರ ಸಂಪರ್ಕ ರಸ್ತೆ ಕಾಮಗಾರಿಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಶನಿವಾರ ಭೂಮಿಪೂಜೆ ನೆರವೇರಿಸಿದರು.

ಯಳಂದೂರು, ಮಾ.9– ಸಿದ್ದರಾಮಯ್ಯರವರು ಮಂಡಿಸಿರುವ ಬಜೆಟ್‌ನಲ್ಲಿ ಎಲ್ಲಾ ವರ್ಗದ ಜನರಿಗೂ ನ್ಯಾಯ ದೊರಕಿದೆ. ಜಿಲ್ಲೆಗೆ ಹೆಚ್ಚಿನ ಅನುದಾನ ಲಭ್ಯವಿಲ್ಲ ಎಂಬುದಕ್ಕೆ ಮಲೆ ಮಹದೇಶ್ವರ ಬೆಟ್ಟದಲ್ಲಿ ಮುಂದೆ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಜಿಲ್ಲೆಗೆ ಮುಖ್ಯಮಂತ್ರಿಗಳು ಹೆಚ್ಚಿನ ಅನುದಾನ ಘೋಷಣೆ ಮಾಡುವ ಸಾಧ್ಯತೆಗಳು ಹೆಚ್ಚಾಗಿವೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ಚಾಮರಾಜನಗರ ತಾಲೂಕಿನ ರಾಷ್ಟ್ರೀಯ ಹೆದ್ದಾರಿ 209 ಹುಲ್ಲೆಪುರ ಮಾರ್ಗ ಕೆಂಪನಪುರ ಸೇರಿರುವ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶನಿವಾರ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಜಿಲ್ಲೆಯ ಕೆರೆಗಳನ್ನು ಅಭಿವೃದ್ಧಿಪಡಿಸಿ, ನಾಲೆಗಳು ಹಾಗೂ ಕಾಲುವೆಗಳನ್ನು ದುರಸ್ತಿ ಪಡಿಸಿ, ಜಿಲ್ಲೆಯಲ್ಲಿ ಕಾಲುವೆ, ಕೆರೆಗಳ ಅಭಿವೃದ್ಧಿ ಮಾಡಿ ಶಾಶ್ವತ ನೀರಾವರಿ ಪ್ರದೇಶವನ್ನಾಗಿಸಲು ಈಗಾಗಲೇ 505 ಕೋಟಿ ರೂ.ಗಳ ಕ್ರಿಯಾ ಯೋಜನೆ ತಯಾರು ಮಾಡಲಾಗಿದೆ. ಇದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಲ್ಲಿಸಲಾಗಿತ್ತು. ಈ ಬಜೆಟ್‌ನಲ್ಲಿ ಅದನ್ನು ಸೇರ್ಪಡೆ ಮಾಡಿ, ಮುಖ್ಯಮಂತ್ರಿಗಳು ಘೋಷಣೆ ಮಾಡುತ್ತಾರೆ ಎಂಬ ವಿಶ್ವಾಸವನ್ನು ಜಿಲ್ಲೆಯ ಶಾಸಕರು ನಂಬಿದ್ದೆವು. ಆದರೆ ಇದು ಸಾಧ್ಯವಾಗಿಲ್ಲ. ಹಾಗಾಗಿ ಮಲೆ ಮಹದೇಶ್ವರ ಬೆಟ್ಟದ ಸಚಿವ ಸಂಪುಟ ಸಭೆಯಲ್ಲಿ ಇದನ್ನು ನೀಡುವ ಪೂರ್ಣ ವಿಶ್ವಾಸವಿದೆ. ಇದಕ್ಕೆ ಕಂತುಕಂತಾಗಿ ವರ್ಷಕ್ಕೆ 50 ರಿಂದ 100 ಕೋಟಿ ರೂ. ನೀಡಿದರೂ ಇದು ಹಂತಹಂತವಾಗಿ ಪೂರ್ಣಗೊಳ್ಳಲಿದೆ ಎಂದರು.

ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಬಗ್ಗೆ ಮೊದಲು ಸುತ್ತೂರು ಶ್ರೀಗಳು ಪ್ರಸ್ತಾಪಿಸಿದ್ದರು. ಅದರಂತೆ ಹಿಂದಿನ ಸರ್ಕಾರಗಳು ಇದಕ್ಕೆ ಚಾಲನೆ ನೀಡಿದ್ದವು. ಆದರೆ ಇದು ಇನ್ನೂ ಪೂರ್ಣಗೊಂಡಿಲ್ಲ. ಈ ಹಿಂದೆಯೇ ಕಬಿನಿ 2 ನೇ ಹಂತದ ಯೋಜನೆಗೆ ರಾಮಕೃಷ್ಣ ಹೆಗಡೆ ಸರ್ಕಾರದಲ್ಲಿ ಕ್ರಿಯಾಯೋಜನೆ ತಯಾರಿಸಿ ಇದು ಅನುಮೋದನೆಗೊಂಡು ಇದಕ್ಕೆ ಚಾಲನೆ ನೀಡುವ ಸಂದರ್ಭದಲ್ಲಿ ರಾಜ್ಯದ ಪ್ರಭಾವಿ ಹಿರಿಯ ರಾಜಕಾರಣಿಯೊಬ್ಬರು ಇದಕ್ಕೆ ಪರಿಸರ ನಾಶವಾಗುತ್ತದೆ ಎಂದು ಅಂದಿನ ಪರಿಸರ ಖಾತೆಯ ಕೇಂದ್ರ ಸಚಿವೆ ಮೇನಕಾ ಗಾಂಧಿಯವರಿಗೆ ಪತ್ರ ಬರೆದು ಇದನ್ನು ನಿಲ್ಲಿಸಿದ್ದು ಈ ಭಾಗಕ್ಕೆ ಈ ಯೋಜನೆ ಕೈಬಿಡುವಂತೆ ಮಾಡಿದ್ದರು ಎಂದು ಈ ವಿಷಯ ಉಲ್ಲೇಖಿಸಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಹೊಂಗನೂರು ಚಂದ್ರು, ತಾಲೂಕು ಅಧ್ಯಕ್ಷ ಪ್ರಭುಪ್ರಸಾದ್, ಕೆಂಪನಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಆರ್. ಮಾದೇಶ್, ಜಿ.ಪಂ. ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ಗ್ರಾಪಂ.ಮಾಜಿ ಅಧ್ಯಕ್ಷ ಗುರುಸಿದ್ದಪ್ಪ, ಕೆ.ಎಂ. ನಾಗರಾಜು ಮಾತನಾಡಿದರು. ಗ್ರಾ.ಪಂ. ಸದಸ್ಯರಾದ ನಾಗೇಶ್, ರಾಮಸ್ವಾಮಿ, ಸೋಮಣ್ಣ, ಗ್ರಾಪಂ. ಮಾಜಿ ಅಧ್ಯಕ್ಷ ನಾಗಲಿಂಗನಾಯಕ, ಪಿಎಸಿಸಿ ಅಧ್ಯಕ್ಷ ಶಿವಶಂಕರ್, ಎಪಿಎಂಸಿ ನಿರ್ದೇಶಕ ಹೊಮ್ಮ ರವಿಶಂಕರ್, ಕೆ.ಎಂ. ಮಹದೇವಸ್ವಾಮಿ, ಕಂದಹಳ್ಳಿ ನಂಜುಂಡಸ್ವಾಮಿ, ಎಇಇ ರಮೇಶ್, ಕೆಆರ್‌ಐಡಿಎಲ್ ಇಇ ಚಿಕ್ಕಲಿಂಗಯ್ಯ, ಮುಖಂಡರಾದ ಚನ್ನಬಸಯ್ಯ, ಪುಟ್ಟಮಾದಯ್ಯ, ಪುಟ್ಟರಂಗಯ್ಯ, ಸಿ.ಗೋಪಾಲ್. ಕೆ. ಮರಿಬಸವಯ್ಯ, ಎಂ. ರಂಗಸ್ವಾಮಿ, ಎಂ.ರಾಜು ಮೊದಲಾದವರಿದ್ದರು.

# 'ನಮ್ಮ ಪೊಲೀಸ್, ನಮ್ಮ ಹೆಮ್ಮೆ' ಮ್ಯಾರಥಾನ್ ಓಟ




ಪೊಲೀಸ್ ಮ್ಯಾರಥಾನ್‌ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಚಾಲನೆ ನೀಡಿದರು.

ಚಾಮರಾಜನಗರ, ಮಾ.9– ಸದೃಢ ಆರೋಗ್ಯದ ಬಗ್ಗೆ ಜಾಗೃತಿ, ಮಾದಕ ವಸ್ತು ಮುಕ್ತ ಕರ್ನಾಟಕ ಹಾಗೂ 'ನಮ್ಮ ಪೊಲೀಸ್ ನಮ್ಮ ಹೆಮ್ಮೆ' ಘೋಷಣೆಯೊಂದಿಗೆ ಜಿಲ್ಲಾ ಪೊಲೀಸ್ ಇಲಾಖೆಯಿಂದ ಮ್ಯಾರಥಾನ್ ಓಟ ನಡೆಸಲಾಯಿತು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರ ಕಚೇರಿ ಪಕ್ಕದಲ್ಲಿರುವ ಕವಾಯಿತ ಮೈದಾನದಲ್ಲಿ ಪೊಲೀಸ್ ಮ್ಯಾರಥಾನ್‌ಗೆ ಚಾಲನೆ ನೀಡಿ ಮಾತನಾಡಿದರು.

ಪೊಲೀಸ್ ಇಲಾಖೆಯಿಂದ ರಾಜ್ಯಾದ್ಯಂತ 'ಕರ್ನಾಟಕ ಪೊಲೀಸ್ ರನ್' ಶೀರ್ಷಿಕೆಯಡಿ ಮ್ಯಾರಥಾನ್ ಓಟ ನಡೆಯುತ್ತಿದೆ. ಕೆಲವೆಡೆ ಪೊಲೀಸರು ಮಾತ್ರ ಪಾಲ್ಗೊಂಡಿದ್ದಾರೆ. ನಾವು ಸಾರ್ವಜನಿಕರು, ಸಂಘಟನೆಗಳ ಮುಖಂಡರನ್ನು ಒಳಗೊಂಡು ನಡೆಸುತ್ತಿದ್ದೇವೆ ಎಂದರು.

ಪೊಲೀಸರು ಸಾರ್ವಜನಿಕರ ಜೊತೆಯಾಗಿ ಇಂತಹ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಜನಸ್ನೇಹಿ ಪೊಲೀಸ್ ಆಗಲು ಸಾಧ್ಯವಿದೆ. ನಮ್ಮ ಪೊಲೀಸ್ ನಮ್ಮ ಹೆಮ್ಮೆ ಎಂಬ ಘೋಷಣೆಯು ಕೂಡ ಇದಕ್ಕೆ ಪೂರಕವಾಗಿದೆ. ಸಾರ್ವಜನಿಕರು, ಸಂಘ, ಸಂಸ್ಥೆಗಳ ಮುಖಂಡರು ನಮ್ಮೊಡನೆ ಭಾಗವಹಿಸಿ ಸಹಕಾರ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ದೈಹಿಕ ಕ್ಷಮತೆ ಮತ್ತು ದೃಢತೆಗೆ ಯಾವುದಾದರೂ ವ್ಯಾಯಾಮ ಮುಖ್ಯ. ನಿರಂತರವಾಗಿ ವ್ಯಾಯಾಮವೊಂದನ್ನು ಅಭ್ಯಾಸ ಮಾಡುವುದನ್ನು ರೂಢಿಸಿಕೊಂಡರೆ ಕ್ರಿಯಾಶೀಲರಾಗಿ ಇರಬಹುದು. ಪೊಲೀಸ್ ಇಲಾಖೆಯಿಂದ ಈ ಬಗ್ಗೆ ಜಾಗೃತಿ ಮೂಡಿಸುತ್ತಿರುವುದು ಉತ್ತಮ ಕಾರ್ಯವಾಗಿದೆ ಎಂದು ತಿಳಿಸಿದರು.

**5 ಕಿ.ಮೀ. ಓಟದಲ್ಲಿ ನೂರಾರು ಮಂದಿ ಭಾಗಿ:** ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ 'ಕರ್ನಾಟಕ ಪೊಲೀಸ್ ರನ್' ಶೀರ್ಷಿಕೆಯಡಿ ಪೊಲೀಸರು ಸರ್ಕಾರಿ ಇಲಾಖೆಗಳ ಅಧಿಕಾರಿಗಳು, ಸಂಘ ಸಂಸ್ಥೆಗಳ ಮುಖಂಡರು, ಸಾರ್ವಜನಿಕರ ಜೊತೆಗೂಡಿ ನಗರದಲ್ಲಿ ಮ್ಯಾರಥಾನ್ ಓಟ ಎಲ್ಲರ ಗಮನ ಸೆಳೆಯಿತು. ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಪಕ್ಕದ ಪೊಲೀಸ್ ಕವಾಯತು ಮೈದಾನದಿಂದ ಬೆಳಗ್ಗೆ ಪ್ರಾರಂಭವಾದ ಓಟವು ರಾಮಸಮುದ್ರ ಬಡಾವಣೆಯ ಬಳಿಯಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ತಲುಪಿ ಅಲ್ಲಿಂದ ಯೂಟರ್ನ್ ಪಡೆಯಿತು.

ನಂತರ ಭುವನೇಶ್ವರಿ ವೃತ್ತ ತಲುಪಿ ವಾಪಸ್ ಪೊಲೀಸ್ ಕವಾಯತು ಮೈದಾನದಲ್ಲಿ ಅಂತ್ಯವಾಯಿತು. ಸುಮಾರು 5 ಕಿ.ಮೀ. ಮ್ಯಾರಥಾನ್ ಓಟದಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು. ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಹಲವು ಉನ್ನತ ಮಟ್ಟದ ಅಧಿಕಾರಿಗಳು ಮ್ಯಾರಥಾನ್‌ನಲ್ಲಿ ಪಾಲ್ಗೊಂಡು ಅಂಬೇಡ್ಕರ್ ಪ್ರತಿಮೆ ತನಕ ಓಡಿದರು. ಈ ಮೂಲಕ ಎಲ್ಲರನ್ನು ಪ್ರೇರೇಪಿಸಿದರು.

**15 ವಿದ್ಯಾರ್ಥಿಗಳಿಗೆ ಪದಕ:** ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯದ 15 ವಿದ್ಯಾರ್ಥಿಗಳು ಮ್ಯಾರಥಾನ್ ಓಟದಲ್ಲಿ ಮೊದಲು ಕ್ರಮಿಸಿ 50 ಪದಕಗಳ ಪೈಕಿ ಹೆಚ್ಚು ಪದಕಗಳನ್ನು ಪಡೆದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಸಿಇಒ ಮೋನಾರೋತ್, ಉಪ ಕಾರ್ಯದರ್ಶಿ ಲಕ್ಷ್ಮೀ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್‌ಪಿ ಗಳಾದ ಲಕ್ಷ್ಮಯ್ಯ, ಧರ್ಮೆಂದ್ರ, ಸೋಮಣ್ಣ ಇತರರು ಇದ್ದರು.

# ಕೆಸ್ತೂರಿನಲ್ಲಿ ಕಪ್ಪು ಪಟ್ಟಿ ಧರಿಸಿ ಆಕ್ರೋಶ



ಕೆಸ್ತೂರಿನಲ್ಲಿ ಕಪ್ಪು ಪಟ್ಟಿ ಧರಿಸಿ ಆಕ್ರೋಶ ವ್ಯಕ್ತಪಡಿಸಿದರು.

ಯಳಂದೂರು, ಮಾ.9– ತಾಲೂಕಿನ ಕೆಸ್ತೂರು ಗ್ರಾಮದ ಡಾ. ಬಿ.ಆರ್.ಅಂಬೇಡ್ಕರ್ ಯುವಕ ಸಂಘದ ವತಿಯಿಂದ ಮಹಿಳಾ ದಿನಾಚರಣೆ ದಿವಸ ಧರ್ಮಸ್ಥಳ ಸೌಜನ್ಯ ಪ್ರಕರಣದಲ್ಲಿ ಬಾಗಿಯಾಗಿರುವವರಿಗೆ ಶಿಕ್ಷೆಯಾಗಬೇಕೆಂದು ಹಣೆಗೆ ಕಪ್ಪು ಪಟ್ಟಿ ಧರಿಸಿ ಆಕ್ರೋಶ ವ್ಯಕ್ತಪಡಿಸಿದರು.

ಡಾ. ಬಿ.ಆರ್.ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ಸಚಿನ್ ಮಾತನಾಡಿ, ಕಳೆದ ಹದಿನಾಲ್ಕು ವರ್ಷಗಳ ಹಿಂದೆ ಧರ್ಮಸ್ಥಳದಲ್ಲಿ ಸೌಜನ್ಯ ಎಂಬ ಯುವತಿಯನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆಯುತ್ತಿದೆ. ಈ ಕೃತ್ಯವೆಸಗಿದವರಿಗೆ ಸಂವಿಧಾನಿಕವಾಗಿ ತಕ್ಕ ಶಿಕ್ಷೆಯಾಗಬೇಕು ಇದರ ಹಿಂದೆ ಪ್ರಮುಖರ ಕೈವಾಡವಿರಬಹುದು ಅದಕ್ಕೆ ಈ ಪ್ರಕರಣವನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಎಷ್ಟೋ ಸಾಕ್ಷಿಗಳನ್ನು ನಾಶಮಾಡಿದ್ದಾರೆ.

ಒಬ್ಬ ಬಡ ಕುಟುಂಬದ ಯುವತಿಗೆ ನ್ಯಾಯ ಸಿಗಬೇಕಾದರೆ ಎಷ್ಟು ಕಷ್ಟ ಇದೆಯೇ ಎಂಬುವುದನ್ನು ಈ ಪ್ರಕರಣದಿಂದ ನಾವು ತಿಳಿದುಕೊಂಡಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಸಂವಿಧಾನವೂ ಪ್ರತಿಯೊಬ್ಬ ಪ್ರಜೆಗೂ ನ್ಯಾಯ ಸಿಗಬೇಕೆಂದು ಹೇಳುತ್ತದೆ ಆದರಿಂದ ಸೌಜನ್ಯಳಿಗೆ ನ್ಯಾಯ ದೊರಕಿಸಬೇಕೆಂದು ನಾವು ಕಪ್ಪು ಬಟ್ಟೆಯನ್ನು ಕಟ್ಟಿ ಆಕ್ರೋಶವನ್ನು ವ್ಯಕ್ತಪಡಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಮಹೇಶ್ ಜಿ, ಸಹ ಕಾರ್ಯದರ್ಶಿ ಮಹೇಂದ್ರ, ಖಜಾಂಚಿ ಶಿವಶಂಕರ್, ಪದಾಧಿಕಾರಿಗಳಾದ ಕಿರಣ್ ಜೆ, ರಾಘವ, ಸಂಘದ ಪದಾಧಿಕಾರಿ ಗಳಾದ ಚಂದನ್, ಪುರುಷೋತ್ತಮ, ಮನೋಜ್, ಮಹೇಂದ್ರ, ಹಾಗೂ ಪತ್ರಕರ್ತ ಕೆಸ್ತೂರು ಪ್ರಸನ್ನಕುಮಾರ್.ಮತ್ತು ಇತರರು ಹಾಜರಿದ್ದರು.

# ಕೋಡಿಮೋಳೆ ಶಾಲೆಯಲ್ಲಿ ವಿಶ್ವ ಮಹಿಳಾ ದಿನಾಚರಣೆ



ಕೋಡಿಮೋಳೆ ಶಾಲೆಯಲ್ಲಿ ವಿಶ್ವ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಚಾಮರಾಜನಗರ, ಮಾ.9– ತಾಲೋಕಿನ ಕೋಡಿಮೋಳೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಮಹಿಳಾ ದಿನವನ್ನು ಆಚರಿಸಲಾಯಿತು.

ಮಹಿಳಾ ಶಿಕ್ಷಕಿಯರಿಗೆ, ಅಡುಗೆ ಸಿಬ್ಬಂದಿಗಳಿಗೆ ಶಿಕ್ಷಕರಾದ ಮಲ್ಲು ಹಾಗೂ ಮನೋಜ್ ಮಸು ಅವರು ವಿವಿಧ ಬಗೆಗೆ ಆಟೋಟಗಳನ್ನು ಏರ್ಪಡಿ ಸಿದ್ದು ಸಂತಸದ ವಾತವರಣ ಸೃಷ್ಟಿಸಿದ್ದರು.

ಗಾಳಿ ಊದಿ ಬಲೂನ್ ಅಲ್ಲಿ ಲೋಟಗಳನ್ನು ತರುವುದು, ಕೈ ಬಳಸದೆ ಬಾಳೆಹಣ್ಣು ಸುಲಿದು ತಿನ್ನುವ ಸ್ಪರ್ಧೆ, ಹಣೆಯಲ್ಲಿ ಬಿಸ್ಕೆಟ್ ಇಟ್ಟು ಕೈ ಬಳಸದೆ ತಿನ್ನುವ ಸ್ಪರ್ಧೆಯಲ್ಲಿ ಭಾಗವಹಿಸಿದ ಮಹಿಳೆಯರು ಕ್ರೀಡಾ ಸ್ಪೂರ್ತಿ ಮೆರೆದರು. ನಂತರ ಕೇಕ್ ಕತ್ತರಿಸಿ ವಿದ್ಯಾರ್ಥಿಗಳೊಂದಿಗೆ ಶಿಕ್ಷಕರು ಸೇರಿ ಸಂತಸಪಟ್ಟರು. ಈ ಸಂದರ್ಭದಲ್ಲಿ ಶಿಕ್ಷಕಿಯರಾದ ಶಾರದಂಬ, ತೇಜವತಿ, ಪುಷ್ಪಲತಾ, ಶೋಭಾ, ಪುಷ್ಪಲತಾ ಹಾಗೂ ಅಡುಗೆ ಸಿಬ್ಬಂದಿಗಳಾದ ಮಲ್ಲಮ್ಮ, ನಂಜಮ್ಮಣ್ಣಮ್ಮ, ನಂದಿನಿ, ಕೋಡಿಮೋಳೆ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## 3ನೇ ಮಗುವಿಗೆ ಜನ್ಮ ನೀಡುವ ಮಹಿಳೆಯರಿಗೆ ಬಂಪರ್

# ಹೆಣ್ಣು ಜನಿಸಿದರೆ 50 ಸಾವಿರ ರೂ., ಗಂಡು ಜನಿಸಿದರೆ ಹಸು ಗಿಫ್ಟ್!

### ಆಂಧ್ರ ಸಂಸದ ಅಪ್ಪಲನಾಯ್ಡು ಘೋಷಣೆ

ಅಮರಾವತಿ, ಮಾ.9– ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ವೇಳೆ ತೆಲುಗು ದೇಶಂ ಪಕ್ಷದ ಸಂಸದ ಕಾಳಿಸೆಟ್ಟಿ ಅಪ್ಪಲನಾಯ್ಡು ಅವರು, 3ನೇ ಮಗುವಿಗೆ ಜನ್ಮ ನೀಡುವ ಮಹಿಳೆಯರಿಗೆ ಬಂಪರ್ ಕೊಡುಗೆ ಘೋಷಣೆ ಮಾಡಿದ್ದಾರೆ. ಇದು ಆಂಧ್ರಪ್ರದೇಶದಲ್ಲಿ ಭಾರೀ ಸಂಚಲನ ಸೃಷ್ಟಿಸಿದೆ.



ಪ್ರಕಾಶಂ ಜಿಲ್ಲೆಯ ಮಾರ್ಕಾಪುರದಲ್ಲಿ ಆಯೋಜಿಸಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡುವ ವೇಳೆ, ಮಹಿಳೆಯೊಬ್ಬರು 3ನೇ ಮಗುವಿಗೆ ಜನ್ಮ ನೀಡಿದರೆ ವಿಶೇಷ ಉಡುಗೊರೆ ನೀಡಲಾಗುವುದು. ಹೆಣ್ಣು ಮಗುವಿಗೆ ಜನ್ಮ ನೀಡಿದರೆ ನನ್ನ ಸ್ವಂತ ವೇತನದಲ್ಲಿ 50 ಸಾವಿರ ರೂ., ಗಂಡು ಮಗುವಿಗೆ ಜನ್ಮ ನೀಡಿದರೆ 1 ಹಸುವನ್ನು ಉಡುಗೊರೆಯಾಗಿ ಕೊಡಲಾಗುವುದು ಎಂದು ಘೋಷಣೆ ಮಾಡಿದ್ದಾರೆ. ಸಂಸದ ಮಾತನಾಡಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಸದ್ದು ಮಾಡುತ್ತಿದೆ.

ಜನಸಂಖ್ಯೆ ಬೆಳವಣಿಗೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಮತ್ತು ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಕರೆಗಳ ಮೇರೆಗೆ ಈ ವಿಶೇಷ ಉಡುಗೊರೆಗಳನ್ನು ಘೋಷಣೆ ಮಾಡಲಾಗಿದೆ. ಮಹಿಳೆಯರು ಹೆಚ್ಚು ಮಕ್ಕಳನ್ನು ಹೊಂದಬೇಕೆಂದು ಹೇಳುತ್ತಿದ್ದೇವೆ. ಹೀಗಾಗಿ 3ನೇ ಮಗು ಜನಿಸಿದರೆ ಪ್ರೋತ್ಸಾಹ ಧನ ನೀಡಲು ಮುಂದಾಗಿದ್ದೇವೆ ಎಂದು ಸಂಸದ ಅಪ್ಪಲನಾಯ್ಡು ತಿಳಿಸಿದ್ದಾರೆ.

ಕೆಲ ದಿನಗಳ ಹಿಂದೆ ಚಂದ್ರಬಾಬು ನಾಯ್ಡು ಅವರು, ಮಹಿಳೆಯರು ಸಂಖ್ಯೆಯನ್ನು ಲೆಕ್ಕಿಸದೇ ಹೆಚ್ಚೆಚ್ಚು ಮಕ್ಕಳನ್ನು ಮಾಡಿಕೊಳ್ಳಿ. ಅದಕ್ಕಾಗಿ ಉದ್ಯೋಗಸ್ಥ ಮಹಿಳೆಯರಿಗೆ ವೇತನ ಸಹಿತ ಹೆರಿಗೆ ರಜೆ ನೀಡಲಾಗುವುದು ಎಂದು ಘೋಷಣೆ ಮಾಡಿದ್ದರು. ತಮಿಳುನಾಡು ಸಿಎಂ ಎಂ.ಕೆ.ಸ್ಟಾಲಿನ್ ಅವರು ಸಹ 2026ರ ಒಳಗೆ ಮಹಿಳೆಯರು ಹೆಚ್ಚೆಚ್ಚು ಮಕ್ಕಳನ್ನು ಮಾಡಿಕೊಳ್ಳುವಂತೆ ಕರೆ ನೀಡಿದ್ದರು.

## ಮೈಸೂರಲ್ಲಿ ಟಿಬೆಟಿಯನ್ನರಿಂದ ಮೇಣದ ಬತ್ತಿ ಬೆಳಕಿನ ಜಾಗರಣೆ

# ಚೀನಾ ವಿರುದ್ಧ ಹೋರಾಡಿ ಪ್ರಾಣ ತ್ಯಾಗ ಮಾಡಿದ ಟಿಬೆಟಿಯನ್ನರಿಗೆ ಶ್ರದ್ಧಾಂಜಲಿ

ಮೈಸೂರು,ಮಾ.9(ಪಿಎಂ)– ಟಿಬೆಟಿಯನ್ನರ 66ನೇ ರಾಷ್ಟ್ರೀಯ ಬಂಡಾಯ ದಿನದ ಅಂಗವಾಗಿ ಹಾಗೂ ಟಿಬೆಟ್‌ನಲ್ಲಿ ಚೀನಾ ಆಡಳಿತ ನಡೆಸುತ್ತಿರುವುದರ ವಿರುದ್ಧ ಹೋರಾಡಿ ಪ್ರಾಣ ತ್ಯಾಗ ಮಾಡಿದ ಟಿಬೆಟಿಯನ್ನರಿಗೆ ಶ್ರದ್ಧಾಂಜಲಿ ಸಲ್ಲಿಸಲು ಭಾನುವಾರ ಸಂಜೆ ಟಿಬೆಟಿಯನ್ನರು ಮೇಣದ ಬತ್ತಿ ಬೆಳಕಿನ ಜಾಗರಣೆ ನಡೆಸಿದರು.




ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಭಾನುವಾರ ಸಂಜೆ ಟಿಬೆಟಿಯನ್ನರು ಮೇಣದ ಬತ್ತಿ ಬೆಳಕಿನ ಜಾಗರಣೆ ನಡೆಸಿದರು.

ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಹುಣಸೂರು, ಬೈಲಕುಪ್ಪೆ, ಕೊಳ್ಳೇಗಾಲದ ಮಿಡಲ್ ವೇ ಟಿಬೆಟಿಯನ್ ಯೂತ್ ಕಾಂಗ್ರೆಸ್, ಪ್ರಾದೇಶಿಕ ಟಿಬೆಟಿಯನ್ ವುಮೆನ್ಸ್ ಅಸೋಸಿಯೇಷನ್ ಮತ್ತು ಮೈಸೂರು ಟಿಬೆಟಿಯನ್ ಸ್ಟುಡೆಂಟ್ ಅಸೋಸಿಯೇಷನ್ ನೇತೃತ್ವದಲ್ಲಿ ಜಮಾಯಿಸಿದ ಟಿಬೆಟಿಯನ್ನರು, ಮೇಣದ ಬತ್ತಿ ಬೆಳಗಿಸಿ ಚೀನಾ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಟಿಬೆಟ್ ಎಂದಿಗೂ ಚೀನಾದ ಭಾಗವಾಗಿರಲಿಲ್ಲ. ದಲೈಲಾಮ ಅವರ ಮಧ್ಯಮ ಮಾರ್ಗ ಪರಿಹಾರವನ್ನು ಚೀನಾ ಸರ್ಕಾರ ಒಪ್ಪಿಕೊಳ್ಳಬೇಕು' ಎಂಬಿತ್ಯಾದಿ ಘೋಷವಾಕ್ಯ ಒಳಗೊಂಡ ಫಲಕಗಳನ್ನಿಡಿದು ಚೀನಾ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

1959ರ ಮಾರ್ಚ್ 10ರಂದು ಲಕ್ಷಾಂತರ ಟಿಬೆಟಿಯನ್ನರು ಚೀನಿಯರ ದಬ್ಬಾಳಿಕೆಯ ವಿರುದ್ಧ ತಮ್ಮ ರಾಜಧಾನಿ ಲಾಸಾದಲ್ಲಿ ಪ್ರತಿಭಟನೆ ನಡೆಸಿದರು. ಆದರೆ ಚೀನಾ ಸೈನ್ಯವು ಪ್ರತಿಭಟನೆ ಹತ್ತಿಕ್ಕಿತು. ಅಲ್ಲದೆ, ಸಾವಿರಾರು ಟಿಬೆಟಿಯನ್ನರನ್ನು ಕ್ರೂರವಾಗಿ ಕೊಂದಿತು. 1959ರಲ್ಲಿ ಚೀನಿಯರ ಕುತಂತ್ರಕ್ಕೆ ಬಲಿಯಾದ ಸಾವಿರಾರು ಟಿಬೆಟಿಯನ್ನರ ತ್ಯಾಗ ಬಲಿದಾನವನ್ನು ಸ್ಮರಿಸಿ ಗೌರವ ಸೂಚಿಸಲು ಮಾರ್ಚ್ 10 ಅನ್ನು ಟಿಬೆಟಿಯನ್ನರ ಬಂಡಾಯ ದಿನವಾಗಿ ಆಚರಿಸಲಾಗುತ್ತಿದೆ. ಟಿಬೆಟ್‌ನಲ್ಲಿ ಟಿಬೆಟಿಯನ್ನರು ಚೀನಾ ಆಳ್ವಿಕೆಯಲ್ಲಿ ಊಹಿಸಲಾಗದ ಹಿಂಸೆಯನ್ನು ಅನುಭವಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚೀನಿಯರ ದಬ್ಬಾಳಿಕೆ, ಚಿತ್ರಹಿಂಸೆ, ಮಾನಸಿಕ ಕಿರುಕುಳದಿಂದ 1.2 ಮಿಲಿಯನ್ ಟಿಬೆಟಿಯನ್ನರು ಪ್ರಾಣತ್ಯಾಗ ಮಾಡಿದ್ದಾರೆ. ಚೀನಿಯರು ಟಿಬೆಟಿಯನ್ ಭಾಷೆ, ಸಂಸ್ಕೃತಿ, ಧರ್ಮ ಮತ್ತು ಅಸ್ಮಿತೆಯನ್ನು ವ್ಯವಸ್ಥಿತವಾಗಿ ನಾಶಪಡಿಸುತ್ತಿದ್ದಾರೆ ಎಂದು ಆರೋಪಿಸಿದರು.

**ಮೆರವಣಿಗೆ:** ಟಿಬೆಟಿಯನ್ನರ 66ನೇ ರಾಷ್ಟ್ರೀಯ ಬಂಡಾಯ ದಿನದ ಅಂಗವಾಗಿ ನಾಳೆ ಮಾ.10ರಂದು ಬೆಳಗ್ಗೆ 11 ಗಂಟೆಗೆ ಮೆರವಣಿಗೆ ಆಯೋಜಿಸಲಾಗಿದೆ. ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರಿನಿಂದ ಆರಂಭಗೊಳ್ಳುವ ಮೆರವಣಿಗೆ, ಮೈಸೂರು ವಿವಿ ಓವೆಲ್ ಮೈದಾನದಲ್ಲಿ ಅಂತ್ಯಗೊಳ್ಳಲಿದೆ.

## ಮೂರು ರಾಷ್ಟ್ರ ಮಟ್ಟದ ಪ್ರಶಸ್ತಿ ಮುಡಿಗೇರಿಸಿಕೊಂಡ ಕೆಎಸ್‌ಆರ್‌ಟಿಸಿ

ಬೆಂಗಳೂರು, ಮಾ.9– ಭಾರತದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಒಕ್ಕೂಟ ನೀಡುವ 2023–24ನೇ ಸಾಲಿನ 3 ರಾಷ್ಟ್ರೀಯ ಸಾರ್ವಜನಿಕ ಬಸ್ ಸಾರಿಗೆ ಪ್ರಶಸ್ತಿಗಳು ಕೆಎಸ್‌ಆರ್‌ಟಿಸಿಗೆ ಲಭಿಸಿವೆ.

ಕೆಎಸ್‌ಆರ್‌ಟಿಸಿಗೆ ಅಶ್ವಮೇಧ ಬ್ರ್ಯಾಂಡಿಂಗ್ ಹಾಗೂ ವರ್ಚಸ್ಸು ಅಭಿವೃದ್ಧಿ, ಕಾರ್ಮಿಕರ ಕಲ್ಯಾಣಕ್ಕಾಗಿ ಕೈಗೊಂಡಿರುವ ವಿನೂತನ ಯೋಜನೆಗಳು ಹಾಗೂ ಗಣಕೀಕರಣ ಉಪಕ್ರಮಗಳಿಗಾಗಿ 3 ಪ್ರಶಸ್ತಿಗಳು ಲಭಿಸಿದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಒಕ್ಕೂಟದ ವತಿಯಿಂದ ನವದೆಹಲಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಡಾ.ಕಿರಣ್ ಬೇಡಿ ಅವರು ಪ್ರಶಸ್ತಿ ಪ್ರಧಾನ ಮಾಡಿದರು. ಉಪಮುಖ್ಯ ಸಂಚಾರ ವ್ಯವಸ್ಥಾಪಕ ಗುರುರಾಜ.ಹೆಚ್, ಕಲ್ಯಾಣಾಧಿಕಾರಿ ರಾಧ ಅವರು ಪ್ರಶಸ್ತಿಗಳನ್ನು ಸ್ವೀಕರಿಸಿದರು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಪ್ರಿಯಾಂಗ, ನಿರ್ವಾಹಕ ನಿರ್ದೇಶಕ ಸೂರ್ಯ ಕಿರಣ್ ಉಪಸ್ಥಿತರಿದ್ದರು.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಒಕ್ಕೂಟದ ವ್ಯಾಪ್ತಿಯಲ್ಲಿ ದೇಶದ 62 ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ಸದಸ್ಯತ್ವವನ್ನು ಹೊಂದಿವೆ. ಒಕ್ಕೂಟವು 1965 ಆ. 13ರಂದು ಅಸ್ತಿತ್ವಕ್ಕೆ ಬಂದಿದೆ. ಭಾರತ ಸರ್ಕಾರದ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯದ ನಿರ್ದೇಶನದ ಅನುಸಾರ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯು 59 ವರ್ಷಗಳ ಅನುಭವವನ್ನು ಹೊಂದಿದ್ದು, ದೇಶದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ.

## ವಿಪಕ್ಷ ನಾಯಕ ಸ್ಥಾನಕ್ಕೆ ಆರ್. ಅಶೋಕ್ ಯೋಗ್ಯರಲ್ಲ

### ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ವಾಗ್ದಾಳಿ

ಬೆಂಗಳೂರು, ಮಾ.9– ಸಂಪೂರ್ಣ ಅಧ್ಯಯನ ಮಾಡದೆ ಬಜೆಟ್ ಕುರಿತು ಹೇಳಿಕೆ ನೀಡಿರುವ ಆರ್. ಅಶೋಕ್ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಯೋಗ್ಯರಲ್ಲ ಎಂದು ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ವಾಗ್ದಾಳಿ ನಡೆಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಗರಿಗೆ ಅಧ್ಯಯನದ ಕೊರತೆಯಿದೆ. 197 ಪುಟಗಳ ಬಜೆಟ್ ಪ್ರತಿಯನ್ನು ಸಂಪೂರ್ಣವಾಗಿ ಪರಾಮರ್ಶಿಸದೆ ಹೇಳಿಕೆ ನೀಡುತ್ತಿದ್ದಾರೆ ಎಂದು ಟೀಕಿಸಿದರು.



ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲಾ ವರ್ಗದವರನ್ನು ಮೇಲೆತ್ತುವ ಗುರಿಯೊಂದಿಗೆ ಬಜೆಟ್ ಮಂಡಿಸಲಾಗಿದೆ. ಅಧ್ಯಯನದ ಕೊರತೆಯಿಂದ ವಿಪಕ್ಷ ನಾಯಕ ಹಲಾಲ್ ಬಜೆಟ್ ಎಂದು ಆರೋಪಿಸುತ್ತಿದ್ದಾರೆ. ಬಿಜೆಪಿಗರಿಗೆ ಜನರ ಭಾವನೆಯನ್ನು ಕೆರಳಿಸುವುದೇ ಕಾಯಕವಾಗಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಬಜೆಟ್‌ನಲ್ಲಿ ನ್ಯೂನತೆಗಳಿದ್ದರೆ ವಿಪಕ್ಷ ನಾಯಕ ಸ್ಥಾನದಲ್ಲಿರುವವರು ಅದನ್ನು ಸದನ ಮುಂದೆ ಇಟ್ಟು ಚರ್ಚಿಸಬೇಕು. ಯಾರೋ ಪಕ್ಕದಲ್ಲಿದ್ದವರು ಬೋಗಸ್ ಬಜೆಟ್ ಎಂದರೆ ಅದನ್ನೇ ಪುನರುಚ್ಚರಿಸುವ ಕೆಲಸ ಮಾಡಬಾರದು ಎಂದು ಕುಟುಕಿದರು. ಅವರ ಬಳಿ ಹಣ ಇದೆ. ಆದರೆ, ವಿವಿಗಳಿಗೆ ಕೊಡಲು ದುಡ್ಡಿಲ್ಲ. ವಕ್ಫ್ ಕಟ್ಟಡಕ್ಕೆ ಅನುದಾನ ಕೊಟ್ಟಿದ್ದಾರೆ. ಆದರೆ, ಎಲ್ಲಾ ಮಕ್ಕಳಿಗೆ ಉನ್ನತ ಶಿಕ್ಷಣ ನೀಡುವ ವಿವಿಗಳಿಗೆ ಕೊಡಲು ಇವರಿಗೆ ಕೈ ಬರಲ್ಲ. ಈ ಬಜೆಟ್ ಬಗ್ಗೆ ಕಾಂಗ್ರೆಸ್ ಸುಳ್ಳು ಹೇಳುತ್ತಿದೆ. ಜನರಿಗೆ ಇನ್ನು ಸ್ವಲ್ಪ ದಿನದಲ್ಲೇ ಸತ್ಯ ಏನೆಂದು ಗೊತ್ತಾಗುತ್ತದೆ. ಬೆಂಗಳೂರು ನಗರದ ಸುರಂಗ ಯೋಜನೆಗೆ ರೂ 40,000 ಕೋಟಿ.ಕೊಡುತ್ತೇವೆ ಎಂದು ಹೇಳಿದ್ದಾರೆ. ಎಲ್ಲಿಂದ ಹಣ ಕೊಡುತ್ತಾರೆ? ಇಷ್ಟು ಹಣವನ್ನು ಎಲ್ಲಿಂದ ತರುತ್ತಾರೆ. ಇದು ನಿಜಕ್ಕೂ ಆಗುತ್ತಾ? ಅಥವಾ ಕನಸಾಗಿಯೇ ಉಳಿಯುತ್ತಾ? ಎಂದು ಅನುಮಾನ ವ್ಯಕ್ತಪಡಿಸಿದ್ದರು.

## ಪುಣ್ಯಕ್ಷೇತ್ರಗಳ ಜಲ ಮೂಲದ ಬಳಿ ಸೋಪು, ಶ್ಯಾಂಪೂ ಮಾರಾಟ ನಿಷೇಧಿಸಿ

### ಸಚಿವ ಈಶ್ವರ ಖಂಡ್ರೆ ಸೂಚನೆ

ಬೆಂಗಳೂರು, ಮಾ.9– ಪುಣ್ಯಕ್ಷೇತ್ರಗಳ ನದಿ, ಸರೋವರ, ಕಲ್ಯಾಣಿ, ಸ್ನಾನಘಟ್ಟಗಳ 500 ಮಿಟರ್ ವ್ಯಾಪ್ತಿಯಲ್ಲಿ ಸೋಪು, ಶ್ಯಾಂಪೂ ಮಾರಾಟವನ್ನು ನಿಷೇಧಿಸಿ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಅವರು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.



ಪುಣ್ಯಕ್ಷೇತ್ರಗಳ ಬಳಿ ಇರುವ ಜಲಮೂಲಗಳಲ್ಲಿ ಭಕ್ತರು, ಪ್ರವಾಸಿಗರು ಸ್ನಾನ ಮಾಡಿ ಉಳಿದ ಶ್ಯಾಂಪೂ ಮತ್ತು ಸೋಪಿನ ಸ್ಯಾಷೆಗಳನ್ನು ದಂಡೆಯಲ್ಲಿ ಎಸೆದು ಹೋಗುತ್ತಿದ್ದಾರೆ. ಅಲ್ಲಿನ ಪರಿಸರದಲ್ಲಿ ಕಸದ ಪ್ರಮಾಣ ಹೆಚ್ಚುವುದಲ್ಲದೆ, ಈ ರಾಸಾಯನಿಕ ವಸ್ತು ಮತ್ತು ಪ್ಲಾಸ್ಟಿಕ್ ಜಲಮೂಲವನ್ನು ಸೇರುತ್ತಿವೆ. ಇದರಿಂದ ನೀರು ಕಲುಷಿತವಾಗುತ್ತಿದೆ. ಜತೆಗೆ ಜಲಚರಗಳೂ ಸಾಯುತ್ತಿವೆ ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

ಪುಣ್ಯಕ್ಷೇತ್ರಗಳ ಬಳಿ ಇರುವ ಸಣ್ಣ–ಪುಟ್ಟ ಅಂಗಡಿಗಳಲ್ಲಿ ಒಂದೆರಡು ರೂಪಾಯಿಯ ಶ್ಯಾಂಪೂ ಮತ್ತು ಐದರಿಂದ ಹತ್ತು ರೂಪಾಯಿಯ ಸೋಪಿನ ಪ್ಯಾಕೆಟ್ ಮಾರಾಟ ಮಾಡಲಾಗುತ್ತಿದೆ. ಅಗ್ಗದ ಬೆಲೆಯಲ್ಲಿ ಸಿಗುವುದರಿಂದ ಉಳಿದ ಸೋಪು, ಶ್ಯಾಂಪೂವನ್ನು ಜನರು ಅಲ್ಲೇ ಎಸೆದು ಹೋಗುತ್ತಾರೆ. ಹೀಗಾಗಿ ಇವು ಸುಲಭವಾಗಿ ಸಿಗದಂತೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕಾಗಿ ಪುಣ್ಯಕ್ಷೇತ್ರಗಳ ಜಲಮೂಲಗಳಿಂದ 500 ಮೀಟರ್ ವ್ಯಾಪ್ತಿಯಲ್ಲಿ ಇವುಗಳ ಮಾರಾಟವನ್ನು ನಿಷೇಧಿಸಬೇಕು ಎಂದು ಸೂಚಿಸಿದ್ದಾರೆ.

ಹಲವು ಭಕ್ತರು ಮೂಢನಂಬಿಕೆಗಳ ಕಾರಣದಿಂದ ಸ್ನಾನದ ನಂತರ ಒದ್ದೆ ಬಟ್ಟೆಗಳನ್ನು ನೀರಿನಲ್ಲೇ ಹರಿಬಿಟ್ಟು ಹೋಗುತ್ತಿದ್ದಾರೆ. ಕೆಲವು ತೀರ್ಥಕ್ಷೇತ್ರಗಳಲ್ಲಂತೂ ರಾಶಿರಾಶಿ ವಸ್ತ್ರಗಳು ಬಿದ್ದಿವೆ. ಇದರಿಂದಲೂ ಸ್ವಚ್ಛತೆ ಹಾಳಾಗುತ್ತಿದೆ ಮತ್ತು ಪುಣ್ಯಕ್ಷೇತ್ರಗಳ ಜಲಮೂಲಗಳು ಕಲುಷಿತವಾಗುತ್ತಿವೆ. ಈ ಕ್ರಿಯೆಯನ್ನೂ ನಿರ್ಬಂಧಿಸುವ ಕೆಲಸ ಮಾಡಿ ಎಂದು ಸಚಿವರು ಸೂಚಿಸಿದ್ದಾರೆ.

ಮೈಸೂರು ಮಿತ್ರ
ಸೋಮವಾರ 10 ಮಾರ್ಚ್ 2025

## ರಂಗಸಮುದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

# ಕಿರಣ್ ಅಧ್ಯಕ್ಷ, ರೇಖಾ ಸೋಮಶೇಖರ್ ಉಪಾಧ್ಯಕ್ಷೆ

ತಿ.ನರಸೀಪುರ, ಮಾ.9– ತಾಲೂಕಿನ ರಂಗಸಮುದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆರ್.ಕಿರಣ್, ಉಪಾಧ್ಯಕ್ಷೆಯಾಗಿ ರೇಖಾ ಸೋಮಶೇಖರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮದ ಸಹಕಾರ ಸಂಘದ ಕಚೇರಿಯಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆರ್.ಕಿರಣ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರೇಖಾ ಸೋಮಶೇಖರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ವಿಮಲ್ ಕುಮಾರ್ ಘೋಷಿಸಿದರು.

ನಿರ್ದೇಶಕರಾದ ಸಿ.ಬಸವೇಗೌಡ, ಟಿ.ವಾಸುದೇವ್, ಸಿದ್ದರಾಜು, ಮಂಜು, ರತ್ನಮ್ಮ, ಜವರಯ್ಯ, ಕಲ್ಯಾಣಮ್ಮ, ಗೋಪಾಲ್, ರೇವಣ್ಣ, ಎ.ಎಸ್.ಚಂದ್ರಶೇಖರ್ ಚುನಾವಣೆ ಸಭೆಯಲ್ಲಿ ಹಾಜರಿದ್ದು ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ನಿರ್ದೇಶಕ ಟಿ.ವಾಸುದೇವ್, ಸಹಕಾರ ಸಂಘ ಸ್ಥಾಪನೆಯಾಗಿ 48 ವರ್ಷಗಳು ಕಳೆದಿವೆ. 2027ರಲ್ಲಿ ಸಂಘ ಸುವರ್ಣ ಮಹೋತ್ಸವ ಆಚರಿಸಿಕೊಳ್ಳಲಿದೆ. ಗ್ರಾಮದ ಸಹಕಾರ ಸಂಘದಲ್ಲಿ ಇದುವರೆಗೂ ಚುನಾವಣೆ ನಡೆಸದೇ ಸಹಕಾರಿಗಳ ಸಹಕಾರದಿಂದ ವರಿಷ್ಠರನ್ನು ಅವಿರೋಧವಾಗಿ ಆಯ್ಕೆ ಮಾಡಿಕೊಂಡು, ಚುನಾಯಿತ ಪ್ರತಿನಿಧಿಗಳಾದ ನಾವೂ ಕೂಡ ಸಹಕಾರ ಸಂಘದ ಸದಸ್ಯರೊಟ್ಟಿಗೆ ಸೇರಿ ಸಂಘವನ್ನು ಬಹು ಎತ್ತರಕ್ಕೆ ಕೊಂಡೊಯ್ಯಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಅಂತೆಯೇ ಸಂಘವು ಅಭಿವೃದ್ಧಿಯತ್ತ ದಾಪುಗಾಲು ಹಾಕಲು ಸಂಘದ ಸರ್ವ ಸದಸ್ಯರ ಸಹಕಾರ ಅತ್ಯವಶ್ಯಕವಾಗಿ ಬೇಕು. ನೂತನ ಅಧ್ಯಕ್ಷ–ಉಪಾಧ್ಯಕ್ಷರು ಸಮನ್ವಯತೆಯಿಂದ ಸರ್ಕಾರದ ಅನುದಾನದ ಸದ್ಬಳಕೆಗೆ ಮುಂದಾಗಬೇಕು. ಸರ್ಕಾರದಿಂದ ಬರುವ ಸವಲತ್ತುಗಳನ್ನು ರೈತರಿಗೆ ತಲುಪಿಸುವ ಪ್ರಾಮಾಣಿಕ ಕೆಲಸಕ್ಕೆ ಮುಂದಾಗಬೇಕೆಂದು ಸಲಹೆ ನೀಡಿದರು.


ರಂಗಸಮುದ್ರ ಪಿಎಸಿಎಸ್ ಅಧ್ಯಕ್ಷರಾಗಿ ಆರ್.ಕಿರಣ್, ಉಪಾಧ್ಯಕ್ಷೆಯಾಗಿ ರೇಖಾ ಸೋಮಶೇಖರ್ ಅವಿರೋಧವಾಗಿ ಆಯ್ಕೆಯಾದರು.

> ಕ್ಷೇತ್ರ ವ್ಯಾಪ್ತಿಗೊಳಪಡುವ ಶಾಸಕರು, ಸಂಸದರು ಹಾಗೂ ಹಿರಿಯ ಸಹಕಾರಿಗಳಾದ ಸಿ.ಬಸವೇಗೌಡರ ಸಹಕಾರದೊಂದಿಗೆ ಸಂಘಕ್ಕೆ ಬರಬಹುದಾದ ಅನುದಾನ ತಂದು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತೇನೆ. ಈ ಭಾಗದ ರೈತರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿ ಸಹಕಾರ ಸಂಘದ ಅಭಿವೃದ್ಧಿ ಶ್ರಮಿಸುತ್ತೇನೆ.
> – ಆರ್.ಕಿರಣ್, ನೂತನ ಅಧ್ಯಕ್ಷ.

ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ನೂತನ ಅಧ್ಯಕ್ಷ ಉಪಾಧ್ಯಕ್ಷರನ್ನು ಅಭಿನಂದಿಸಿ ಸಹಕಾರ ಸಂಘದ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಮಾರ್ಗೋಪಾಯಗಳ ಬಗ್ಗೆ ಸಲಹೆ ನೀಡಿದರು.

ತಾಪಂ ಮಾಜಿ ಸದಸ್ಯ ಮರಿದೇವೇಗೌಡ, ಹಿಟ್ಟುವಳ್ಳಿ ಪ್ರಭುಸ್ವಾಮಿ, ಚಿಕ್ಕದೇವಣ್ಣ, ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ ನಾರಾಯಣ, ಜಿಲ್ಲಾ ಬ್ಯಾಂಕ್ ಪ್ರತಿನಿಧಿಗಳಾದ ಮಂಜೇಶ್‌ಗೌಡ, ಎನ್.ಎಸ್.ಶೇಖರ್ ಹಾಜರಿದ್ದರು.

## ಸ್ಕೂಟರ್‌ಗೆ ಕಾರು ಡಿಕ್ಕಿ: ಸವಾರ ಸಾವು

ಹುಣಸೂರು, ಮಾ.9– ಸ್ಕೂಟರ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿರುವ ಘಟನೆ ನಗರದ ಹೊರವಲಯದ ಹಾಳಗೆರೆ ಜಂಕ್ಷನ್ ಬಳಿ ಶನಿವಾರ ರಾತ್ರಿ ನಡೆದಿದೆ.



ನಗರದ ಕಾಫಿ ವರ್ಕ್ಸ್ ಆವರಣದಲ್ಲಿರುವ ಸೀತಾ ಟ್ರೇಡರ್ಸ್ ಮಾಲೀಕ ರವಿ ಸಾಲಿಯಾನ ಅಲಿಯಾಸ್ ವಾಲೆ ರವಿ (44) ಸಾವನ್ನಪ್ಪಿದವರು. ಶನಿವಾರ ರಾತ್ರಿ 10.30ರಲ್ಲಿ ರವಿ ಸಾಲಿಯಾನ ಅವರು ತಮ್ಮ ವೇಸ್ಪಾ ಸ್ಕೂಟರ್ (ಎ.45, ವಿ.2244) ನಲ್ಲಿ ಹಾಳಗೆರೆ ಯಲ್ಲಿರುವ ಸ್ನೇಹಿತರ ಮನೆಗೆ ಊಟಕ್ಕೆ ಹೋಗಿ ವಾಪಸ್ ಬರುತ್ತಿದ್ದ ವೇಳೆ ಹಾಳಗೆರೆ ಜಂಕ್ಷನ್ ಬಳಿ ಎದುರಿನಿಂದ (ಕೆಎ–03, ಎನ್‌ಎ–8368) ಸ್ಯಾಂಟ್ರೋ ಕಾರು ಡಿಕ್ಕಿ ಹೊಡೆದಿದೆ. ಈ ವೇಳೆ ತೀವ್ರ ಗಾಯಗೊಂಡ ರವಿ ಅವರನ್ನು ಹುಣಸೂರಿನ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಘಟನೆ ಬಳಿಕ ಸ್ಯಾಂಟ್ರೋ ಕಾರಿನ ಚಾಲಕ ಪರಾರಿಯಾಗಿದ್ದು, ಸ್ಥಳಕ್ಕೆ ಹುಣಸೂರು ನಗರ ಠಾಣೆ ಇನ್ಸ್‌ಪೆಕ್ಟರ್ ಕಶ್ಯಪ್, ಎಸ್‌ಐ ಜಮೀರ್ ಅಹಮ್ಮದ್ ಮತ್ತು ಸಿಬ್ಬಂದಿ ಭೇಟಿ ನೀಡಿ ಎರಡೂ ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಶವದ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು.

## ನೂತನ ನಿರ್ದೇಶಕರಿಗೆ ಅಭಿನಂದನೆ


ತಿ.ನರಸೀಪುರ ತಾಲೂಕಿನ ಆಲಗೂಡು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಸಾಲಗಾರರಲ್ಲದ ಕ್ಷೇತ್ರದ ನೂತನ ನಿರ್ದೇಶಕರಾಗಿ ಆಯ್ಕೆಯಾದ ಎಂ.ಕೆ.ಸಹದೇವ ಅವರನ್ನು ಸಾಮಾಜಿಕ ನ್ಯಾಯ ಸಮಿತಿ ಮಾಜಿ ಅಧ್ಯಕ್ಷ ಎಂ.ರಮೇಶ್, ಹೆಳವರಹುಂಡಿ ರಾಮಸ್ವಾಮಿ, ಪುರಸಭೆ ಮಾಜಿ ಸದಸ್ಯ ಗಣೇಶ್, ಸೋಮಣ್ಣ ನಾಯಕ, ನಾಗು, ನಾಗರಾಜು, ಪ್ರದೀಪ್, ಮಂಜುನಾಥ್ ಸೇರಿದಂತೆ ಇತರರು ಅಭಿನಂದಿಸಿದರು.

## ಎಂಎಲ್‌ಸಿ ಡಾ.ಯತೀಂದ್ರಗೆ ಅಭಿನಂದನೆ


ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರನ್ನು ಅಭಿನಂದಿಸಲಾಯಿತು.

ತಿ.ನರಸೀಪುರ, ಮಾ.9– ಪಿಎಲ್‌ಡಿ ಬ್ಯಾಂಕ್ ನೂತನ ನಿರ್ದೇಶಕ ಎನ್.ಅನಿಲ್ ಕುಮಾರ್ ಭಾನುವಾರ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

ನಂತರ ಮಾತನಾಡಿದ ಅವರು, ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ ಗೆಲುವು ಸಾಧಿಸಿ ನಿರ್ದೇಶಕನಾಗಿ ಆಯ್ಕೆಯಾಗಲು ಕಾರಣರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಕಸಬಾ ಹಾಗೂ ತಿ.ನರಸೀಪುರ ಕಾಂಗ್ರೆಸ್ ಕಾರ್ಯಕರ್ತರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಈ ಬಾರಿಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎಲ್ಲಾ ವರ್ಗದವರಿಗೂ ಸೌಲಭ್ಯ ಕಲ್ಪಿಸಿದ್ದಾರೆ. ಅದರಂತೆ ಪಿಎಲ್‌ಡಿ ಬ್ಯಾಂಕ್‌ಗೂ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಿ ಕೊಡಿ ಎಂದು ಮನವಿ ಸಲ್ಲಿಸಿದ ಅನಿಲ್, ಇದರಿಂದ ರೈತರಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದರು.

ಮುಂದಿನ ದಿನಗಳಲ್ಲಿ ನಮ್ಮ ಬ್ಯಾಂಕ್ ವ್ಯಾಪ್ತಿಯ ಎಲ್ಲಾ ರೈತರಿಗೂ ಸರ್ಕಾರದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ದೊರಕಿಸಿಕೊಡಲು ಶ್ರಮಿಸುತ್ತೇನೆ ಎಂದ ಅವರು, ಮುಂಬರುವ ಜಿಪಂ, ತಾಪಂ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜಯಗಳಿಸಿ ಅಧಿಕಾರ ಹಿಡಿಯುವ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಕಾರ್ಯಕರ್ತರು ಶ್ರಮಿಸಬೇಕು ಎಂದರು. ಈ ವೇಳೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ, ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಟಿ.ಎಸ್. ಪ್ರಶಾಂತ್ ಬಾಬು, ಹಾಲಿ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಪುರಸಭಾ ಮಾಜಿ ಅಧ್ಯಕ್ಷ ಸೋಮು ಪಟ್ಟೆಹುಂಡಿ ಗೋಪಾಲ ಇನ್ನಿತರರಿದ್ದರು.

## ವಿದ್ಯಾರ್ಥಿಗಳನ್ನು ಆಕರ್ಷಿಸಿದ ಹಳೇ ನಾಣ್ಯ, ನೋಟುಗಳು

ಹುಣಸೂರು, ಮಾ.9– ನಗರದ ಜ್ಞಾನಧಾರಾ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಪಿ.ಕೆ.ಕೇಶವಮೂರ್ತಿ ಅವರ ಅಪೂರ್ವ ನಾಣ್ಯ ಮತ್ತು ನೋಟು, ಸ್ಟ್ಯಾಂಪ್‌ಗಳ 167ನೇ ಪ್ರದರ್ಶನದಲ್ಲಿ ಕಾಲೇಜಿನ ವಿದ್ಯಾರ್ಥಿಗಳು, ಅಧ್ಯಾಪಕ ವೃಂದದವರು, ನಾಣ್ಯ, ನೋಟು, ಅಂಚೆ ಚೀಟಿಗಳನ್ನು ವೀಕ್ಷಿಸಿದರು.

ಕಾಲೇಜಿನ ಪ್ರಾಂಶುಪಾಲ ಕಾರ್ತಿಕ್ ಪ್ರದರ್ಶನಕ್ಕೆ ಚಾಲನೆ ನೀಡಿದರು. ನಾಣ್ಯ ಸಂಗ್ರಹಕಾರ ಪಿ.ಕೆ.ಕೇಶವಮೂರ್ತಿ ಸಂಗ್ರಹಣೆ ಕುರಿತು ಕುತೂಹಲಕಾರಿ ವಿಷಯಗಳನ್ನು ಉಪನ್ಯಾಸಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತಿಳಿಸಿದರು.


ನಾಣ್ಯಗಳನ್ನು ವಿದ್ಯಾರ್ಥಿಗಳು ವಿಕ್ಷೀಸಿದರು.

ಅರ್ಧ ಪೈಸೆ, ಒಂದಾಣೆ, ಎರಡಾಣೆ, ನಾಲ್ಕಾಣೆಯಂತಹ ಅಪರೂಪದ ನಾಣ್ಯಗಳು, ವಿವಿಧ ಸಾಮ್ರಾಜ್ಯಕ್ಕೆ ಸೇರಿದ ಹಳೆಯ ನಾಣ್ಯಗಳು ಮತ್ತು ಬ್ರಿಟಿಷರ ಕಾಲಕ್ಕೆ ಸೇರಿದ ಹಳೆಯ ನೋಟುಗಳು, ಅಂಚೆ ಚೀಟಿಗಳು ವಿದೇಶಿ ನಾಣ್ಯಗಳು ವಿದ್ಯಾರ್ಥಿಗಳನ್ನು ಆಕರ್ಷಿಸಿದವು.

ಕ್ರಿಸ್ತ ಪೂರ್ವ 5ನೇ ಶತಮಾನದಲ್ಲಿ ಬಳಕೆಗೆ ಬಂದ ಭಾರತದ ಮೊಟ್ಟ ಮೊದಲ ಪಂಚ್ಮಾರ್ಕ್ ನಾಣ್ಯಗಳು, ಗ್ರೀಕರು, ರೋಮನ್ನರು, ಗುಪ್ತರು, ಶಾತವಾಹನರು, ಕದಂಬರು, ಚೋಳರು, ಪಾಂಡ್ಯರು, ಮೊಘಲರು, ಬ್ರಿಟಿಷರು, ಪೋರ್ಚುಗೀಸರು ಬಳಸಿದ ನಾಣ್ಯ ನೋಟುಗಳು ಹಾಗೂ ಹಲವು ಗಣ್ಯರ ಸ್ಮರಣಾರ್ಥ ವಾಗಿ ಬಿಡುಗಡೆಗೊಂಡ ಭಾರತದ 1000, 150, 100, 50, 20, 10, 5 ರೂಪಾಯಿಗಳ ಮುಖಬೆಲೆ ನಾಣ್ಯಗಳು, ಚಿನ್ನ, ಬೆಳ್ಳಿ, ತಾಮ್ರ, ಸೀಸ, ಹಿತ್ತಾಳೆಯ ನಾಣ್ಯಗಳು ಗಮನ ಸೆಳೆದವು.

ಮೈಸೂರು ಒಡೆಯರು ಹಾಗೂ ಮೊಘಲ್ ಸಾಮ್ರಾಜ್ಯದ ಅಕ್ಬರ್ ಜಹಾಂಗೀರ್ ಶಹಜಾನ್ ಔರಂಗಜೇಬ್ ಕಾಲದ ನಾಣ್ಯಗಳನ್ನು ಕುತೂಹಲದಿಂದ ವಿದ್ಯಾರ್ಥಿಗಳು ವೀಕ್ಷಿಸಿದರು. ಬಿಜಾಪುರ ತಿರುವಂಕೂರ್ ಹೈದರಾಬಾದ್ ಬರೋಡ ಗ್ವಾಲಿಯರ್ ಮೇವಾರ ಮೊದಲಾದ ಭಾರತೀಯ ಸಂಸ್ಥಾನಗಳ ನಾಣ್ಯಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ನಾಣ್ಯಗಳು ಇತಿಹಾಸಕ್ಕೆ ಬೆಳಕು ಚೆಲ್ಲುತ್ತವೆ. ರಾಜರು ಮತ್ತು ಅವರು ಜಾರಿಗೆ ತಂದ ನಾಣ್ಯಗಳು ಆಗಿನ ಕಾಲದ ಇತಿಹಾಸ ಹೇಳುತ್ತದೆ. ಇವುಗಳ ಅಧ್ಯಯನದಿಂದ ಪ್ರಾಚೀನ ಕಾಲದ ರಾಜಕೀಯ ಸಾಮಾಜಿಕ ಮತ್ತು ರಾಜರ ಸಾಧನೆಗಳನ್ನು ತಿಳಿಯಬಹುದು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಧ್ಯಾಪಕರಾದ ಪದ್ಮ, ನೀತು, ಕೀರ್ತಿಕುಮಾರ್, ಅಮೃತ, ಮಮತಾ, ಶರಣ್ಯ, ಅರ್ಚನಾ, ಶಾಂತಿ, ನಿತೀಶ್, ಸವಿತಾ, ಪ್ರದೀಪ್ ಕುಮಾರ್, ನೇಹ ಇತರರಿದ್ದರು.

## ಕ್ರೈಸ್ತ ಮಹಾಸಭಾ ಪದಾಧಿಕಾರಿಗಳ ಆಯ್ಕೆ


ಕೋಟೆ ಮತ್ತು ಸರಗೂರು ತಾಲೂಕು ಕ್ರೈಸ್ತ ಮಹಾಸಭಾಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಹೆಚ್.ಡಿ.ಕೋಟೆ, ಮಾ.9– ಕೋಟೆ ಮತ್ತು ಸರಗೂರು ತಾಲೂಕು ಕ್ರೈಸ್ತ ಮಹಾಸಭಾಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಸಮುದಾಯದ ಅಭಿವೃದ್ಧಿ ಹಿತದೃಷ್ಟಿಯಿಂದ ತಾಲೂಕಿನ ಎಲ್ಲಾ 62 ಕ್ರೈಸ್ತ ಸಭಾ ಪಾಲಕರು ಮತ್ತು ಸದಸ್ಯರು ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಿದ್ದಾರೆ. ಅಧ್ಯಕ್ಷರಾಗಿ ಸಿ.ಎಂ.ಮಲ್ಲಿಕಾರ್ಜುನಸ್ವಾಮಿ, ಉಪಾಧ್ಯಕ್ಷರಾಗಿ ಡ್ಯಾನಿಯಲ್, ಕಾರ್ಯದರ್ಶಿಯಾಗಿ ಲೋಕೇಶ್, ಖಜಾಂಚಿಯಾಗಿ ಪ್ರಭು, ಸಹ ಕಾರ್ಯದರ್ಶಿಯಾಗಿ ಡೇವಿಡ್ ಮುನಿರತ್ನ, ನಾಮ ನಿರ್ದೇಶಿತರಾಗಿ ಸುರೇಶ, ಜಯಕುಮಾರ್, ರವಿಕುಮಾರ್, ಚಂದ್ರು, ಎಂ.ಮಹದೇವು, ಶ್ರೀನಿವಾಸ್ ನಾಯಕ, ರಂಗ ಜೋಸೆಫ್, ಸೋಮು, ಬ್ರದರ್ ಅಭಿಜಿತ್, ಬ್ರದರ್ ಸಿದ್ದು ಆಯ್ಕೆಯಾಗಿದ್ದಾರೆ.

## ಕಾರ್ಮಿಕರು ಸರ್ಕಾರದ ಯೋಜನೆ ಸದ್ಬಳಕೆ ಮಾಡಿಕೊಳ್ಳಿ

### ತಾಲೂಕು ಕುರುಬ ಸಮಾಜದ ಅಧ್ಯಕ್ಷ ಮಾಲೇಗೌಡ



ಹೊಮ್ಮರಗಳ್ಳಿಯಲ್ಲಿ ಕಟ್ಟಡ ಕಾರ್ಮಿಕರಿಗೆ ಕಿಟ್ ವಿತರಣೆ ಮಾಡಲಾಯಿತು.

ಹೆಚ್.ಡಿ.ಕೋಟೆ, ಮಾ.9– ಕಾರ್ಮಿಕರ ಅನುಕೂಲಕ್ಕಾಗಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಕಾರ್ಮಿಕರು ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಾಲೂಕು ಕುರುಬ ಸಮಾಜದ ಅಧ್ಯಕ್ಷ ಮಾಲೇಗೌಡ ತಿಳಿಸಿದರು.

ತಾಲೂಕಿನ ಹೊಮ್ಮರಗಳ್ಳಿಯ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘ ಮೈಸೂರು ಕಾರ್ಮಿಕ ಇಲಾಖೆ ಹಾಗೂ ಭೀಮರಾವ್ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಸಹಯೋಗದೊಂದಿಗೆ ಭಾನುವಾರ ಕಟ್ಟಡ ಕಾರ್ಮಿಕರಿಗೆ ಉಚಿತ ಕಿಟ್ ವಿತರಣೆ ಹಾಗೂ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮದಲ್ಲಿ ಕಾರ್ಮಿಕರಿಗೆ ಉಚಿತ ಕಿಟ್ ವಿತರಿಸಿ ಮಾತನಾಡಿದ ಅವರು, ಪ್ರತಿಯೊಂದು ಯೋಜನೆ ಪ್ರತಿಯೊಬ್ಬರಿಗೂ ತಲುಪುವ ನಿಟ್ಟಿನಲ್ಲಿ ಜನ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕೆಲಸ ಮಾಡಬೇಕು. ಕಷ್ಟ ಪಟ್ಟು ಸಂಘಟಿಸುವ ಪ್ರತಿಯೊಬ್ಬರನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿದಾಗ ಮಾತ್ರ ಹಲವು ಸಮಾಜಮುಖಿ ಕೆಲಸ ಮಾಡಲು ಸಾಧ್ಯ ಎಂದರು.

ತಾಲೂಕು ಕಾರ್ಮಿಕ ನಿರೀಕ್ಷಕಿ ಪಿ.ಹರ್ಷಿತ ಮಾತನಾಡಿ, ಪ್ರತಿಯೊಬ್ಬ ಕಾರ್ಮಿಕರು ಕಾರ್ಮಿಕ ಕಾರ್ಡ್ ಅನ್ನು ತಪ್ಪದೇ ಮಾಡಿಸಿಕೊಳ್ಳಬೇಕು. ನಿಗದಿತ ಸಮಯಕ್ಕೆ ನವೀಕರಣ ಮಾಡಿಕೊಳ್ಳಬೇಕು ಎಂದ ಅವರು ಕೆಲಸ ಮಾಡುವ ವೇಳೆ ಮರಣ ಹೊಂದಿದಾಗ ಹಾಗೂ ಕಾರ್ಮಿಕರ ಮಕ್ಕಳಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಕುರಿತು ತಿಳಿದುಕೊಳ್ಳಬೇಕು ಎಂದರು.

ಇದೇ ವೇಳೆ ನೂರಾರು ಕಾರ್ಮಿಕರು ಮತ್ತು ಕುಟುಂಬದವರು ಆರೋಗ್ಯ ತಪಾಸಣೆಯಲ್ಲಿ ಭಾಗವಹಿಸಿದ್ದರು. ಅಲ್ಲದೇ ಕಾರ್ಮಿಕರಿಗೆ ಉಚಿತವಾಗಿ ಕಿಟ್ ವಿತರಿಸಲಾಯಿತು. ಈ ವೇಳೆ ಕಾರ್ಮಿಕರ ಸಂಘದ ಅಧ್ಯಕ್ಷ ಲೋಕೇಶ್, ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ಕಾರ್ಮಿಕ ಸಂಘದ ಉಪಾಧ್ಯಕ್ಷ ನಾಗರಾಜು, ಕಾರ್ಯದರ್ಶಿ ಚಂದ್ರಶೇಖರ್, ಖಜಾಂಚಿ ಶ್ರೀನಿವಾಸ, ನಿರ್ದೇಶಕರಾದ ಸಿದ್ದರಾಜು, ಚಂದ್ರಶೇಖರ್, ಕುಮಾರ್, ರಾಘವೇಂದ್ರ, ರಮೇಶ್, ಸೈಯದ್ ಇಮ್ರಾನ್, ಶ್ರೀನಿವಾಸ್, ರವಿ, ನಾಗೇಗೌಡ, ಉಮಾಶಂಕರ್ ಸಿಂಗ್, ಕುಮಾರ್, ಸೋಮೇಶ್, ವಸೀಂ ಖಾನ್, ಬಿ.ಎಂ.ಶಶಿ ಕಿರಣ್ ಇತರರಿದ್ದರು.

### ಹಾಲಿನ ಗುಣಮಟ್ಟ ಬಾರದ ಹಿನ್ನಲೆ

## ಹೊಮ್ಮರಗಳ್ಳಿ ಡೈರಿ ಎದುರು ಉತ್ಪಾದಕರ ಆಕ್ರೋಶ


ಹೊಮ್ಮರಗಳ್ಳಿ ಡೈರಿ ಎದುರು ಹಾಲು ಉತ್ಪಾದಕರು ಜಮಾಯಿಸಿರುವುದು.

ಹಂಪಾಪುರ, ಮಾ.9– ಕಳೆದ ಒಂದು ತಿಂಗಳಿಂದ ಹಾಲಿನ ಗುಣಮಟ್ಟ ಬಾರದ ಹಿನ್ನಲೆಯಲ್ಲಿ ಹಾಲು ಉತ್ಪಾದಕರು ನಿತ್ಯ ಡೈರಿ ಮುಂದೆ ಗಂಟೆಗಟ್ಟಲೇ ಕಾಯುವಂತಾಗಿದೆ ಎಂದು ಹೊಮ್ಮರಗಳ್ಳಿ ಹಾಲು ಉತ್ಪಾದಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹೊಮ್ಮರಗಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರದ ಬಿಸಿಎಂ ಕೇಂದ್ರದ ಎದುರು ಜಮಾಯಿಸಿದ ಹಾಲು ಉತ್ಪಾದಕರು ಮಾತನಾಡಿ, ನಿತ್ಯ ಹಸುವಿನಿಂದ ಹಾಲು ಕರೆದು ನೇರವಾಗಿ ಡೈರಿಗೆ ತೆಗೆದುಕೊಂಡು ಹೋಗುತ್ತೇವೆ. ಆದರೆ ಬಿಎಂಎಸಿ ಕೇಂದ್ರದವರು ಹಾಲಿಗೆ ನೀರು ಬೆರಸುತ್ತಿದ್ದೀರಿ ಎಂದು ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ಕಳೆದ ಒಂದು ತಿಂಗಳಿಂದ ಹಾಲಿನಲ್ಲಿ ಕೊಬ್ಬಿನಾಂಶ ಬರುತ್ತಿಲ್ಲವೆಂದು ನಿತ್ಯ 2 ರಿಂದ 3 ಗಂಟೆ ಕಾಯುವಂತಾಗಿದೆ. ಇದರಿಂದ ರೈತರ ದಿನನಿತ್ಯದ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿದೆ. ಡೈರಿಗೆ ಗುಣಮಟ್ಟದ ಹಾಲನ್ನು ಹಾಕಿದರೂ ಕೊಬ್ಬಿನಂಶ ಕಡಿಮೆ ಬರುತ್ತಿದೆ. ಹೀಗಾಗಿ ಡೈರಿಯವರು ಹಾಲಿಗೆ ಅವರಿಗಿಷ್ಟ ಬಂದಂತೆ ದರ ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಹೊಮ್ಮರಗಳ್ಳಿ ಬಿಎಂಸಿ ಕೇಂದ್ರದವರು ಗುಣಮಟ್ಟವಿರುವ ಮತ್ತು ಗುಣಮಟ್ಟವಿಲ್ಲದ ಹಾಲನ್ನು ರೈತರಿಂದ ಖರೀದಿಸಿ 48 ರಿಂದ 54 ರೂ. ಗಳಿಗೆ ಮಾರಾಟ ಮಾಡುತ್ತಾರೆ. ಆದರೆ ರೈತರಿಗೆ 25 ರಿಂದ 31 ರೂ. ನೀಡುತ್ತಿದ್ದು, ಉತ್ಪಾದಕರಿಗೆ ಅನ್ಯಾಯವಾಗುತ್ತಿದೆ. ಡೈರಿ ಅಧ್ಯಕ್ಷೆ ಶೀಲಾ ಅವರು ಹಾಲು ಉತ್ಪಾದಕರಿಗೆ ತೊಂದರೆಯಾದರೂ ಯಾವುದೇ ರೀತಿ ಸಹಕರಿಸುತ್ತಿಲ್ಲ. ಅವರಿಗೆ ಇಷ್ಟ ಬಂದಂತೆ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ಹಾಲು ಉತ್ಪಾದಕರಾದ ಸಂತೋಷ್, ಮಲ್ಲಿಕಾರ್ಜುನ, ಅಭಿ ಸೇರಿದಂತೆ ಎಲ್ಲಾ ಹಾಲು ಉತ್ಪಾದಕರು ದೂರಿದರು.

ಮೈಮುಲ್ ವಿಸ್ತರಣಾಧಿಕಾರಿ ಯೋಗೇಶ್ ಮಾತನಾಡಿ, ಮೊದಲಿನಿಂದ ಇಲ್ಲಿನ ಸಿಬ್ಬಂದಿ ಹಾಲನ್ನು ಟೆಸ್ಟ್ ಮಾಡದಿರುವುದೇ ಸಮಸ್ಯೆಗೆ ಕಾರಣವಾಗಿದೆ. ಗುಣಮಟ್ಟವಿಲ್ಲದ ಹಾಲು ಒಕ್ಕೂಟಕ್ಕೆ ಹೋಗುತ್ತಿದ್ದು, ಇದರಿಂದ ನಮಗೆ ಸಾಕಷ್ಟು ನಷ್ಟವಾಗುತ್ತಿದೆ. ಹೀಗಾಗಿ ಈ ಬಗ್ಗೆ ರೈತರಿಗೆ ಅರಿವು ಮೂಡಿಸಲಾಗುವುದು ಎಂದರು. ಈ ವೇಳೆ ಹಾಲು ಉತ್ಪಾದಕರು ಸೇರಿದಂತೆ ಇತರರಿದ್ದರು.

# ಸಮಾಜ ಕಲ್ಯಾಣಕ್ಕಾಗಿ ಮಠಮಾನ್ಯಗಳಿಂದ ನಿರಂತರ ಸೇವೆ

### ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಸರಗೂರು, ಮಾ.9– ಸಮಾಜ ಕಲ್ಯಾಣಕ್ಕಾಗಿ ಮಠಮಾನ್ಯಗಳು ನಿರಂತರ ಸೇವೆ ಕೈಗೊಂಡಿದ್ದು, ಶಿಕ್ಷಣ, ವಿವಾಹ ಸೇರಿದಂತೆ ಹಲವು ಸೇವಾ ಕಾರ್ಯ ಗಳನ್ನು ಮಾಡುತ್ತಿವೆ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಬಿಡಗಲು ಪಡವಲು ವಿರಕ್ತಮಠದಲ್ಲಿ ಭಾನುವಾರ ನಡೆದ ಕಾಳ ಒಡೆಯ ಗುರುಗಳ ಆರಾಧನೆ, ದಾಸೋಹ ಭವನ ಉದ್ಘಾಟನೆ ಹಾಗೂ ಸಾಮೂಹಿಕ ವಿವಾಹ ಧಾರ್ಮಿಕ ಕಾರ್ಯಕ್ರಮಕಲ್ಲಿ ಮಾತನಾಡಿದ ಅವರು, ಮಠಗಳು ಜನರ ದುಂದು ವೆಚ್ಚ ತಪ್ಪಿಸಲು ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಸುತ್ತಿವೆ. ದಂಪತಿಗಳು ಪರಸ್ಪರ ಅರ್ಥ ಮಾಡಿಕೊಂಡು ಬದುಕಬೇಕು ಎಂದರು.

ಭಾರತ ಆಧ್ಯಾತ್ಮಿಕ ಶ್ರೀಮಂತಿಕೆ ಹೊಂದಿದೆ. 12 ಶತಮಾನದಲ್ಲಿ ಬಸವಾದಿ ಪ್ರಮುಖರು ಮಾನವ ಧರ್ಮದ ಮೂಲ ತಿಳಿಸಿದ್ದಾರೆ. ಯಾರಿಗೂ ತೊಂದರೆ ಕೊಡದೆ, ನೋಯಿಸದಿರುವುದೇ ಧರ್ಮ ಬಸವಾದಿ ಪ್ರಮುಖರು ತಿಳಿಸಿದ ನಂತರ ಎಲ್ಲರೂ ಪರಸ್ಪರ ಬೆರೆಯುವಂತಾಯಿತು ಎಂದು ತಿಳಿಸಿದರು.

ಹೆಚ್.ಡಿ.ಕೋಟೆ ತಾಲೂಕನ್ನು ಆಡಳಿತಾತ್ಮಕ ದೃಷ್ಟಿಯಿಂದ ವಿಭಜಿಸಿದೆಯಾದರೂ ಭಾವನಾತ್ಮಕ ದೃಷ್ಟಿಯಲ್ಲಿ ಸರಗೂರು ಹಾಗೂ ಹೆಚ್.ಡಿ.ಕೋಟೆ ಒಂದೇ ನಾಣ್ಯದ ಮುಖಗಳು ಎಂದರು.

ತಾಲೂಕು ತನ್ನದೇ ಆದ ಇತಿಹಾಸ ಹೊಂದಿದೆ. ಮಲೆ ಮಹದೇಶ್ವರಸ್ವಾಮಿ ಭೇಟಿ ನೀಡಿದ್ದ ಪುಣ್ಯ ಕ್ಷೇತ್ರವಾಗಿದ್ದು, ಧಾರ್ಮಿಕ ಇತಿಹಾಸ ಹೊಂದಿದೆ. ಮುಗ್ಧತೆ, ಪ್ರೀತಿ, ವಿಶ್ವಾಸಗಳನ್ನು ಅವಳಿ ತಾಲೂಕಿನ ಜನತೆ ಹೊಂದಿದ್ದಾರೆ ಎಂದರು.

ಶಾಸಕ ಅನಿಲ್ ಮಾತನಾಡಿ, ತಾಲೂಕಿನಲ್ಲಿ ಹಲವು ಮಠಗಳಿದ್ದು, ಬಿಡುಗಲು ಮಠ ದಾಸೋಹ, ಶಿಕ್ಷಣ ಹಾಗೂ ಬಸವಣ್ಣನವರ ಇಚ್ಛೆಯಂತೆ ನಡೆಯುತ್ತಿದೆ. ಮಠಕ್ಕೆ ಸರ್ಕಾರ ಹಾಗೂ ವೈಯಕ್ತಿಕವಾಗಿ 40 ಲಕ್ಷ ರೂ. ಧನಸಹಾಯ ಮಾಡಲಾಗುವುದು ಎಂದರು. ಸಾಮಾನ್ಯರು ಮದುವೆ ವಿಷಯಕ್ಕೆ ದುಂದು ವೆಚ್ಚಗಳಿಗೆ ಒಳಗಾಗಿ ತೊಂದರೆ ಅನುಭವಿಸುತ್ತಾರೆ. ಇದನ್ನು ತಪ್ಪಿಸಲು ಮಠ, ಮಾನ್ಯಗಳು ಸಾಮೂಹಿಕ ವಿವಾಹ ಏರ್ಪಡಿಸುತ್ತಾ ಬಂದಿವೆ. ಇದು ಪುಣ್ಯದ ಕೆಲಸ ಎಂದರು.


ಬಸವೇಶ್ವರ ಭಾವಚಿತ್ರಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಇನ್ನಿತರರು ಪುಷ್ಪನಮನ ಸಲ್ಲಿಸಿದರು.

ಧರ್ಮ ಉಳಿಸಲು ಮಠಗಳಿಂದ ಮಾತ್ರ ಸಾಧ್ಯ ಮಠಗಳು ಯಾವುದೇ ಜಾತಿ, ಧರ್ಮವಿಲ್ಲದೇ ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಿವೆ. ದೇವರ ಆಶೀರ್ವಾದದಿಂದ ಇನ್ನಷ್ಟು ಕಾರ್ಯಗಳು ನಡೆಯಲಿ ಎಂದು ಆಶಿಸಿದರು.

ಸರ್ಕಾರದಿಂದ ತಾಲೂಕಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ತರಲಾಗುವುದು. ಹೆಚ್.ಡಿ.ಕೋಟೆ ಹಿಂದುಳಿದ ತಾಲೂಕಾಗಿದ್ದು, ಈ ಹಣೆಪಟ್ಟಿ ತೆಗೆಯಲು ತಾಲೂಕಿನ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡುವಂತೆ ಕೇಳಿದ್ದೇನೆ. ನಮ್ಮ ಕುಟುಂಬಕ್ಕೆ ರಾಜಕೀಯ ಶಕ್ತಿಯನ್ನು ನೀಡಿರುವ ತಾಲೂಕಿನ ಜನತೆಗೆ ನಮ್ಮ ಕುಟುಂಬ ಎಂದು ಋಣಿಯಾಗಿದೆ ಎಂದರು.

> ಮಠವು 350 ವರ್ಷಗಳ ಇತಿಹಾಸ ಹೊಂದಿದೆ. ಮಠದಲ್ಲಿ 2007 ರಿಂದ ಇಲ್ಲಿವರೆಗೆ ಪ್ರತಿ ತಿಂಗಳ ಪೌರ್ಣಮೆಯಂದು ವಿಶೇಷ ಪೂಜೆ ಜೊತೆಗೆ ದಾಸೋಹ ನಡೆಸುತ್ತಿದ್ದೇವೆ. ಕಳೆದ 10 ವರ್ಷಗಳಿಂದ ಭಕ್ತರ ಸಹಕಾರದಿಂದ ಪ್ರತಿ ವರ್ಷ ಸಾಮೂಹಿಕ ವಿವಾಹ ನಡೆಸುತ್ತಿದ್ದೇವೆ. ಮಠವು ಗ್ರಾಮೀಣ ಮಕ್ಕಳಿಗಾಗಿ ಎಸ್.ಕೆ.ಜೆ.ಗುರುಕುಲ ವಿದ್ಯಾಶಾಲೆ ತೆರೆದು 1ರಿಂದ 5ನೇ ತರಗತಿವರೆಗೆ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದು, ಭಕ್ತರ ಸಹಕಾರದಿಂದ ಮಠವು ಇನ್ನಷ್ಟು ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. – ಮಹದೇವಸ್ವಾಮಿ, ಪಡವಲು ವಿರಕ್ತ ಮಠ.

ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಮಾತನಾಡಿ, ಎಲ್ಲರೂ ಮಾನವೀಯತೆ ಹಾಗೂ ಸಮಾನತೆ ಬೆಳಸಿಕೊಳ್ಳಬೇಕು. ಧರ್ಮ ಧಾರ್ಮಿಕತೆ ಬೆಳೆಯಬೇಕಾದರೆ ನಾವು ಸಹ ಪರಿಪೂರ್ಣರಾಗಿರಬೇಕು. ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡಬೇಕು ಎಂದರು.

ಬೆಟ್ಟದಪುರದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಮೂಡುಗೂರು ಇಮ್ಮಡಿ ಉದ್ದಾನ ಸ್ವಾಮೀಜಿ, ಕನಕಪುರ ದೇಗುಲ ಮಠದ ಕಿರಿಯ ಚನ್ನಬಸವಸ್ವಾಮೀಜಿ, ಶಾಸಕ ಗಣೇಶ್ ಪ್ರಸಾದ್ ಮಾತನಾಡಿದರು.

ಸಭೆಯಲ್ಲಿ ಮೈಸೂರು, ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯ ವಿವಿಧ ಮಠಾಧೀಶರು ಭಾಗವಹಿಸಿದ್ದರು. ಉದ್ಯಮಿ ಯು.ಎಸ್.ಶೇಖರ್, ಎಸ್‌ಟಿ ಮೋರ್ಚಾ ಬಿಜೆಪಿ ರಾಜ್ಯ ಕಾರ್ಯದರ್ಶಿ ಕೆ.ಎಂ. ಕೃಷ್ಣನಾಯಕ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಅಧ್ಯಕ್ಷ ಬಸವರಾಜು, ಸರಗೂರು ತಾಲೂಕು ಅಧ್ಯಕ್ಷ ವೀರಭದ್ರಪ್ಪ, ಕೋಟೆ ಅಧ್ಯಕ್ಷ ರುದ್ರಣ್ಣ, ಟೌನ್ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್, ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ, ಸರ್ವಸದಸ್ಯರು, ಶ್ರೀ ಕಾಳಒಡೆಯ ಗುರುಗಳ ಸಮಸ್ತ ಭಕ್ತವೃಂದ ಇನ್ನಿತರರಿದ್ದರು. ಭಕ್ತರಿಗೆ ದಾಸೋಹ ಏರ್ಪಡಿಸಲಾಗಿತ್ತು.

ಮೈಸೂರು ಮಿತ್ರ



### ಹುಟ್ಟೂರು ಸಂತೆಶಿವರ ಗ್ರಾಮದಲ್ಲಿ ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಅವರಿಗೆ ಅಭಿನಂದನೆ

# ಪ್ರತಿ ಗ್ರಾಮದಲ್ಲಿ ಎಸ್.ಎಲ್.ಭೈರಪ್ಪರಂತವರು ಹುಟ್ಟಿದರೆ ನಾಡು ಶ್ರೀಮಂತವಾಗುತ್ತದೆ

ಹಾಸನ, ಮಾ.9– ಜನರು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಕಳೆದುಕೊಳ್ಳುವ ಮುಂಚೆ, ಜನರಿಗೆ ಕುಡಿಯುವ ನೀರು, ಭೂಮಿಗೆ ನೀರು, ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಸೂರು, ಒಳ್ಳೆಯ ಗಾಳಿ, ದುಡಿಮೆಗೆ ಒಳ್ಳೆಯ ಬೆಲೆ. ಬದುಕಿನಲ್ಲಿ ಸಾಧನೆ ಮಾಡಲು ಅವಕಾಶ ಮಾಡಿಕೊಳ್ಳದಿದ್ದರೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಕಳೆದುಕೊಳ್ಳುತ್ತಾರೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಭಾನುವಾರ ಹಾಸನ ಜಿಲ್ಲೆಯ ಚನ್ನರಾಯ ಪಟ್ಟಣದ ಸಂತೆಶಿವರ ಗ್ರಾಮದಲ್ಲಿ ಏರ್ಪಡಿಸಿದ್ದ ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಅವರಿಗೆ ಹುಟ್ಟೂರಿನಲ್ಲಿ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬದುಕಿನ ಸಾಕ್ಷಾತ್ಕಾರಕ್ಕೆ ಎರಡು ವಿಷಯ ಬಹಳ ಮುಖ್ಯ, ಒಂದು ಜ್ಞಾನ, ಇನ್ನೊಂದು ಧ್ಯಾನ. ಇವೆರಡರ ಸಾಧನೆಯನ್ನು ನಮ್ಮೆಲ್ಲರ ಅಭಿಮಾನದ ಹಲವಾರು ಪ್ರಶಸ್ತಿಗೆ ಪಾತರಾಗಿರುವ ಎಸ್.ಎಲ್.ಭೈರಪ್ಪ ಒಲಿಸಿಕೊಂಡಿದ್ದಾರೆ. ಬದುಕಿನಲ್ಲಿ ನಮ್ಮ ಮುಗ್ಧತೆ ಕಾಪಾಡಿಕೊಂಡು ಹೋಗುವುದು ಬಹಳ ಕಷ್ಟ, ಮಕ್ಕಳಿದ್ದಾಗ ನಮ್ಮ ಮುಖ ಮುಗ್ಧತೆಯಿಂದ ಕೂಡಿರುತ್ತದೆ. ಯಾಕೆಂದರೆ ಹೃದಯ ಮುಗ್ಧತೆಯಿಂದ ಕೂಡಿರುತ್ತದೆ. ದೊಡ್ಡವರಾದ ಮೇಲೆ ಆಕಾರ ವಿಕಾರ ಆಗಿರುತ್ತದೆ. ಭೈರಪ್ಪರಲ್ಲಿ ಈಗಲೂ ಮಗುವಿನ ಮುಗ್ಧತೆ ಇದೆ. ಆತ್ಮಸಾಕ್ಷಿಯಾಗಿ ನಡೆದುಕೊಳ್ಳುವುದು ಬಹಳ ದೊಡ್ಡ ಸವಾಲು. ರಾಜಕಾರಣಿಗಳಿಗೆ ಆತ್ಮಸಾಕ್ಷಿ ಇರುವುದಿಲ್ಲ. ಭೈರಪ್ಪನವರು ಬದುಕನ್ನು ಅನುಭವಿಸಿ ಬರಹ ಬರೆದಿದ್ದಾರೆ. ಬರಹದಿಂದ ಬದುಕನ್ನು ಶ್ರೀಮಂತಗೊಳಿಸಿದ್ದಾರೆ. ಎಂದು ಬಣ್ಣಿಸಿದರು. ಕನ್ನಡ ನಾಡು ಬಹಳ ಶ್ರೀಮಂತ ಅಂತ ನಾವು ಕರೆಯುತ್ತೇವೆ. ಆರ್ಥಿಕವಾಗಿ ಶ್ರೀಮಂತರಿದ್ದರೆ ಅವರು ಶ್ರೀಮಂತರಲ್ಲ. ಶ್ರೀಮಂತಿಕೆ ವ್ಯಕ್ತಿಯ ಆರ್ಥಿಕ ಶ್ರೀಮಂತಿಕೆಯಿಂದ ಬರುವುದಿಲ್ಲ. ನಮ್ಮ ಸಂಸ್ಕೃತಿ, ಪರಂಪರೆ, ಕನ್ನಡ ನಾಡಿನ ಸಾತ್ವಿಕತೆ, ಕನ್ನಡ ನಾಡಿನಂತಹ ಹೃದಯವಂತ ಜನರು ಜಗತ್ತಿನ ಎಲ್ಲಿಯೂ ಸಿಗುವುದಿಲ್ಲ. ಕನ್ನಡ ನಾಡು ಶ್ರೀಮಂತ ಆಗಿರುವುದು ನಮ್ಮನ್ನಾಳಿದ ಮೈಸೂರು ಮಹಾರಾಜರು, ಹೊಯ್ಸಳರು, ಕದಂಬರು ಈ ನಾಡನ್ನು ಶ್ರೀಮಂತಗೊಳಿಸಿದ್ದಾರೆ. ಅದನ್ನು ಉಳಿಸಿದವರು ಸಾಹಿತಿಗಳು, ಕಲಾವಿದರು, ಶಿಲ್ಪಿಗಳು ಇದನ್ನು ಶ್ರೀಮಂತ ವಾಗಿಟ್ಟಿದ್ದಾರೆ. ಫಲವತ್ತಾದ ಮಣ್ಣು, ಅಮೃತದಂತಹ ನೀರು, ಶುದ್ಧವಾದ ಗಾಳಿ, ನಮ್ಮ ಜೀವಂತಿಕೆಯ ಆಧಾರ ಶ್ರೀಮಂತವಾಗಿದೆ. ಅದಕ್ಕೆ ಕನ್ನಡ ನಾಡು ಶ್ರೀಮಂತವಾಗಿದೆ. ಅಂತಹ ಶ್ರೀಮಂತಿಕೆ ಪುತ್ರ ನಮ್ಮೂರಿನಲ್ಲಿ ಹುಟ್ಟಿದ್ದಾರೆ ಎಂದರೆ ಎಲ್ಲರೂ ಪುಣ್ಯವಂತರು ಎಂದು ಹೇಳಿದರು.

ಎಲ್.ಎಲ್.ಭೈರಪ್ಪನವರ 'ಪರ್ವ' ಕಾದಂಬರಿಯನ್ನು ಕಾಲೇಜಿನಲ್ಲಿದ್ದಾಗ ಓದಿದ್ದೆ. ಪರ್ವದಲ್ಲಿ ಸರ್ವಕಾಲಿಕ ಸತ್ಯವನ್ನು ಹೇಳಿದ್ದಾರೆ. ಅವರು ನಮ್ಮೂರಿನ ಕೆರೆ ತುಂಬಿಸುವ ಕೆಲಸ ಮಾಡಿ ಅಂತ ಹೇಳಿದಾಗ ನನ್ನ ಮನಸ್ಸಿಗೆ ನೋವಾಯಿತು. ವಿಶ್ವೇಶ್ವರ ಭಟ್ಟರು ಭೈರಪ್ಪನವರನ್ನು ಕರೆದುಕೊಂಡು ಬಂದಾಗ ಅವರು ನಮ್ಮೂರಿನ ಕೆರೆ ತುಂಬಿಸಿ ಎಂದು ಕೇಳಿದಾಗ ನಾನು ಮಾಡಲೇಬೇಕು ಎಂದು ಮನಪೂರ್ವಕವಾಗಿ ಕೆಲಸ ಮಾಡಿದೆ. ಅತ್ಯಂತ ಸಂವೇದನಾ ಶೀಲ ಸಾಹಿತಿಗಳು ಏನು ಬೇಕಾದರೂ ಕೇಳಬಹುದಿತ್ತು. ಅವರು ಬಿಡಿಎ ಸೈಟ್ ಕೇಳಬಹುದಿತ್ತು ಆದರೆ, ಅವರು ನನ್ನೂರಿಗೆ ನೀರು ಕೊಡಿ ಸ್ವಾಮಿ ಎಂದು ಕೇಳಿದರು. ಭೈರಪ್ಪನವರು ತಮ್ಮ ಬೇರನ್ನು ಎಂದೂ ಮರೆತಿಲ್ಲ. ತಮ್ಮ ಊರಿನ ಜನರು, ತಂದೆ ತಾಯಿಯನ್ನು ಮರೆತಿಲ್ಲ ಊರಿನ ಕೆರೆ ಮರೆತಿಲ್ಲ, ಎನ್ನುವುದಕ್ಕೆ ಇದೇ ಸಾಕ್ಷಿ. ಕನ್ನಡ ನಾಡಿನ ಪ್ರತಿ ಯೊಂದು ಗ್ರಾಮದಲ್ಲಿ ಎಸ್.ಎಲ್. ಭೈರಪ್ಪನಂಥವರು ಹುಟ್ಟಿದರೆ, ಈ ನಾಡು ಎಷ್ಟು ಆಗರ್ಭ ಶ್ರೀಮಂತ ಆಗುತ್ತಿತ್ತು ಇವತ್ತಿನ ಕಾರ್ಯಕ್ರಮ ಅದಕ್ಕೆ ಪ್ರೇರಣೆ ಕೊಡಬೇಕು ಎಂದರು.

ನನ್ನ ರಾಜಕೀಯ ಗುರುಗಳು ನನಗೆ ಮಾರ್ಗದರ್ಶನ ಮಾಡಿದ್ದು, ಮಾಜಿ ಪ್ರಧಾನಿ ದೇವೇಗೌಡರು. ಅವರ ಜೊತೆ ನಾನು ಸುಮಾರು 20 ವರ್ಷ ನಿಕಟವಾಗಿ ಕಾರ್ಯ ನಿರ್ವಹಿಸಿದ್ದೇನೆ. ಈಗ ಅವರ ಜಿಲ್ಲೆಯ ಕೆಲಸ ಮಾಡಿದ್ದು ಹೆಮ್ಮೆ ಎನಿಸಿದೆ. ಎಸ್.ಎಲ್.ಭೈರಪ್ಪನವರು ಸದಾಕಾಲ ನಮ್ಮೊಂದಿಗೆ, ದಂತಕತೆಯಾಗಿ ಇರಲಿ. ಅವರ ಬರಹ ಹಾಗೂ ಸಾಹಿತ್ಯದ ಮೂಲಕ ಸದಾ ಜೀವಂತವಾಗಿರುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಸಂಸದ ಶ್ರೇಯಸ್ ಪಟೇಲ್, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಮಾತನಾಡಿದರು. ತಿಪಟೂರು ಶಾಸಕ ಷಡಕ್ಷರಿ, ಉದ್ಯಮಿ ರಮಣಶ್ರೀ ಷಡಕ್ಷರಿ, ಭೈರಪ್ಪನವರ ಪುತ್ರ ಉದಯಶಂಕರ್, ಅಭಿನಂದನಾ ಕಾರ್ಯಕ್ರಮದ ಸಂಚಾಲಕ ಕೃಷ್ಣಪ್ರಸಾದ್, ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಂ.ಎ. ರಂಗಸ್ವಾಮಿ, ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ನವಿಲೆ ಪರಮೇಶ್, ತಾಲ್ಲೂಕು ಘಟಕದ ಅಧ್ಯಕ್ಷ ರಾಜಣ್ಣ( ಗಂಗೇಗೌಡ ), ಶರಣ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಎಸ್, ಚಿರಂಜೀವಿ, ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಹಡೇನಹಳ್ಳಿ ಲೋಕೇಶ್, ಹೋಬಳಿ ಘಟಕದ ಅಧ್ಯಕ್ಷ ದೊರೆಸ್ವಾಮಿ, ಸಬ್ ಇನ್‌ಸ್ಪೆಕ್ಟರ್ ಭರತ್ ರೆಡ್ಡಿ ಸೇರಿದಂತೆ ಇತರರು ಹಾಜರಿದ್ದರು.

**ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶ್ಲಾಘನೆ**



ಪ್ರಸಿದ್ಧ ಕಾದಂಬರಿಕಾರ ಎಸ್.ಎಲ್.ಬೈರಪ್ಪನವರ ಅಭಿನಂದನಾ ಸಮಾರಂಭವನ್ನು ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಉದ್ಘಾಟಿಸಿದರು.

> ಎಸ್.ಎಲ್. ಭೈರಪ್ಪ ಅವರನ್ನು ನಾವು ಮೈಸೂರಿನವರೇ ಎಂದು ತಿಳಿದಿದ್ದೆವು. ಆದರೆ ಅವರ ಹುಟ್ಟೂರು ಸಂತೇಶಿವರ ಗ್ರಾಮ ಎಂಬುದು ಈಗ ತಿಳಿಯಿತು. ಅವರ ಸಾಹಿತ್ಯದಲ್ಲಿ ಧರ್ಮ ಹಾಗೂ ಸಂಸ್ಕೃತಿಯ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಜೊತೆಗೆ ರಾಜರ ಆಳ್ವಿಕೆಯ ಬಗ್ಗೆಯೂ ತಮ್ಮ ಕಾದಂಬರಿಗಳಲ್ಲಿ ಬರೆದಿದ್ದಾರೆ. ಅವರ ನಿಸ್ವಾರ್ಥ ಸೇವೆಯನ್ನು ಗುರುತಿಸುವ ಮೂಲಕ ಗ್ರಾಮದ ವತಿಯಿಂದ ಸನ್ಮಾನಿಸುತ್ತಿರುವುದು ಶ್ಲಾಘನೀಯ. ನಮ್ಮ ಮೈಸೂರು ಸಂಸ್ಥಾನದ ವತಿಯಿಂದ ಹಿಂದಿನ ಮಹಾರಾಜರು ರಾಜ್ಯದ ಅನೇಕ ಕಡೆಗಳಲ್ಲಿ ಜಲಾಶಯಗಳು ಸೇರಿದಂತೆ ಕೆರೆಕಟ್ಟೆಗಳನ್ನು ಕಟ್ಟಿದ್ದಾರೆ. ಇದರಿಂದ ರಾಜ್ಯದಲ್ಲಿ ಕೃಷಿಗೆ ಹೆಚ್ಚಿನ ಅನುಕೂಲವಾಗಿದೆ.
>
> - ಯದುವೀರ್, ಸಂಸದರು.

> ಈ ಭಾಗದ ರೈತರ ದಶಕದ ಕನಸು ಈಡೇರಿದೆ. ನಾನು ನನ್ನ ಹುಟ್ಟೂರಿನ ಜನರಿಗೆ ಶಾಶ್ವತ ಯೋಜನೆ ಮಾಡಬೇಕೆನ್ನುವ ಉದ್ದೇಶದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಈ ಹಂಗಾಮಿನಿಂದಲೇ ಗ್ರಾಮದ ಕೆರೆಗೆ ಈ ಯೋಜನೆಯ ಮೂಲಕ ನೀರು ಬರುತ್ತಿದೆ. ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ. ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ್ ಬೊಮ್ಮಾಯಿ ಸಹಕಾರದಿಂದ ಯೋಜನೆಗೆ ಅನುಮೋದನೆ ದೊರೆಯಿತು. ಇಂದಿನ ರಾಜ್ಯ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಣ ಬಿಡುಗಡೆ ಮಾಡುವ ಮೂಲಕ ಯೋಜನೆ ಅನುಷ್ಠಾನಗೊಳ್ಳಲು ಪಕ್ಷಾತೀತವಾಗಿ ಸಹಕಾರ ನೀಡಿದ್ದಾರೆ.
>
> -ಎಸ್.ಎಲ್.ಭೈರಪ್ಪ, ಹಿರಿಯ ಸಾಹಿತಿ

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ರಾಕ್ಷಸ (ಕ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ರಾಕ್ಷಸ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಬಡಾಸ್ ರವಿಕುಮಾರ್ (ಹಿಂ) | 3 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ರಾಕ್ಷಸ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಭಾವಾ (ಹಿಂ) | 4 ಪ್ರದರ್ಶನಗಳು |
| **ರಾಜಕಮಲ್** | |
| ಶಬ್ದಂ(ತ) | 4 ಪ್ರದರ್ಶನಗಳು |
| **ಸಂಗಂ** | |
| ಕಪಾತಿ (ಕ)+ ಸೂರಿ ಲವ್ಸ್ ಸಂಧ್ಯಾ(ಕ) | 2+2 ಪ್ರದರ್ಶನಗಳು |
| **ಲಿಡೋ** | |
| ಡಾಕೂ ಮಹಾರಾಜ್(ತೆ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ರಾಕ್ಷಸ (ಕ) | 4 ಪ್ರದರ್ಶನಗಳು |
| **ಪ್ರಭಾ** | |
| ಭಗೀರಥ (ಕ) | 4 ಪ್ರದರ್ಶನಗಳು |

### DRC CINEMAS ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ. |
| ಸ್ಕ್ರೀನ್ 2 | ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ. |
| ಸ್ಕ್ರೀನ್ 3 | ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ. |
| ಸ್ಕ್ರೀನ್ 4 | ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೇಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ. |

### INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### MVC ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ. |
| ಸ್ಕ್ರೀನ್ 2 | ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ. |
| ಸ್ಕ್ರೀನ್ 3 | ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ. |
| ಸ್ಕ್ರೀನ್ 4 | ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ. |

### PVR CINEMAS ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಬೇಸಿಗೆ ಹಿನ್ನೆಲೆ: ಕೆಆರ್‌ಎಸ್, ಕಬಿನಿ ಜಲಾಶಯದಲ್ಲಿ ಕುಸಿಯುತ್ತಿರುವ ನೀರಿನ ಮಟ್ಟ



ಮೈಸೂರು, ಮಾ.9(ಬಿಎಲ್‌ಯು)– ಬೇಸಿಗೆ ಕಾಲ ಆರಂಭವಾಗಿರುವ ಹಿನ್ನೆಲೆ ಮಂಡ್ಯದ ಕೆಆರ್‌ಎಸ್ ಹಾಗೂ ಮೈಸೂರಿನ ಕಬಿನಿ ಜಲಾಶಯದಲ್ಲಿ ನೀರಿನ ಮಟ್ಟ ಕಡಿಮೆಯಾಗುತ್ತಿದೆ.

ಕೆಆರ್‌ಎಸ್‌ನ ಗರಿಷ್ಠ ನೀರಿನ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 111.74 ಅಡಿಗಳಾಗಿದೆ. ಜಲಾಶಯದಲ್ಲಿ 49.452 ಟಿಎಂಸಿ ನೀರು ಸಂಗ್ರಹಣೆಯ ಸಾಮರ್ಥವಿದ್ದು, ಇಂದು 33.508 ಟಿಎಂಸಿ ನೀರು ಸಂಗ್ರಹವಿದೆ.

ಕಾವೇರಿ ನದಿಗೆ ನೀರಿನ ಮೂಲವಾದ ಕೊಡಗಿನಲ್ಲಿ ಮಳೆಯಾಗದ ಕಾರಣ ಕೆಆರ್‌ಎಸ್ ಜಲಾಶಯಕ್ಕೆ 240 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಕುಡಿಯುವ ನೀರು ಮತ್ತು ಕಾಲುವೆಗಳಿಗೆ ಜಲಾಶಯದಿಂದ 1048 ಕ್ಯೂಸೆಕ್ ನೀರು ಬಿಡಲಾಗುತ್ತಿದೆ.

ಮೈಸೂರಿನ ಹೆಚ್.ಡಿ.ಕೋಟೆಯ ಕಬಿನಿ ಜಲಾಶಯದಲ್ಲಿ ಕೂಡ ಇದೇ ಪರಿಸ್ಥಿತಿ ಇದೆ. ಕಬಿನಿ ಜಲಾಶಯದ ಗರಿಷ್ಠ ಮಟ್ಟ 2284 ಅಡಿಗಳಾಗಿದ್ದು, ಇಂದಿನ ಮಟ್ಟ 2273.2 ಅಡಿ ನೀರು ಇದೆ.

ಜಲಾಶಯದಲ್ಲಿ 19.52 ಟಿಎಂಸಿ ನೀರು ಸಂಗ್ರಹದ ಸಾಮರ್ಥ್ಯವಿದೆ. ಈಗ ಜಲಾಶಯದಲ್ಲಿ 13.31 ಟಿಎಂಸಿ ನೀರಿನ ಸಂಗ್ರವಾಗಿದೆ. ಕಬಿನಿ ಜಲಾಶಯಕ್ಕೆ ನೀರಿನ ಮೂಲವಾದ ಕೇರಳದ ವೈನಾಡು ಪ್ರದೇಶದಲ್ಲಿ ಮಳೆ ಇಲ್ಲದ ಕಾರಣ ಜಲಾಶಯಕ್ಕೆ ಕೇವಲ 69 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಆದರೆ ಕುಡಿಯುವ ನೀರು ಮತ್ತು ಕಾಲುವೆಗಳಿಗೆ 1,500 ಕ್ಯೂಸೆಕ್ ನೀರನ್ನು ಹೊರಗೆ ಬಿಡಲಾಗುತ್ತಿದೆ.

ಬೇಸಿಗೆ ಆರಂಭದಲ್ಲೇ ಎರಡು ಜಲಾಶಯದಲ್ಲಿ ನೀರಿನ ಮಟ್ಟ ಕಡಿಮೆಯಾಗುತ್ತಿದೆ ಮುಂದಿನ ದಿನಗಳಲ್ಲಿ ನೀರಿನ ಮಟ್ಟ ಮತ್ತಷ್ಟು ಕಡಿಮೆಯಾಗಲಿದೆ. ಮಾರ್ಚ್ ತಿಂಗಳಾಂತ್ಯಕ್ಕೆ ಎರಡು ಮಳೆಯಾಗಬೇಕು. ತರುವಾಯ ಏಪ್ರಿಲ್‌ನಲ್ಲಿ ಸ್ವಲ್ಪ ಮಳೆ ಬರಬೇಕು. ವಾಡಿಕೆಯಂತೆ ಇಷ್ಟು ಮಳೆಯಾದರೆ ಕೆಆರ್‌ಎಸ್ ಮತ್ತು ಕಬಿನಿ ಜಲಾಶಯದಲ್ಲಿ ನೀರಿನ ಮಟ್ಟ ಹೆಚ್ಚಾಗಲಿದೆ. ಒಂದು ವೇಳೆ ವಾಡಿಕೆ ಮಳೆಯಾಗದಿದ್ದರೆ ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿ ಕುಡಿಯುವ ನೀರಿಗೆ ತೊಂದರೆಯಾಗಬಹುದು.

## ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಆರು ಹುಲಿ ಮರಿ ಜನನ

ಆನೇಕಲ್, ಮಾ.9– ಬನ್ನೇರುಘಟ್ಟ ಜೈವಿಕ ಉದ್ಯಾನದ ಎರಡು ಹುಲಿಗಳು ಕಳೆದ ತಿಂಗಳು ಎರಡು ದಿನಗಳ ಅಂತರದಲ್ಲಿ ಆರು ಮರಿಗಳಿಗೆ ಜನ್ಮ ನೀಡಿವೆ. ಇದರಿಂದಾಗಿ ಜೈವಿಕ ಉದ್ಯಾನಕ್ಕೆ ಒಟ್ಟು ಆರು ಮರಿಗಳು ಸೇರ್ಪಡೆಯಾಗಿದ್ದು, ಉದ್ಯಾನದಲ್ಲಿ ಹುಲಿಗಳ ಸಂಖ್ಯೆ 19ಕ್ಕೆ ಏರಿದಂತಾಗಿದೆ. ಆರು ವರ್ಷದ 'ಹಿಮಾ' ಫೆಬ್ರುವರಿ 14ರಂದು ನಾಲ್ಕು ಮರಿಗಳಿಗೆ ಹಾಗೂ 'ಅರಣ್ಯ' ಎಂಬ ಮತ್ತೊಂದು ಹುಲಿ ಫೆ.16ರಂದು ಎರಡು ಮರಿಗಳಿಗೆ ಜನ್ಮ ನೀಡಿದೆ. ತಾಯಿ ಮತ್ತು ಮರಿಗಳು ಆರೋಗ್ಯವಾಗಿವೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದರು.

## ಜೀವನ ರೂಪಿಸಿಕೊಳ್ಳಲು ವಚನಗಳು ಪ್ರೇರಣೆ

**ಪುಸ್ತಕಗಳ ಬಿಡುಗಡೆ, ವಿವಿಧ ಪ್ರಶಸ್ತಿ ಪ್ರದಾನ**



ಮೈಸೂರಿನ ರೋಟರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಧಕರಿಗೆ ಪ್ರಶಸ್ತಿಗಳನ್ನು ನೀಡಿ, ಅಭಿನಂದಿಸಲಾಯಿತು.

ಮೈಸೂರು, ಮಾ.9(ಜಿಎ)–ಉತ್ತಮ ಜೀವನವನ್ನು ರೂಪಿಸಿಕೊಳ್ಳಲು ವಚನಗಳು ಪ್ರೇರಣೆ ನೀಡ ಲಿವೆ ಎಂದು ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಮತ್ತು ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಎಂ.ಬಿ.ಸಂತೋಷ್ ರಚಿಸಿರುವ 'ವಚನ ವೈವಿಧ್ಯ' 6ನೇ ಆಧುನಿಕ ವಚನಗಳ ಸಂಕಲನ ಹಾಗೂ ಬಿ.ಶೋಭಾ ಅವರು ರಚಿಸಿರುವ 'ಮನದ ಹಾಯ್ಕುಗಳು' ಚೊಚ್ಚಲ ಹಾಯ್ಕುಗಳ ಸಂಕಲನವನ್ನು ಬಿಡುಗಡೆ ಗೊಳಿಸಿ ಅವರು ಮಾತನಾಡಿದರು.

ಕವಿ ಪಂಪನಿಂದ ಆರಂಭವಾದ ಕಾವ್ಯದ ಪರಂಪರೆ ಇಂದಿಗೂ ಪ್ರಸ್ತುತವಾಗಿದೆ. ಅದಕ್ಕೆ ಕಾಲ ಕಾಲಕ್ಕೆ ತಕ್ಕಂತೆ ವಿವಿಧ ಆಯಾಮಗಳಾಗಿ ಗುರುತಿಸಿಕೊಂಡಿವೆ. ಯಾವುದೇ ಶ್ರೇಷ್ಠ ಕವಿಯಾದರೂ ಕಾವ್ಯ ಅವರಿಗೆ ಪ್ರಾಥಮಿಕವಾಗಿದೆ. ಬಸವಣ್ಣ ಹಾಗೂ ವಚನಕಾರರು 12ನೇ ಶತಮಾನದಲ್ಲಿಯೇ ಎಲ್ಲ ಕಾಲಕ್ಕೂ ಪ್ರಸ್ತುತವಾಗುವಂತಹ ವಚನಗಳನ್ನು ಕೊಟ್ಟಿದ್ದಾರೆ. ವಚನಗಳಿಂದ ಸಮಾಜದ ಮಹತ್ವವನ್ನು ತಿಳಿದುಕೊಂಡು ಬರುತ್ತಿದ್ದೇವೆ. ವಚನಗಳು ವೈವಿಧ್ಯಮಯದಿಂದ ಕೂಡಿದೆ. ಎಂ.ಬಿ.ಸಂತೋಷ್ ಅವರು ಬರೆದಿರುವ ವಚನ ವೈವಿಧ್ಯ ಪುಸ್ತಕಗಳು, ಪ್ರಸ್ತುತದಲ್ಲಿ ಸಮಾಜದಲ್ಲಿ ನಡೆಯುತ್ತಿರುವ ವ್ಯವಸ್ಥೆಗಳನ್ನು ತೋರಿಸುತ್ತಿದೆ ಎಂದರು.

ಪಂಪನಿಂದ ಹಿಡಿದು ದ.ರಾ.ಬೇಂದ್ರೆ, ಕುವೆಂಪು, ಜಿ.ಎಸ್.ಶಿವರುದ್ರಪ್ಪ ಸೇರಿದಂತೆ, ಹಲವಾರು ಕವಿಗಳು ಕನ್ನಡದ ಪರಂಪರೆ ಬೆಳೆಯುವಂತೆ ಮಾಡಿದ್ದಾರೆ. ಕನ್ನಡ ಸಾಹಿತ್ಯ ಮತ್ತು ವಚನಗಳು ಎಂದಿಗೂ ಜನರ ಮನಸಿಗೆ ಮುದು ನೀಡುವುದರ ಜೊತೆಗೆ ಜ್ಞಾನವನ್ನು ಬೆಳಸುತ್ತಿವೆ ಎಂದು ತಿಳಿಸಿದರು.

ಎಂ.ಬಿ.ಸಂತೋಷ್ ಅವರು ಶಿಕ್ಷಕರಾದರೂ, ಸಾಹಿತ್ಯ ಪ್ರವೃತ್ತಿಯಿಂದ ಗುರುತಿಸಿಕೊಂಡವರು. ಸಾಧನೆ ಮಾಡಿ ಎಲೆಮರೆ ಕಾಯಿಯಂತೆ ಕೆಲಸ ಮಾಡುತ್ತಿರುವ ವ್ಯಕ್ತಿಗಳನ್ನು ಗುರುತಿಸಿ, ಗೌರವಿಸುತ್ತಿರುವುದರಿಂದ ಸಾಧನೆಗೆ ಸ್ಫೂರ್ತಿ ಹಾಗೂ ಚೈತನ್ಯ ನೀಡಿದಂತಾಗಿದೆ ಎಂದರು.

ಮಹಿಪಾಲರೆಡ್ಡಿ ಮನ್ನೂರ್‌ರಿಗೆ ಕರುನಾಡ ಸಾಧನಾ ರತ್ನ ಪ್ರಶಸ್ತಿ, ಡಾ.ಮಲ್ಲಿನಾಥ ಎಸ್.ತಳವಾರರಿಗೆ ಕರುನಾಡ ಸಾಹಿತ್ಯ ರತ್ನ ಪ್ರಶಸ್ತಿ, ಡಾ.ಸೋಮಶೇಖರ್‌ಗೆ ವಿದ್ಯಾವಾರಿಧಿ ಪ್ರಶಸ್ತಿ, ಉಳುವಂಗಡ ಕಾವೇರಿ ಉದಯಗೆ ಬಹುಭಾಷಾ ಸಾಹಿತ್ಯ ಚೇತನ ಪ್ರಶಸ್ತಿ, ಕೆ.ಎನ್.ಹಿತೈಶ್ ಭೂಷಣ್ ಮತ್ತು ರೋನಿತ್ ಟಿ.ಗಿರೀಶ್‌ಗೆ ಬಾಲಶ್ರೀ, ಹೆಚ್.ಎನ್.ನಾಗಸಿರಿ ಮತ್ತು ವಿ.ಭುವಂತ್‌ಗೆ ಯುವಶ್ರೀ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ವಚನ ವೈವಿಧ್ಯ ಆಧುನಿಕ ವಚನಗಳ ಸಂಕಲನ ಕುರಿತು ಬಿ.ಶೋಭಾ, ಶೋಭಾ ಅವರ ಮನದ ಹಾಯ್ಕುಗಳು ಸಂಕಲನ ಕುರಿತು ಡಾ.ಮಲ್ಲಿನಾಥ ಎಸ್.ತಳವಾರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಸಿ.ವಾಣಿ ರಾಘವೇಂದ್ರ, ಉಪಾಧ್ಯಕ್ಷರಾದ ಎ.ಹೇಮಗಂಗಾ, ಡಾ.ಸೌಗಂಧಿಕಾ ವಿ.ಜೋಯಿಸ್, ಕವಯತ್ರಿ ಎನ್.ಆರ್.ರೂಪಶ್ರೀ, ವಿದುಷಿ ಎಸ್.ವಿ.ಪನ್ನಗ, ಸಂಚಾಲಕ ಪರಮೇಶ ಕೆ.ಉತ್ತನಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

## ಮೈಸೂರಲ್ಲಿ ಸರ್ವಂ ಶ್ರೀಕೃಷ್ಣ ಮಯಂ ಜಗತ್ ನೃತ್ಯಪ್ರದರ್ಶನ



ವೈಣಿಕ ವಿದ್ವಾನ್ ಡಾ.ಆರ್.ವಿಶ್ವೇಶ್ವರನ್, ಕರ್ನಾಟಕ ಕಲಾಶ್ರೀ ಡಾ.ಮಾಲಾ ಶಶಿಕಾಂತ ಅವರನ್ನು ನೃತ್ಯಾಲಯ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು, ಮಾ.9(ಎಸ್‌ಪಿಎನ್)– ಕೇಂದ್ರ ಸಂಗೀತ, ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ವೈಣಿಕ ವಿದ್ವಾನ್ ಡಾ.ಆರ್.ವಿಶ್ವೇಶ್ವರನ್, ಬೆಂಗಳೂರು ಕೈಶಿಕಿ ನೃತ್ಯವಾಹಿನಿ ಸಂಸ್ಥೆಯ ಕರ್ನಾಟಕ ಕಲಾಶ್ರೀ ಡಾ.ಮಾಲಾ ಶಶಿಕಾಂತ ಅವರನ್ನು ನೃತ್ಯಾಲಯ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು ಕುವೆಂಪುನಗರದ ಗಾನ ಭಾರತಿ ಆವರಣದ ರಮಾಬಾಯಿ ಗೋವಿಂದರಾವ್ ಕಲಾವೇದಿಕೆಯಲ್ಲಿ ನೃತ್ಯಾಲಯ ಟ್ರಸ್ಟ್ ವತಿಯಿಂದ ನಡೆದ ನಲಿವಿನ ಪಯಣ–46 ಶೀರ್ಷಿಕೆಯಡಿ ಸರ್ವಂ ಶ್ರೀಕೃಷ್ಣಮಯಂ ಜಗತ್ ನೃತ್ಯಪ್ರದರ್ಶನ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಹಿರಿಯ ಕಲಾವಿದ ವಿದ್ವಾನ್ ಡಾ.ಆರ್. ವಿಶ್ವೇಶ್ವರನ್, ಸಂಗೀತ ನರ್ತನ ಕಲೆಗಳಿಂದ ಕಲಾ ಸೌಂದರ್ಯದ ವಿಶಿಷ್ಟ ಸುಖ ಸಂತೋಷ ಲಭಿಸುತ್ತದೆ. ಅಂತೆಯೇ ಸಂಗೀತದಿಂದ ಆಧ್ಯಾತ್ಮಿಕ ಅನುಭವವೂ ದೊರಕುತ್ತದೆ. ಮನುಷ್ಯನ ಮನಸು ಮೇಲಕ್ಕೇರಲು ಕಲೆ ಸಹಾಯವಾಗುತ್ತದೆ ಎಂದರು.

ಕೈಶಿಕಿ ನೃತ್ಯವಾಹಿನಿಯ ಮಾಲಾ ಶಶಿಕಾಂತ ಮಾತನಾಡಿ, ಕಲಾವಿದರಲ್ಲಿ ಸಣ್ಣವರು, ದೊಡ್ಡವರು ಎಂಬ ಭೇದ–ಭಾವ ಇರಬಾರದು ಎಂದು ಕಲಾಪೋಷಕರಲ್ಲಿ ಮನವಿ ಮಾಡಿದರು.

ನೃತ್ಯಾಲಯ ತಂಡದ ಶಶಿರೇಖ ಕುಲಕರ್ಣಿ, ದೇಬಶ್ರೀ ಆಚಾರ್ಯ ಚಕ್ರಬೋರ್ತಿ, ಶ್ಯಾಮಲ ಶೇಷಗಿರಿ ಸೇರಿದಂತೆ ಇತರೆ ಕಲಾವಿದರಿಂದ ಶ್ರೀಹರಿ ಭಜನೆ, ಸರ್ವಂ ಶ್ರೀಕೃಷ್ಣಮಯಂ ಜಗತ್ ಸಂಗೀತ ನೃತ್ಯ ಕಾರ್ಯಕ್ರಮ ನಡೆಯಿತು.

ನಲಿವಿನ ಪಯಣ–46 ಕಾರ್ಯಕ್ರಮ ಹಿಮ್ಮೇಳದಲ್ಲಿ ನಟುವಾಂಗ ಡಾ.ತುಳಸೀ ರಾಮಚಂದ್ರ, ಹಾಡುಗಾರಿಕೆ ವಿದುಷಿ ಧರಿತ್ರೀ ಆನಂದರಾವ್, ಕೊಳಲು ವಿದ್ವಾನ್ ಎ.ಪಿ.ಕೃಷ್ಣಪ್ರಸಾದ್, ಮೃದಂಗ ವಿದ್ವಾನ್ ಎಚ್.ಎಲ್. ಶಿವಶಂಕರ್, ಪಿಟೀಲು ವಿದ್ವಾನ್ ಗುರುದತ್, ತಬಲ ವಿದ್ವಾನ್ ಭೀಮಾ ಶಂಕರ, ಪಿಟೀಲು ವಿದ್ವಾನ್ ಅರ್ಜುನ್ ಕುಮಾರ್, ಧ್ವನಿ ಮತ್ತು ಬೆಳಕು ಸವಿನ್ ಹಿಲ್ಸ್, ಬೆಳಕು ಸಂಯೋಜನೆ ದ್ವಾರಕಾನಾಥ್, ವೇಷಭೂಷಣ ಸಹಕಾರ ಮಹಾಲಿಂಗ ಇದ್ದರು. ವೇದಿಕೆಯಲ್ಲಿ ನೃತ್ಯಾಲಯ ಟ್ರಸ್ಟ್ ಅಧ್ಯಕ್ಷ ಡಾ.ತುಳಸೀ ರಾಮಚಂದ್ರ, ವಿದುಷಿ ಡಾ.ವಸುಂಧರಾ ದೊರೆಸ್ವಾಮಿ, ಹಿರಿಯ ಕಲಾವಿದ ಪ್ರೊ ಕೆ.ರಾಮಮೂರ್ತಿ ರಾವ್, ವಿದುಷಿ ಶುಭಧನಂಜಯ, ಉಪಾಧ್ಯಕ್ಷ ಶ್ರೀಕಾಂತ್, ಕಾರ್ಯದರ್ಶಿ ಎಂ.ಸತೀಶ್ ಸಾಂಬಮೂರ್ತಿ, ಉಪಾಪಂ ಚನದನ್, ಸಹ ಕಾರ್ಯದರ್ಶಿ ಸಂಗೀತ ಕೇಶವ್, ರಮ್ಯಾ ಅಭಿಜಿತ್ ಸೇರಿದಂತೆ ಇತರರಿದ್ದರು.

# ಶ್ರೀ ವೀರ ಮಡಿವಾಳ ಮಾಚೀದೇವರ ಜಯಂತೋತ್ಸವ; ಪ್ರತಿಭಾ ಪುರಸ್ಕಾರ

**ಸಮಾಜಕ್ಕೆ ಮೌಲ್ವಿಕ ಸಂದೇಶ ನೀಡಿದವರು ಮಡಿವಾಳ ಮಾಚೀದೇವರು: ಆಧ್ಯಾತ್ಮ ಚಿಂತಕ ಶಂಕರ್ ದೇವನೂರು**




ಮೈಸೂರಿನ ಶ್ರೀರಾಂಪುರ 2ನೇ ಹಂತದಲ್ಲಿ ಶ್ರೀ ವೀರ ಮಡಿವಾಳ ಮಾಚೀದೇವರ ಜಯಂತೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಮೈಸೂರು, ಮಾ.9(ಎಂಕೆ)– ಮೈಸೂರಿನ ಶ್ರೀರಾಂಪುರ 2ನೇ ಹಂತದಲ್ಲಿ (ಅಶೋಕ ಪುರಂ ರೈಲ್ವೆ ನಿಲ್ದಾಣದ ಎದುರು) ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಾ.ಯತೀಂದ್ರ ಸಿದ್ದರಾಮಯ್ಯನವರ ಅಭಿಮಾನಿಗಳ ಬಳಗದ ವತಿಯಿಂದ ಶ್ರೀ ವೀರ ಮಡಿವಾಳ ಮಾಚೀದೇವರ ಜಯಂತೋತ್ಸವ ಹಾಗೂ ಮಡಿವಾಳ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಆಧ್ಯಾತ್ಮ ಚಿಂತಕ ಶಂಕರ್ ದೇವನೂರು ಮಾತನಾಡಿ, ಅರಸುತನ ಮೇಲಲ್ಲ. ಅಗಸತನ ಕೀಳಲ್ಲ ಎಲ್ಲವೂ ಒಂದೇ ಎಂಬ ಮೌಲ್ವಿಕ ಚಿಂತನೆಯನ್ನು ಜಗತ್ತಿಗೆ ಕೊಟ್ಟ ದಾರ್ಶನಿಕ ಮಡಿವಾಳ ಮಾಚೀದೇವರು. ವಚನಗಳ ರಕ್ಷಣೆ, ಜ್ಞಾನದ ಸಂರಕ್ಷಣೆಗಾಗಿ ಖಡ್ಗ ಹಿಡಿದವರು. ಇದು ಜಗತ್ತಿನ ಇತಿಹಾಸದಲ್ಲೇ ಮೊದಲು ಎಂದು ಸ್ಮರಿಸಿದರು.

ಭಾರತದ ಧಾರ್ಮಿಕ ಇತಿಹಾಸದಲ್ಲಿ 12ನೇ ಶತಮಾನದ ಶರಣರ ವಚನಗಳು, ತತ್ವಗಳು ಮಾನವೀಯವಾದದ್ದು. ನಾಡು ಕಂಡ ಮಹತ್ವದ ಕಾಲಘಟ್ಟವಾಗಿದೆ. ಯಾವುದಾದರೂ ಒಂದು ಭೂತಕಾಲದಲ್ಲಿ ಶತಮಾನವನ್ನು ಸ್ಮರಿಸಿ ರೋಮಾಂಚನಗೊಳ್ಳುವುದಾದರೆ ನನ್ನ ದೃಷ್ಟಿಯಲ್ಲಿ ಅದು 12ನೇ ಶತಮಾನವಾಗಿದೆ. ಅಲ್ಲಿ ಮನಸ್ಸುಗಳು ಜೀವಂತವಾಗಿದ್ದವು. ಸೃಜನಶೀಲತೆ ಇತ್ತು. ಆದರೆ, ಇವತ್ತು ಆಧುನಿಕ ತಂತ್ರಜ್ಞಾನ–ವಿಜ್ಞಾನ ಬೆಳೆದಿದ್ದರೂ ನಮ್ಮ ಮನಸ್ಸುಗಳು ಜಢವಾಗಿದೆ ಎಂದು ವಿಷಾದಿಸಿದರು.

12ನೇ ಶತಮಾನದಲ್ಲಿ ಬಡತನ ಇದ್ದರೂ ಮನಸ್ಸುಗಳು ಕ್ರೀಯಾಶೀಲವಾಗಿದ್ದವು. ಇವತ್ತು ಹಣ, ಆಸ್ತಿ, ಅಂತಸ್ತು ಇದ್ದರೂ ಸಂಬಂಧಗಳು ಛಿದ್ರ ಛಿದ್ರವಾಗಿವೆ. ಮಾನವ ಶಕ್ತಿಯ ಪೂರ್ಣ ವಿಕಾಸಕ್ಕೆ ಕಾರಣವಾಗುವ ಮಾರ್ಗವನ್ನು 12ನೇ ಶತಮಾನದ ಶರಣರು ಕಂಡುಕೊಂಡಿದ್ದರು. ಅಂತಹ ಶರಣರ ಸಂಕುಲದಲ್ಲಿ ಅಗ್ರಗಣ್ಯರಾದವರು ಮಡಿವಾಳ ಮಾಚೀದೇವರು ಎಂದು ಸ್ಮರಿಸಿದರು. ಬಳಿಕ ಕಾರ್ಯಕ್ರಮ ಉದ್ಘಾಟಿಸಿದ ಚಿತ್ರದುರ್ಗ ಮಡಿವಾಳ ಗುರುಪೀಠದ ಶ್ರೀ ಬಸವ ಮಾಚೀದೇವ ಮಹಾಸ್ವಾಮೀಜಿ ಆಶೀರ್ವಚನ ನೀಡಿದರು. ನಂತರ ಮಡಿವಾಳ ಸಮಾಜದ ಪ್ರತಿಬಾನ್ವಿತ 130 ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಮಡಿವಾಳ ಸಮಾಜದ ಮುಖಂಡ ಹಾಗೂ ಉದ್ಯಮಿ ಎ.ಎಸ್.ರವಿಕುಮಾರ್, ಯುವ ಮುಖಂಡ ಸಂತೋಷ್ ಕಿರಾಳು, ಬೃಂದಾವನ ಬಡಾವಣೆ ಮಡಿವಾಳರ ಸಂಘದ ಅಧ್ಯಕ್ಷ ಸಿ.ಎಸ್. ಮಹೇಶ್, ಹುಣಸೂರು ತಾಲೂಕು ಮಡಿವಾಳ ಸಂಘದ ಅಧ್ಯಕ್ಷ ರವಿ ಚಿಲ್ಕುಂದ, ಹುಣಸೂರು ತಾಲೂಕು ಮಡಿವಾಳರ ಸಂಘ ಕಾರ್ಯದರ್ಶಿ ರಘುರಾಮನಹಳ್ಳಿ, ಪಾಂಡವಪುರ ತಾಲೂಕು ಮಡಿವಾಳ ಸಂಘದ ಅಧ್ಯಕ್ಷ ರಾಮಚಂದ್ರ, ಹೆಬ್ಬಾಳು ಮಡಿವಾಳ ಸಂಘದ ಅಧ್ಯಕ್ಷ ರಘು, ಕೀರಾಳು ಮಡಿವಾಳರ ಸಂಘದ ಅಧ್ಯಕ್ಷ ಮಹೇಶ್, ತಗಡೂರು ಮಡಿವಾಳರ ಸಂಘ ಅಧ್ಯಕ್ಷ ಮಹೇಶ್, ಹೆಬ್ಬಾಳು ಮಡಿ ವಾಳರ ಯುವ ವೇದಿಕೆ ವೆಂಕಟೇಶ್ ಗುಂಡಣ್ಣ, ಸುತ್ತೂರು ಮಡಿವಾಳ ಸಂಘದ ಅಧ್ಯಕ್ಷ ಬಸವರಾಜು, ಮೈಸೂರು ಜಿಲ್ಲಾ ಮಡಿವಾಳ ಮಹಿಳಾ ಮುಖಂಡರಾದ ಜಯಲಕ್ಷ್ಮಿ, ಕರ್ನಾಟಕ ರಾಜ್ಯ ಹಿಂದುಳಿದ ಮಹಿಳಾ ಘಟಕ ಅಧ್ಯಕ್ಷೆ ಕೋಮಲ, ಮೈಸೂರು ನಗರ ಮಡಿವಾಳ ಸಮಾಜ ಮುಖಂಡ ರಾಜೇಶ್ ಮತ್ತಿತರರಿದ್ದರು.

> ಆಧುನಿಕ ಜಗತ್ತಿನಲ್ಲಿ ನಾವು ಬಹಳ ವೇಗವಾಗಿ ಬದುಕುತ್ತಿದ್ದು, ಸಂಬಂಧಗಳನ್ನು ಕೆಡವಿ ಸಂಭ್ರಮಿಸುವ ಕಾಲಘಟ್ಟದಲ್ಲಿ ಮಾನವೀಯತೆ ಅವಶ್ಯವಾಗಿ ಬೇಕಿದೆ. ನಮ್ಮ ನಡುವೆ ಸಂಬಂಧಗಳನ್ನು ಕಟ್ಟುವ ಹಾಗೂ ಒಳಗೊಳ್ಳುವ ಕೆಲಸವಾಗಬೇಕಿದೆ. ಶಿಕ್ಷಣವೆಂದರೆ ಬೇರ್ಪಡಿಸುವುದಲ್ಲ, ಸೇರ್ಪಡಿಸುವುದಾಗಬೇಕು ಎಂಬುದನ್ನು ಕಲಿಸಿಕೊಟ್ಟಿದ್ದು 12ನೇ ಶತಮಾನದ ಶರಣ ಪರಂಪರೆ. ಕಟ್ಟುವಿಕೆಯಲ್ಲಿ ನಾವು ಸಂಭ್ರಮಿಸಬೇಕೇ ವಿನಃ ಕೆಡುವುದರಲ್ಲಿ ಅಲ್ಲ. ನಾವು ಬರೀ ಮನುಷ್ಯರಾಗಿ ಹುಟ್ಟಿಲ್ಲ, ಮನುಷ್ಯರಾಗಲು ಹುಟ್ಟಿದ್ದೇವೆ.
>
> - ಶಂಕರ್ ದೇವನೂರು, ಆಧ್ಯಾತ್ಮ ಚಿಂತಕ

# ಭಾರತಕ್ಕೆ ಐಸಿಸಿ ಚಾಂಪಿಯನ್ಸ್ ಟ್ರೋಫಿ: ಮೈಸೂರಲ್ಲಿ ವಿಜಯೋತ್ಸವ


ಮೈಸೂರು ಅಗ್ರಹಾರ ವೃತ್ತದಲ್ಲಿ ಕ್ರಿಕೆಟ್ ಪ್ರೇಮಿಗಳು ವಿಜಯೋತ್ಸವ ಆಚರಿಸಿದರು.

ಮೈಸೂರು, ಮಾ.9(ಎಸ್‌ಪಿಎನ್)– ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ಭಾರತ ತಂಡ ಜಯಗಳಿಸಿದ ಹಿನ್ನಲೆಯಲ್ಲಿ ಮೈಸೂರು ಅಗ್ರಹಾರ ವೃತ್ತದಲ್ಲಿ ಕ್ರಿಕೆಟ್ ಪ್ರೇಮಿಗಳು ಪಟಾಕಿ ಸಿಡಿಸಿ ಭಾನುವಾರ ರಾತ್ರಿ ವಿಜಯೋತ್ಸವ ಆಚರಿಸಿದರು.

ಭಾರತ ಧ್ವಜ ಹಿಡಿದು 'ಭಾರತ್ ಮಾತಾಕೀ ಜೈ', 'ವಂದೇ ಮಾತರಂ,' 'ಜೈ ಹಿಂದ್' ಘೋಷಣೆಗಳನ್ನು ಕೂಗಿ, ತಮ್ಮ ಸಂತೋಷ ಹಂಚಿಕೊಂಡು ಸಿಹಿ ವಿತರಿಸಿದರು.

ವಿಶೇಷ ಚೇತನ ಕ್ರೀಡಾಪಟು ಅಲೋಕ್ ಜೈನ್ ಮಾತನಾಡಿ, ಭಾರತ ಕ್ರಿಕೆಟ್ ತಂಡ 12 ವರ್ಷಗಳ ನಂತರ ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ತಮ್ಮದಾಗಿಸಿಕೊಂಡಿರುವುದರಿಂದ ಕೋಟ್ಯಾಂತರ ಭಾರತೀಯರು ಸಂತೋಷಪಟ್ಟಿದ್ದಾರೆ. ಇದರಿಂದ ಭಾರತದ ಕೀರ್ತಿಪತಾಕೆ ವಿಶ್ವಮಟ್ಟದಲ್ಲಿ ರಾರಾಜಿಸುತ್ತದೆ ಎಂದರು.

ಈ ವೇಳೆ ಕ್ರಿಕೆಟ್ ಪ್ರೇಮಿಗಳಾದ ಜೋಗಿ ಮಂಜು, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಕೆ.ಎಂ.ನಿಶಾಂತ್, ಮಹಾನ್ ಶ್ರೇಯಸ್, ಸುಚೇಂದ್ರ, ಅಮಿತ್ ಕುಮಾರ್, ಚಕ್ರಪಾಣಿ, ಕೆ.ಜೆ.ಕರಣ್ ಜೈನ್, ಸುಧೀಂದ್ರ, ನವೀನ್, ವಿಶ್ವನಾಥ್, ಹಾಗೂ ಇನ್ನಿತರ ಕ್ರಿಕೆಟ್ ಪ್ರೇಮಿಗಳು ಹಾಜರಿದ್ದರು.

## ಟ್ರೋಫಿ ಗೆಲುವಿಗಾಗಿ ವಿಶೇಷ ಪೂಜೆ


'ಐಸಿಸಿ ಚಾಂಪಿಯನ್ಸ್ ಟ್ರೋಫಿ' ಫೈನಲ್ ಪಂದ್ಯದಲ್ಲಿ ಭಾರತ ತಂಡ ಗೆಲುವು ಸಾಧಿಸಲೆಂದು ಕರ್ನಾಟಕ ಸೇನಾಪಡೆ ವತಿಯಿಂದ ಮೈಸೂರಿನ 101 ಗಣಪತಿ ದೇವಾಲಯದಲ್ಲಿ ಭಾನುವಾರ ಬೆಳಗ್ಗೆ ವಿಶೇಷ ಪೂಜೆ ಸಲ್ಲಿಸಿ, 101 ಇಡುಗಾಯಿ ಒಡೆಯಲಾಯಿತು. ಸಂಘಟನೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಹಿರಿಯ ಸಂಸ್ಕೃತಿ ಪೋಷಕ ಡಾ.ರಘುರಾಮ್ ವಾಜಪೇಯಿ, ಕಾವೇರಿ ಕ್ರಿಯಾಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಸುರೇಶ್ ಗೋಲ್ಡ್, ಪ್ರಭಾಕರ್, ಕುಮಾರ್ ಗೌಡ, ಪ್ರಜೀಶ್, ಪ್ರಭುಶಂಕರ್, ಕೇದಾರ್ ಲೋಕೇಶ್, ನೇಹಾ, ಕೃಷ್ಣಪ್ಪ, ಸಿಂಧುವಳ್ಳಿ ಶಿವಕುಮಾರ್, ಹನುಮಂತಯ್ಯ, ನಂದಕುಮಾರ್, ಚಂದ್ರಶೇಖರ್, ರವೀಶ್, ರವಿ ನಾಯಕ್, ವಿಷ್ಣು, ಮಹದೇವಸ್ವಾಮಿ, ಪರಿಸರ ಚಂದ್ರು, ಆನಂದ್ ಗೌಡ, ತ್ಯಾಗರಾಜ್, ಸುಬ್ಬೇಗೌಡ, ಜಗದೀಶ್ ಮತ್ತಿತರರು ಭಾಗವಹಿಸಿದ್ದರು.

### ಕುಲಭೂಷಣ್ ಜಾಧವ್ ಅಪಹರಣ ಪ್ರಕರಣ

# ಐಎಸ್‌ಐಗೆ ಸಹಾಯ ಮಾಡಿದಾತ ಅಪರಿಚಿತರ ಗುಂಡೇಟಿಗೆ ಬಲಿ


ಮುಫ್ತಿ ಶಾ ಕುಲಭೂಷಣ್

ಬಲೂಚಿಸ್ತಾನ್, ಮಾ.9– ಭಾರತೀಯ ನೌಕಾಪಡೆಯ ಮಾಜಿ ಅಧಿಕಾರಿ ಕುಲಭೂಷಣ್ ಜಾಧವ್ ಅವರನ್ನು ಇರಾನ್‌ನಿಂದ ಅಪಹರಿಸಲು ಪಾಕಿಸ್ತಾನದ ಐಎಸ್‌ಐಗೆ ಸಹಾಯ ಮಾಡಿದ ಆರೋಪ ಹೊತ್ತಿದ್ದ ಮುಫ್ತಿ ಶಾ ಮಿರ್ ಬಲೂಚಿಸ್ತಾನದ ಟರ್ಬತ್‌ನಲ್ಲಿ ಅಪರಿಚಿತ ಬಂದೂಕುಧಾರಿಗಳ ಗುಂಡಿಗೆ ಬಲಿಯಾಗಿದ್ದಾನೆ ಎಂದು ವರದಿಯಾಗಿದೆ.


ಮಾನವ ಕಳ್ಳಸಾಗಣೆಯಲ್ಲಿ ಭಾಗಿಯಾಗಿರುವ ಆರೋಪ ಹೊತ್ತಿರುವ ಮುಫ್ತಿ ಶಾ ಮಿರ್ ರಾತ್ರಿ ಪ್ರಾರ್ಥನೆ ಮುಗಿಸಿ ಸ್ಥಳೀಯ ಮಸೀದಿಯಿಂದ ಹೊರಡುತ್ತಿದ್ದಾಗ, ಬೈಕ್‌ನಲ್ಲಿ ಬಂದ ಅಪರಿಚಿತರು ನಿರಂತರ ಗುಂಡಿನ ದಾಳಿ ನಡೆಸಿದ್ದಾರೆ. ವರದಿಯ ಪ್ರಕಾರ, ಮುಫ್ತಿ ಶಾ ಮಿರ್‌ನನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಗಂಭೀರ ಗಾಯಗೊಂಡಿದ್ದ ಮುಫ್ತಿ ಅಷ್ಟರಲ್ಲಾಗಲೆ ಮೃತಪಟ್ಟಿದ್ದ.

ವಿದ್ವಾಂಸನ ಸೋಗಿನಲ್ಲಿದ್ದ ಮುಫ್ತಿ ಶಾ ಮಿರ್ ಮಾನವ ಮತ್ತು ಶಸ್ತ್ರಾಸ್ತ್ರ ಕಳ್ಳಸಾಗಣೆ ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದ. ಜತೆಗೆ ಇಸ್ಲಾಮಿಕ್ ಮೂಲಭೂತವಾದಿ ರಾಜಕೀಯ ಪಕ್ಷವಾದ ಜಮಿಯತ್ ಉಲೇಮಾ–ಇ–ಇಸ್ಲಾಂನ ಸದಸ್ಯನಾಗಿದ್ದ. ಕಳೆದ ವರ್ಷ ಮಿರ್ ಮೇಲೆ ಎರಡು ಬಾರಿ ಹತ್ಯೆಗೆ ದಾಳಿ ನಡೆದಿತ್ತು. ಆಗ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದ. ಮುಫ್ತಿಯಲ್ಲಿ ಕೃತ್ಯ ಎಸಗುತ್ತಿದ್ದ ಈತ ಐಎಸ್‌ಐ ನೇತೃತ್ವದ ಡೆತ್ ಸ್ಕ್ವಾಡ್‌ಗಳೊಂದಿಗೆ ಸಂಪರ್ಕ ಹೊಂದಿದ್ದ. ಬಲೂಚಿಸ್ತಾನದ ಹಲವಾರು ಯುವಕರ ಅಪಹರಣ ಮತ್ತು ವಿವಿಧ ಕಾನೂನು ಬಾಹಿರ ಹತ್ಯೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಬಲೂಚಿಸ್ತಾನದಲ್ಲಿ ಧಾರ್ಮಿಕ ಉಗ್ರವಾದವನ್ನು ಹರಡುವಲ್ಲಿಯೂ ಸಹ ತೊಡಗಿಸಿಕೊಂಡಿದ್ದ ಎಂದು ವರದಿಯಾಗಿದೆ.

2016ರ ಮಾರ್ಚ್‌ನಲ್ಲಿ ಜೈಶ್ ಅಲ್–ಅದ್ಲ್‌ನ ಮುಲ್ಲಾ ಒಮರ್ ಇರಾನಿ ನೇತೃತ್ವದ ಗುಂಪು ಭಾರತೀಯ ನೌಕಾಪಡೆಯ ಮಾಜಿ ಅಧಿಕಾರಿ ಕುಲಭೂಷಣ್ ಜಾಧವ್ ಅವರನ್ನು ಇರಾನ್–ಪಾಕಿಸ್ತಾನ ಗಡಿಯಿಂದ ಅಪಹರಿಸಿತ್ತು ಮುಫ್ತಿ ಶಾ ಮಿರ್ ಸೇರಿದಂತೆ ಹಲವು ಮಧ್ಯವರ್ತಿಗಳ ಮೂಲಕ ಪಾಕಿಸ್ತಾನ ಸೇನೆಗೆ ಹಸ್ತಾಂತರಿಸಲಾಗಿತ್ತು.

ನೌಕಾಪಡೆಯಿಂದ ಅಕಾಲಿಕ ನಿವೃತ್ತಿಯ ನಂತರ ಚಬಹಾರ್ (ಇರಾನ್) ನಲ್ಲಿ ವ್ಯಾಪಾರ ನಡೆಸುತ್ತಿದ್ದ ಕುಲಭೂಷಣ್ ಜಾಧವ್ ಅವರನ್ನು ಅಪಹರಿಸಿ ಪಾಕಿಸ್ತಾನದಲ್ಲಿ ಸುಳ್ಳು ಆರೋಪಗಳ ಮೇಲೆ ಬಂಧಿಸಲಾಯಿತು. 2016ರ ಮಾರ್ಚ್ 3 ರಂದು ಪಾಕಿಸ್ತಾನ–ಅಫ್ಘಾನಿಸ್ತಾನ ಗಡಿಯಲ್ಲಿರುವ ಬಲೂಚಿಸ್ತಾನದ ಚಮನ್ ಪ್ರದೇಶದಲ್ಲಿ ಅವರನ್ನು ಸೆರೆ ಹಿಡಿಯಲಾಯಿತು. 2017ರ ಏಪ್ರಿಲ್‌ನಲ್ಲಿ ಪಾಕಿಸ್ತಾನದ ಮಿಲಿಟರಿ ನ್ಯಾಯಾಲಯವು ಜಾಧವ್ ಅವರಿಗೆ ಗೂಢಚರ್ಯೆ ಮತ್ತು ವಿಧ್ವಂಸಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆಂದು ಆರೋಪಿಸಿ ಮರಣದಂಡನೆ ವಿಧಿಸಿತು. ಈ ತೀರ್ಪನ್ನು ಭಾರತ್ ಖಂಡಿಸಿತ್ತು. ಮರಣ ದಂಡನೆಯನ್ನು ಅಂತಾರಾಷ್ಟ್ರೀಯ ನ್ಯಾಯಾಲಯ ತಡೆಹಿಡಿದಿದೆ.

















# ವಕೀಲರಿಗೆ ಕಾನೂನು ಜ್ಞಾನದ ಜೊತೆಗೆ ವಾಕ್ ಚಾತುರ್ಯ, ಸಾಹಿತ್ಯ ಜ್ಞಾನವೂ ಅತ್ಯಗತ್ಯ

## ಹೈಕೋರ್ಟ್ ನ್ಯಾಯಮೂರ್ತಿಗಳಾದ ಕೃಷ್ಣ ದೀಕ್ಷಿತ್


ಕಾನೂನು ಚರ್ಚಾ ಸ್ಪರ್ಧೆ ಸಮಾರೋಪ ಸಮಾರಂಭದಲ್ಲಿ ಹೈಕೋರ್ಟ್ ನ್ಯಾಯಮೂರ್ತಿಗಳಾದ ಕೃಷ್ಣ ದೀಕ್ಷಿತ್ ಮಾತನಾಡಿದರು.

ಮೈಸೂರು, ಮಾ.9(ಎಂಕೆ)– ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು... ಎಂಬ ಗಾದೆ ಮಾತಿನಂತೆ ವಕೀಲರಿಗೆ ಕಾನೂನು ಜ್ಞಾನದ ಜೊತೆಗೆ ನ್ಯಾಯಾಧೀಶರ ಗಮನ ಸೆಳೆಯುವ ವಾಕ್ ಚಾತುರ್ಯ, ಸಾಹಿತ್ಯ ಜ್ಞಾನವೂ ಇರಬೇಕು ಎಂದು ಹೈಕೋರ್ಟ್ ನ್ಯಾಯಮೂರ್ತಿಗಳಾದ ಕೃಷ್ಣ ದೀಕ್ಷಿತ್ ಸಲಹೆ ನೀಡಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಚೆನ್ನೈನ ಸುರಾನಾ ಮತ್ತು ಸುರಾನಾ ಇಂಟರ್ನ್ಯಾಷನಲ್ ಅಟಾರ್ನಿಸ್ ವತಿಯಿಂದ ಆಯೋಜಿಸಿದ್ದ 22ನೇ ಸುರಾನ ಮತ್ತು ಸುರಾನ ರಾಷ್ಟ್ರೀಯ ಕಾರ್ಪೊರೇಟ್ ಕಾನೂನು ಚರ್ಚಾ ಸ್ಪರ್ಧೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಪರಿಣಾಮಕಾರಿ ವಾದ ಮಂಡನೆಗೆ ಉದಾಹರಣೆಗಳನ್ನು ನೀಡುವುದು ಒಂದು ಕಲೆಯಾಗಿದೆ ಎಂದರು.

ವಾದ–ಪ್ರತಿವಾದಗಳು ನಡೆಯುವಾಗ ನ್ಯಾಯಾಧೀಶರಿಗೆ ಎಲ್ಲವೂ ತಿಳಿದಿದೆ ಎಂದು ತಿಳಿದುಕೊಳ್ಳುವುದಕ್ಕಿಂತ ನ್ಯಾಯಾಧೀಶರಿಗೆ ಅರ್ಥವಾಗುವ ರೀತಿಯಲ್ಲಿ ಜನಪ್ರಿಯ ಸಾಹಿತಿಗಳ ಕವಿತೆಗಳು, ಋಗ್ವೇದದ ನುಡಿಗಟ್ಟುಗಳು, ಮಹಾಕಾವ್ಯಗಳ ಹಲವು ಉದಾಹರಣೆಗಳ ಸಹಿತ ವಾದ ಮಂಡಿಸುವ ಮೂಲಕ ನ್ಯಾಯಾಧೀಶರ ಗಮನವನ್ನು ಸೆಳೆಯಬಹುದಾಗಿದೆ. ಇದರಿಂದ ತೀರ್ಪು ಪ್ರಕಟಿಸಲು ಅನುಕೂಲವಾಗಲಿದೆ ಎಂದರು.

ವಕೀಲರು ಕಾನೂನು ಜ್ಞಾನದ ಜೊತೆಗೆ ಕವಿತೆಗಳ ಸಾರಾಂಶ ಅರಿತಿರಬೇಕು. ಇದಕ್ಕಾಗಿ ಸಾಹಿತ್ಯವನ್ನೂ ಓದಿಕೊಳ್ಳಬೇಕು. ವಾಕ್ ಚಾತುರ್ಯ ಬಹಳ ಮುಖ್ಯವಾಗಿದ್ದು, ಹೇಗೆ ವಾದ ಮಂಡಿಸುತ್ತೇವೆ ಎಂಬುದು ಕೂಡ ನ್ಯಾಯಾಧೀಶರ ಗಮನ ಸೆಳೆಯಲಿದೆ. ಅಲ್ಲದೆ ವಕೀಲರು ಗುಣಲಕ್ಷಣಗಳನ್ನು ಹೊಂದಿರುವುದು, ಆಕರ್ಷಕ ನಡೆ–ನುಡಿ ಹಾಗೂ ಇನ್ನಿತರೆ ಕೌಶಲ್ಯತೆಗಳನ್ನು ಹೊಂದಿರಬೇಕು ಎಂದು ತಿಳಿಹೇಳಿದರು.

ವಾದ ಮಂಡಿಸುವಾಗ ವಿಚಾರಗಳು ಪ್ರಸ್ತುತತೆ ಅನುಗುಣವಾಗಿರಬೇಕು. ಒಗಟುಗಳನ್ನು ಹೇಳಿದರೂ ಅವುಗಳು ಮಂಡಿಸುವ ವಾದಕ್ಕೆ ಅನುಗುಣವಾಗುವಂತಿರಬೇಕು. ಆಧಾರಗಳ ಜೊತೆಗೆ ಪ್ರಕರಣವನ್ನು ಅಧ್ಯಯನ ಮಾಡುವುದು ಕೂಡ ಅಗತ್ಯವಾಗಿರುತ್ತದೆ. ಹೃದಯದಿಂದ ನ್ಯಾಯಾಧೀಶರ ಕುತೂಹಲವನ್ನು ಕೆರಳಿಸುವಂತೆ ವಾದ ಮಂಡಿಸಬೇಕು ಎಂದು ಕಿವಿಮಾತು ಹೇಳಿದರು. ನಂತರ ಕಾನೂನು ಚರ್ಚಾ ಸ್ಪರ್ಧೆಯಲ್ಲಿ ಸ್ಕೂಲ್ ಆಫ್ ಲಾ ಕ್ರೈಸ್ಟ್ ಯುನಿವರ್ಸಿಟಿ ಪ್ರಥಮ, ಪಶ್ಚಿಮ ಬಂಗಾಳ ರಾಷ್ಟ್ರೀಯ ನ್ಯಾಯ ವಿಜ್ಞಾನ ವಿಶ್ವವಿದ್ಯಾಲಯ ದ್ವಿತೀಯ ಸ್ಥಾನ ಪಡೆಯಿತು.

ಹಿರಿಯ ವಕೀಲ ವಿ.ರಘುರಾಮ್, ಜೆಎಸ್‌ಎಸ್ ಕಾನೂನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಕೆ.ಎಸ್.ಸುರೇಶ್, ಸುರಾನಾ ಮತ್ತು ಸುರಾನಾ ಇಂಟರ್ನ್ಯಾಷನಲ್ ಅಟಾರ್ನಿಸ್ ಅಕಾಡೆಮಿ ಮುಖ್ಯಸ್ಥ ಪ್ರೀತಂ ಸುರಾನ, ಜೆಎಸ್‌ಎಸ್ ಲಾ ಕಾಲೇಜು ಪ್ರಾಂಶುಪಾಲ ಡಾ.ಎನ್.ವಾಣಿಶ್ರೀ ಮತ್ತಿತರರಿದ್ದರು.

# ಮಹಿಳೆಯರಿಗೆ ಸಮಾನ ಅವಕಾಶ, ಸಮಾನತೆ ಇದ್ದರೆ ದೇಶದ ಪ್ರಗತಿ ಉನ್ನತ ಸ್ಥಾನದಲ್ಲಿರುತ್ತೆ

## ವಾಣಿಜ್ಯ ತೆರಿಗೆ ಜಂಟಿ ಆಯುಕ್ತರಾದ ಎಸ್.ತೇಜಸ್ವಿನಿ ವಿಶ್ವಾಸ


ಕಲಾಧಾರೆ ಕಲ್ಚರಲ್ ಟ್ರಸ್ಟ್ ವತಿಯಿಂದ ಮೈಸೂರು ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತರಾದ ಎಸ್.ತೇಜಸ್ವಿನಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಮಾ.8(ಎಸ್‌ಪಿಎನ್)– ಮಹಿಳೆಯರಿಗೆ ಸಮಾನ ಅವಕಾಶ, ಸಮಾನತೆಗೆ ಇದ್ದರೆ ಆ ದೇಶದ ಪ್ರಗತಿ ಉನ್ನತ ಸ್ಥಾನದಲ್ಲಿರುತ್ತದೆ ಎಂದು ಮೈಸೂರು ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತರಾದ ಎಸ್.ತೇಜಸ್ವಿನಿ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದ ರಮಾ ಗೋವಿಂದ ರಂಗಮಂದಿರದಲ್ಲಿ ಕಲಾಧಾರೆ ಕಲ್ಚರಲ್ ಟ್ರಸ್ಟ್, ಮೈಸೂರು ಮಾಸ್ಟರ್ ಎನ್ ಬ್ಲಾಸ್ಟರ್ ಡ್ಯಾನ್ಸ್ ಗ್ರೂಪ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಕಲಾಧಾರೆ –2025, ವಿಶ್ವ ಮಹಿಳಾ ದಿನಾಚರಣೆ ಹಾಗೂ ಕಲಾ ಪೋತ್ಸಾಹಕರಿಗೆ ಗೌರವ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರಸ್ತುತ ಮಹಿಳೆಯರು ಎಲ್ಲಾ ರಂಗದಲ್ಲೂ ಸಾಧನೆ ಮಾಡುತ್ತಿದ್ದಾರೆ. ಕಲೆ, ಸಾಹಿತ್ಯ, ಕೈಗಾರಿಕೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳಾ ಸಾಧಕಿಯರ ಪಾಲು ದೊಡ್ಡದಿದೆ. ಹಾಗಾಗಿ ಮಹಿಳೆಯರಿಗೆ ಉತ್ತಮ ಅವಕಾಶ ದೊರಕಿಸಿ ಕೊಡಲು ಸರ್ಕಾರಗಳು ಮುಂದಾಗಬೇಕು. ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಪಾದಿಸಿದ ಮಹಿಳಾ ಕಾನೂನುಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಬೇಕು ಎಂದರು.

ಮೈಸೂರು ಸುಭೋಧ ಶಾಲೆ ಕಾರ್ಯದರ್ಶಿ ಆಶಾಪ್ರಭು, ಬೆಂಗಳೂರಿನ ಸಮಾಜಸೇವಕಿ ಜೆ.ಆರ್.ಕಮಲ, ಶಾರದಾ ವಿದ್ಯಾಸಂಸ್ಥೆಯ ಮುಖ್ಯಶಿಕ್ಷಕಿ ಕೆ.ಎ.ಭಾಗೀರಥಿ, ಸಂಸ್ಕೃತಿ ಸಂಘಟಕರಾದ ಎಂ.ಎಚ್.ಶಿವಮಣಿ, ಉದ್ಯಮಿ ಧನ್ಯ ಸತೇಂದ್ರಮೂರ್ತಿ, ಎಂ.ಎಸ್.ಉಮಾಪ್ರಕಾಶ್, ಸುನೀತಾ ಬಂಡೆ, ಪ್ರೇಮ ರಾಜಗೋಪಾಲ್, ಜಯಗೌಡ, ಶಾಂತ ಎಂ.ಗೌಡ, ಸುಮಾ, ಜೆ.ಭಾರತಿ ಅವರಿಗೆ ಕಲಾ ಪ್ರೋತ್ಸಾಹಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಗಾಯಕರಾದ ಲಕ್ಷ್ಮೀರಾಮ್, ನಾಗೇಶ್ ಕಂದೇಗಾಲ, ಅಮ್ಮರಾಮಚಂದ್ರ, ಧರ್ಮವೀರ್, ನಿತಿನ್ ರಾಜಾರಾಮಶಾಸ್ತ್ರಿ ಅವರಿಂದ ಜಾನಪದಗಾಯನ ನಡೆಸಿಕೊಟ್ಟರು. ಬೆಳಕು ಕಲಾಕುಟೀರ ಸಂಸ್ಥೆಯ ಎನ್.ಇಂದುಶ್ರೀ ಅವರಿಂದ ಭರತ್ಯನಾಟ್ಯ ಪ್ರದರ್ಶಿಸಿದರು.

ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಪತ್ರಕರ್ತರಾದ ರಶ್ಮಿಕೋಟಿ, ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಆರ್.ಹಸೀಬುಲ್ಲಾ ಬೇಗ್, ಉದ್ಯಮಿ ಕಮಲಾಕ್ಷಿ, ನೃಪತುಂಗಾ ಶಾಲೆ ಕಾರ್ಯದರ್ಶಿ ಸವಿತಾ ಪ.ಮಲ್ಲೇಶ್, ಡಾ.ಎಸ್.ಆನಂದ್, ಚಾಮರಾಜ್, ಡಾ.ನಾಗರಾಜ್ ವಿ.ಬೈರಿ, ಕಲಾಧಾರೆ ಕಲ್ಚರಲ್ ಟ್ರಸ್ಟ್ ಕಾರ್ಯದರ್ಶಿ ಜ್ಯೋತಿಚಾಮರಾಜ್, ನಿರ್ದೇಶಕರಾದ ಪುಷ್ಪಲತಾ ಗಣೇಶ್, ಸುಶೀಲಮ್ಮ, ಬಸಂತ್‌ಕುಮಾರ್ ಸೇರಿದಂತೆ ಇತರರಿದ್ದರು.





